بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 36

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

17 ಸೆಪ್ಟೆಂಬರ್ 2020, 17 ತಬೂಕ್ 1399 ಹಿಜರಿ ಶಮ್ಸಿ,
28 ಮುಹರ್ರಮ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ اللّٰهَ يَاْمُرُكُمْ
اَنْ تُؤَدُّوا الْاَمٰنٰتِ اِلٰٓى اَهْلِهَا
وَاِذَا حَكَمْتُمْ بَيْنَ النَّاسِ
اَنْ تَحْكُمُوْا بِالْعَدْلِ (النساء:59)

*(ಅನ್ನಿಸಾಅ್:59)*

ಅಂದರೆ: ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ ಜನರಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ತಕ್ಬೀರ್ ತಹರೀಮಾ ನಂತರ ಹಝ್ರತ್ ರಸೂಲುಲ್ಲಾಹ್(ಸ) ರವರು ಈ ದುಆ ಮಾಡುತ್ತಿದ್ದರು.**

* ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ತಕ್ಬೀರ್ ಹಾಗೂ ಖುರ್‌ಅನ್ ನಡುವೆ ಸ್ವಲ್ಪ ಮೌನ ವಹಿಸುತ್ತಿದ್ದರು. ಆಗ ನಾನು ಕೇಳಿದೆನು ಓ ರಸೂಲುಲ್ಲಾಹ್(ಸ) ಅವರೇ! ನನ್ನ ತಂದೆ ತಾಯಿ (ನಿಮ್ಮ ಮೇಲೆ) ಅರ್ಪಿತವಾಗಲಿ. ತಕ್‌ಬೀರ್ ಮತ್ತು ಖಿರ್‌ಅತ್ ನಡುವೆ ಪ್ರವಾದಿ(ಸ) ಮೌನ ವಹಿಸುತ್ತೀರಲ್ಲ. ಆಗ ತಾವು ಏನು ಪಠಿಸುತ್ತೀರಿ? ಅವರು ಹೇಳಿದರು ನಾನು ಪಠಿಸುವುದು. ಅಲ್ಲಾಹುಮ್ಮ ಬಾಯಿದ್ ಬೈನಿ ವ ಬೈನ ಖತಾಯಾಯ ಕಮಾಬಾಅದ್ತ ಬೈನಲ್ ಮಶ್ರಿಕಿ ವಲ್ ಮಗ್‌ರಿಬಿ ಅಲ್ಲಾಹುಮ್ಮ ನಖ್ಖಿನೀ ಮಿನಲ್ ಖತಾಯಾ ಕಮಾ ಯುನಖ್ಖಸ್ಸವಾಬುಲ್ ಅಬ್ಯಝು ಮಿನದ್ದನಸಿ ಅಲ್ಲಾಹುಮ್ಮಗ್‌ಸಿಲ್ ಖತಾಯಾಯ ಬಿಲ್‌ಮಾಯಿ ವಸ್ಸಲ್‌ಜಿ ವಲ್‌ಬರ್‌ದೆ (ಓ ದೇವನೇ ನನ್ನ ಮತ್ತು ನನ್ನ ತಪ್ಪುಗಳ ಮಧ್ಯೆ ಪೂರ್ವದಿಂದ ಪಶ್ಚಿಮಕ್ಕೆ ಇರುವಷ್ಟು ದೂರವನ್ನು ಸೃಷ್ಟಿಸು, ಓ ದೇವನೇ ನನ್ನ ತಪ್ಪುಗಳನ್ನು ಬಿಳಿ ವಸ್ತ್ರದ ಕೊಳಕು ಸ್ವಚ್ಛಗೊಳಿಸುವ ರೀತಿಯಲ್ಲಿ ಸ್ವಚ್ಛಗೊಳಿಸು, ದೇವನೇ ನನ್ನ ತಪ್ಪುಗಳನ್ನು ನೀರಿನಿಂದ, ಮಂಜಿನಿಂದ ಮತ್ತು ಆಲಿಕಲ್ಲುಗಳಿಂದ ತೊಡೆದುಹಾಕು.

* ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಮತ್ತು ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್(ರ) ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್" ಯಿಂದ ನಮಾಝುಿ ಪ್ರಾರಂಭಿಸುತ್ತಿದ್ದರು. (ಅಂದರೆ ಬಿಸ್ಮಿಲ್ಲಾಹ್ ಧ್ವನಿಸಹಿತ ಓದುತ್ತಿರಲಿಲ್ಲ.) **(ಸಹೀಹ್ ಬುಖಾರಿ, ಸಂಪುಟ 2, ಕಿತಾಬುಲ್ ಅಝಾನ್, ಬಾಬ್ ಮಾಯಖೂಲು ಬಅದತ್ತಕ್ಬೀರ್)**

**ಅಲ್ಲಾಹು ನನ್ನನ್ನು ನಿಯುಕ್ತಿಗೊಳಿಸಿ ಮಸೀಹ್ ಮೌಊದ್ ಹೆಸರಿನೊಂದಿಗೆ ಲೋಕಕ್ಕೆ ಕಳುಹಿಸಿರುವನು.**

**ನನ್ನನ್ನು ವಿರೋಧಿಸುವ ಜನರು ನನ್ನ ವಿರೋಧ ಮಾಡುತ್ತಿಲ್ಲ. ಬದಲು ಅಲ್ಲಾಹನನ್ನು ವಿರೋಧಿಸುತ್ತಿದ್ದಾರೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಅಲ್ಲಾಹನಿಂದ ನಿಯುಕ್ತಗೊಂಡವರ ವಿರೋಧ ಮಾಡುವುದರಿಂದ ವಿರೋಧಿಗಳ ವಿಶ್ವಾಸವು ಭಗ್ನಗೊಳ್ಳುತ್ತದೆ.

ನಮ್ಮ ವಿರೋಧಿಗಳ ಸ್ಥಿತಿ ನೋಡಿದರೆ ಅದರಿಂದ ಅವರ ವಿಶ್ವಾಸ ಭಗ್ನಗೊಳ್ಳುವ ಅಪಾಯವಿದೆ. ಏಕೆಂದರೆ ಅವರು ಒಬ್ಬ ಸಜ್ಜನನನ್ನು ದುರ್ಜನ ಮತ್ತು ಅಲ್ಲಾಹನಿಂದ ನಿಯುಕ್ತಗೊಂಡವನಿಗೆ ಸುಳ್ಳುಗಾರ ಎಂದು ಭಾವಿಸುತ್ತಾರೆ. ಆ ಮೂಲಕ ಅಲ್ಲಾಹನೊಂದಿಗೆ ಒಂದು ಯುದ್ಧದ ಸ್ಥಿತಿ ನಿರ್ಮಾಣವಾಗಿದೆ ಇದೀಗ ಸ್ಪಷ್ಟವಿದೆ. ಅಲ್ಲಾಹನು ನನಗೆ ನಿಯುಕ್ತಗೊಳಿಸಿ ಮಸೀಹ್ ಮೌಊದ್ ಹೆಸರಿನೊಂದಿಗೆ ಲೋಕಕ್ಕೆ ಕಳುಹಿಸಿರುವನು. ನನ್ನನ್ನು ವಿರೋಧಿಸುವವರು ನನ್ನ ವಿರೋಧ ಮಾಡುತ್ತಿಲ್ಲ. ಬದಲು ಅಲ್ಲಾಹನನ್ನು ವಿರೋಧಿಸುತ್ತಿದ್ದಾರೆ. ಏಕೆಂದರೆ ನಾನು ಈ ದಾವೆ ಮಾಡುವುದಕ್ಕಿಂತ ಮುಂಚೆ ಅವರಲ್ಲಿ ಹಲವರು ನನಗೆ ಗೌರವದಿಂದ ಕಾಣುತ್ತಿದ್ದರು. ತಮ್ಮ ಕೈಯಿಂದ ಲೋಟ ಹಿಡಿದು ವುಝು ಮಾಡಿಸುವುದಕ್ಕೆ ತನ್ನ ಪುಣ್ಯ ಮತ್ತು ಗೌರವ ಎಂದು ಭಾವಿಸುತ್ತಿದ್ದರು. ಮತ್ತು ಹಲವರು ಬೈಅತ್ ಮಾಡಲು ಹವಣಿಸುತ್ತಿದ್ದರು. ಆದರೆ ಅಲ್ಲಾಹನು ಹೆಸರಿಗೆ ನಿಯುಕ್ತಗೊಳಿಸಿ ಸಂಘಟನೆ ಪ್ರಾರಂಭಿಸಿದರೆ ಅವರೇ ನನ್ನನ್ನು ವಿರೋಧಿಸಲು ಮುಂದಾಗಿದ್ದಾರೆ. ಇದರಿಂದ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ ಅವರಿಗೆ ನನ್ನಿಂದ ವೈಯಕ್ತಿಕ ದ್ವೇಷವೇನೂ ಇರಲಿಲ್ಲ. ಬದಲು ಅಲ್ಲಾಹನೊಂದಿಗೆ ಅವರಿಗೆ ದ್ವೇಷವಿತ್ತು. ಅಲ್ಲಾಹನೊಂದಿಗೆ ಅವರಿಗೆ ನಿಜವಾದ ಸಂಬಂಧವಿರುತ್ತಿದ್ದರೆ ಅವರ ಧಾರ್ಮಿಕ ಮತ್ತು ಭಯಭಕ್ತಿ ಹಾಗೂ ಅಲ್ಲಾಹನ ದಾಹದ ಪ್ರೇರಣೆಯು ನನ್ನ ಘೋಷಣೆಯ ಮೇಲೆ ಲಬ್ಬೈಕ್ (ತಥಾಸ್ತು) ಎನ್ನುವುದಾಗಿತ್ತು ಮತ್ತು ಅಲ್ಲಾಹನ ಮುಂದೆ ಕೃತಜ್ಞಾಪೂರ್ವಕವಾಗಿ ಸಾಷ್ಟಾಂಗವಾಗಿ ನನ್ನನ್ನು ಆಲಂಗಿಸಬೇಕಾಗಿತ್ತು. ಆದರೆ ಇಲ್ಲಿ ಅವರು ತಮ್ಮ ಆಯುಧಗಳನ್ನು ಹಿಡಿದು ಹೊರ ಬಂದಿದ್ದಾರೆ ಮತ್ತು ಅವರು ಎಷ್ಟರಮಟ್ಟಿಗೆ ವಿರೋಧದಲ್ಲಿ ಮುಂದಾಗಿದ್ದಾರೆಂದರೆ ನನ್ನನ್ನು ಕಾಫಿರ್ (ಅವಿಶ್ವಾಸಿ) ಎನ್ನುತ್ತಿದ್ದಾರೆ. ಧರ್ಮಭ್ರಷ್ಟ, ದಜ್ಜಾಲ್ ಎಂದರು. ಅಕಟಾಕಟ! ಆ ಮೂಢರಿಗೆ ಇಷ್ಟು ತಿಳಿಯಲಿಲ್ಲ. ಯಾವ ವ್ಯಕ್ತಿಯು ಅಲ್ಲಾಹನಿಂದ "ಖುಲ್ ಇನ್ನಿ ಉಮಿರ್‌ತು ವ ಅನಾ ಅವ್ವಲುಲ್ ಮೌಮಿನೀನ್" ಮತ್ತು "ಅಂತ ಮಿನ್ನಿ ಬಿಮನ್‌ಝಿಲತಿ ತೌಹೀದಿ ವ ತಫ್‌ರೀದಿ" ಎಂಬ ಧ್ವನಿಗಳನ್ನು ಕೇಳುವವನಾಗಿದ್ದಾನೆ. ನಿಮ್ಮ ಅಪಶಬ್ದಗಳಿಗೆ, ಬೈಗಳಿಗೆ ಲೆಕ್ಕಿಸುವುದಾದರೂ ಹೇಗೆ. ವಿಷಾದದ ಸಂಗತಿ ಎಂದರೆ ಆ ಮೂರ್ಖರಿಗೆ ಇದು ಗೊತ್ತಿಲ್ಲ. ವಿಶ್ವಾಸ ಮತ್ತು ಅವಿಶ್ವಸದ ಸಂಬಂಧ ಲೌಕಿಕತೆಯಿಂದಿಲ್ಲ, ಬದಲು ಅಲ್ಲಾಹನೊಂದಿಗಿದೆ. ಅಲ್ಲಾಹನು ನನ್ನ ಮೋಮಿನ್ ಮತ್ತು ನಿಯುಕ್ತಿಯನ್ನು ದೃಢೀಕರಿಸುತ್ತಿದ್ದಾನೆ. ಹೀಗಿರುವಾಗ ನಿಮ್ಮ ದುರಾಚಾರದ ಬಗ್ಗೆ ಏಕೆ ಚಿಂತಿಸಲಿ? ಅಂತೂ ಆ ಮಾತುಗಳಿಂದ ಸ್ಪಷ್ಟವಾಗುವುದೇನೆಂದರೆ ಇವರು ನನಗೆ ವಿರೋಧವಾಗಿರಲಿಲ್ಲ. ಬದಲು ಅಲ್ಲಾಹನ ಮಾತುಗಳಿಗೆ ಅವರು ವಿರೋಧಿಸುತ್ತಿದ್ದಾರೆ. ಅದೇ ಕಾರಣದಿಂದ ಅಲ್ಲಾಹನಿಂದ ನಿಯುಕ್ತಗೊಂಡವರ ವಿರೋಧ ಮಾಡುವುದರಿಂದ ಅವರ ವಿಶ್ವಾಸ ಭಗ್ನಗೊಳ್ಳುತ್ತದೆ. ಈಗ ಸ್ಪಷ್ಟವಾಯಿತು, ನನ್ನ ವಿರೋಧಿಗಳು ಅಲ್ಲಾಹನನ್ನು ವಿರೋಧಿಸುತ್ತಿದ್ದಾರೆಂದು. ನಾನು ಬೆಳಕಿನತ್ತ ಬರುವುನಾದರೆ ಖಂಡಿತವಾಗಿಯೂ ಬೆಳಕಿನತ್ತ ತಲುಪುವೆನು. ಏಕೆಂದರೆ ಅಲ್ಲಾಹನ ಅಸಂಖ್ಯಾತ ದೃಷ್ಟಾಂತಗಳು ನನ್ನ ಪರವಾಗಿ ಪ್ರಕಟವಾಗಿವೆ ಮತ್ತು ಪ್ರಕಟವಾಗುತ್ತಿವೆ. ವರ್ಷಧಾರೆಯ ರೀತಿ ಆ ದೃಷ್ಟಾಂತಗಳು ಅವತರಿಸುತ್ತಿವೆ, ಹೀಗಿರುವಾಗ ನಿಶ್ಚಿತವಾಗಿಯೂ ನನ್ನ ವಿರೋಧಿಗಳು ಕತ್ತಲೆಡೆ ಹೋಗುತ್ತಿದ್ದಾರೆ ಬೆಳಕು ಮತ್ತು ಪ್ರಕಾಶವು ರೂಹುಲ್–ಖುದುಸ್ (ದೇವದೂತ) ತರುವನು ಮತ್ತು ಅಂಧಕಾರವು ಶೈತಾನನನ್ನು ಸಮೀಪಿಸುವನು. ಹೀಗೆ ಅಲ್ಲಾಹನ ಪ್ರಿಯಕರ ವಿರೋಧವು ವಿಶ್ವಾಸವನ್ನು ಭಗ್ನಗೊಳಿಸುತ್ತದೆ.

**(ಮಲ್ಫೂಝಾತ್ ಸಂಪುಟ 1, ಪುಟ 175 ಮುದ್ರಣ ಖಾದಿಯಾನ್ 2018)**

**ಮಸೀದಿಗಳನ್ನು ಗಲಭೆ ಪಿತೂರಿಯ ಸ್ಥಾನವಾಗಿಸುವುದು ಒಂದು ಅಪಾಯಕರ ದೌರ್ಜನ್ಯವಾಗಿದೆ. ಅದನ್ನು ಇಸ್ಲಾಮ್ ಎಂದೂ ಅನುಮತಿ ನೀಡುವುದಿಲ್ಲ.**

ಹಝ್ರತ್ ಮುಸ್ಲಿಹ್ ಮೌಊದ್(ರ) **"ಲಹುಮ್ ಫಿದ್ದುನಿಯಾ ಖಿಝ್‌ಯೂಂ ವಲಹುಮ್ ಫಿಲ್–ಆಖಿರತಿ ಅಝಾಬುನ್ ಅಝೀಮ್"** (ಅಲ್‌ಬಖರ–115) ವ್ಯಾಖ್ಯಾನ(ತಫ್ಸೀರ್) ನಲ್ಲಿ ಹೀಗೆ ಹೇಳುತ್ತಾರೆ:

ಏಕೆಂದರೆ ಈ ಜನರು ನಮ್ಮ ಮನೆಯನ್ನು ನಾಶ ಮಾಡಬಯಸುತ್ತಾರೆ. ಆದುದರಿಂದ ನಾವು ಸಹ ಅವರ ಮನೆಗಳನ್ನು ನಾಶಗೊಳಿಸುವೆವು. ಅವರು ಇಹಲೋಕದಲ್ಲೂ ಅಪಮಾನಿತರಾಗುವರು ಹಾಗೂ ಅಂತ್ಯ ದಿನದಂದು ಸಹ ಅವರಿಗೆ ಘೋರವಾದ ಶಿಕ್ಷೆ ಲಭಿಸುವುದು. ಏಕೆಂದರೆ ಸ್ವರ್ಗ ಎಂಬುದು ಅಲ್ಲಾಹನ ಮನೆಯಾಗಿದೆ.

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِي الْعَالَمِ ✿ شَرَّ السُّمُوْمِ عَدَاوَةُ الصُّلَحَاءِ

## ಲಾಲಾ ಮುರಳಿಧರ ಸಾಹಿಬ್, ಆರ್ಯ ಸಮಾಜ, ಹೋಶಿಯಾರ್‌ಪುರ ಅವರಿಗೆ ಒಂದು ನೂರು ರೂಪಾಯಿಗಳ ಪಂಥಾಹ್ವಾನ: ಲಾಲಾ ಮರಳಿದರ್, ಲಾಲಾ ಜೀವನದಾಸ್, ಮುನ್ಶಿ ಇಂದರ್‌ಮನ್ ಸಾಹೇಬರುಗಳಿಗೆ ಮುಬಾಹಿಲ (ಪ್ರಾರ್ಥನಾ ಸಮರ) ಮಾಡಲು ಆಹ್ವಾನ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮುಬಾಹಿಲಕ್ಕಿಂತ ಮುಂಚೆ ಲಿಖಿತ ಸ್ಪರ್ಧೆಗೋಸ್ಕರ ಆಹ್ವಾನಿಸಿದ್ದರು. ಯಾರೊಬ್ಬ ಅರ್ಯನು ವೇದ ಶಿಕ್ಷಣವನ್ನು ಪವಿತ್ರ ಖುರ್‌ಆನ್‌ಗಿಂತ ಉತ್ತಮ ಎಂದು ಭಾವಿಸುವುದಾದರೆ ನಮ್ಮೊಡನೆ ಸ್ಪರ್ಧಿಸಬಹುದು. ಅವರು ಅದಕ್ಕಾಗಿ ಮೂರು ತಿಂಗಳ ಸಮಯವನ್ನು ನೀಡಿದ್ದರು. ಮತ್ತು ಒಂದಿಷ್ಟು ಬಹುಮಾನ ನೀಡುವ ವಾಗ್ದಾನ ಮಾಡಿದ್ದರು. ಅವರು ಹೇಳಿದರು: ಈ ಅವಧಿಯಲ್ಲಿ ಯಾರೂ ಸಹ ಸ್ಪರ್ಧಿಸಲು ಬರದಿದ್ದರೂ ಮುಬಾಹಲದ ಅವಶ್ಯಕತೆ ಇಲ್ಲ. ಶರತ್ತೇನೆಂದರೆ ಅವರು ಬೈಗುಳಗಳಿಂದ ದೂರವಿರಬೇಕು. ಆದರೆ ಅವರು ಯಾವ ಸ್ಪರ್ಧೆಗೂ ಬರಲಿಲ್ಲ ಮತ್ತು ಬೈಗುಳಗಳಿಂದಲೂ ದೂರ ಸರಿಯಲಿಲ್ಲ ಎಂದಾದರೆ ಮುಬಾಹಲ ಅನಿವಾರ್ಯವಾಗಿರುವುದು. ಈ ಬಗ್ಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ. ಅವರು ಹೇಳಿದರು. ವೇದಗಳ ಈ ಶಿಕ್ಷಣ ಅಲ್ಲಾಹನು (ದೇವನು) ಆತ್ಮಗಳ ಮತ್ತು ಜಡ ವಸ್ತುಗಳ ಸೃಷ್ಟಿಕರ್ತನಲ್ಲ. ಅವನಂತೆಯೇ ಎಲ್ಲ ವಸ್ತುಗಳು ಸ್ವಯಂ ಅಸ್ತಿತ್ವಕ್ಕೆ ಬಂದಿವೆ ಮತ್ತು ಅನಾದಿಯಾಗಿವೆ. ಅದು ಅನಿವಾರ್ಯವಾಗಿದೆ. ಶಾಶ್ವತವಾಗಿ ಯಾರಿಗೂ ಮುಕ್ತಿ ದೊರೆಯುವುದಿಲ್ಲ. ಅದರೆ ಎಲ್ಲ ದುಷ್ಪರಿಣಾಮಗಳ ಬಗ್ಗೆ ನಾವು ಈ ಪತ್ರಿಕೆಯಲ್ಲಿ ವಿವರಿಸಿದ್ದೇವು. ಅದರ ರದ್ಧತಿಗಿರುವ ಪುರಾವೆಗಳು ತಮ್ಮ ಕೈಯಿಂದ ಬರೆದಿದ್ದೆವೆ. ಯಾರಾದರು ಆರ್ಯನು ನಮ್ಮ ಈ ಪತ್ರಿಕೆಯನ್ನು ಪೂರ್ಣವಾಗಿ ಓದಿದ ನಂತರವು ತಮ್ಮ ಹಟ ಬಿಡಲಿಲ್ಲವಾದರೆ ಮತ್ತು ತಮ್ಮ ಅವಾಚ್ಯ ಶಬ್ದಗಳನ್ನು ಉಪಯೋಗಿಸುವುದು ಬಿಡಲಿಲ್ಲವಾದರೆ ನಾವು ದೇವನಿಂದ (ಅಲ್ಲಾಹನಿಂದ) ಸಂಕೇತ ಪಡೆದು ಅವರನ್ನು ಮುಬಾಹಲಕ್ಕೆ ಕರೆಯುತ್ತಿದ್ದೇವೆ. (ಸುರ್ಮ ಚಶ್ಮಾ ಆರ್ಯ ರೂಹಾನಿ ಖಝಾಯೀನ್, ಸಂಪುಟ–2, ಪುಟ–279–280)

ಪವಿತ್ರ ಖುರ್‌ಆನ್‌ನ ಶಿಕ್ಷಣ ವೇದ ಶಿಕ್ಷಣದ ಜೊತೆಗೆ ಸ್ಪರ್ಧಿಸಲು ಅತ್ಯಂತ ಗೌರವಯುತ ಪಂಥಾಹ್ವಾನ ನೀಡುತ್ತಾ ಸಯ್ಯದ್‌ನಾ ಹಝ್ರತ್ ಮಸೀಹ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು. ವೇದಗಳು ಆಧ್ಯಾತ್ಮಿಕ ಅನುಗ್ರಹಗಳ ಮತ್ತು ದೇವ ಸಾನಿಧ್ಯದವರೆಗೆ ತಲುಪಿಸಲು ವಿಫಲವಾಗಿವೆ, ವಿವಶವಾಗಿವೆ. ಹೇಗೆ ವಿಫಲರಾಗದಿರಲು ಸಾಧ್ಯ? ಮತ್ತು ವಿವಶರಾಗದಿರಲು ಸಾಧ್ಯ. ದೇವನ ಅನುಗ್ರಹಗಳು, ದೇವ ಸಾನಿಧ್ಯ, ದೇವಜ್ಞಾನ, ಸತ್ಕರ್ಮಗಳ ಅವಶ್ಯಕತೆ, ನೀತಿ ಚರಿತ್ರೆ, ಆತ್ಮ ಶುದ್ಧಿ, ಪಾಪಕರ್ಮಗಳಿಂದ ಮುಕ್ತಿ ಎಲ್ಲ ಮಾರ್ಗಗಳ ವಿವರಣೆಯಿಂದ ವೇದಗಳು ವಂಚಿತವಾಗಿವೆ. ಯಾವೊಬ್ಬ ಆರ್ಯನಾದರೂ ನಮ್ಮ ಎದುರಾಗಿ ಬಂದು ಈ ಕಾರ್ಯಗಳ ಬಗ್ಗೆ ವೇದಗಳನ್ನು ಪವಿತ್ರ ಖುರ್‌ಆನ್‌ನ ಎದುರಾಗಿ ತಮ್ಮ ಮಹಾನತೆ ತೋರಿಸಬಹುದೇ? ಯಾರಾದರೂ ಜೀವಂತರಾಗಿದ್ದರೆ ತೋರಿಸಲಿ, ನಮಗೆ ತಿಳಿಸಲಿ, ಯಾವ ಸಮಸ್ಯೆ ಬಗ್ಗೆಯಾಗಲಿ, ಧರ್ಮ ಸಮಸ್ಯೆಗಳ ಬಗ್ಗೆ ಆಗಿರಲಿ ನಮಗೆ ತಿಳಿಸಲಿ. ನಾವು ಬಂದು ಪತ್ರಿಕೆಗಳಲ್ಲಿ ವಿಧಿವತ್ತಾಗಿ ವಚನಗಳ ಮೂಲಕ ಸಾಕ್ಷ್ಯಗಳ ಮೂಲಕ ಖುರ್‌ಆನ್‌ನಿಂದ ಸಾದರಪಡಿಸಿ ಪ್ರಕಟ ಪಡಿಸುವೆವು. ಅದೇ ರೀತಿಯಲ್ಲಿ ವೇದಗಳ ದಿವ್ಯಜ್ಞಾನ ಮತ್ತು ಅದರ ತತ್ವಜ್ಞಾನ ತೋರಿಸಿಕೊಡಲಿ, ಈ ಕಷ್ಟ ಸಹಿಸುವ ಬದಲಿಗಾಗಿ ನಾವು ಒಂದಿಷ್ಟು ಬಹುಮಾನ ನೀಡುವೆವು. ಅದನ್ನು ಯಾರಾದರೂ ಮೂರನೆಯವನಲ್ಲಿ ಜಮಾ ಮಾಡುವೆವು. ಗೆದ್ದ ಪಕ್ಷದಲ್ಲಿ ಅದನ್ನು ನೀಡುವೆವು. (ಸುರ್ಮ ಚಶ್ಮಾ ಆರ್ಯ ರೂಹಾನಿ ಖಝಾಯೀನ್, ಸಂಪುಟ–2, ಪುಟ 295)

ಈಗ ನಾವು ಕೆಳಗೆ ಮುಬಾಹಲದ ಗೌರವಯುತ ಪಂಥಾಹ್ವಾನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಶಬ್ಧಗಳಲ್ಲಿ ಪ್ರಸ್ತುತ ಪಡಿಸುತ್ತೇವೆ. ಮುಬಾಹಲಕ್ಕಾಗಿ ಪ್ರಪ್ರಥಮವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಲಾಲಾ ಮರಳಿಧರ್ ಸಾಹಿಬ್ ಕಲಾ ಶಿಕ್ಷಕರು, ಹೋಶಿಯಾರ್‌ಪುರದ ಆರ್ಯ ಸಮಾಜದ ಸದಸ್ಯರು ಅವರಿಗೆ ಕರೆಕೊಟ್ಟರು. ಅವರು ಹೋಶಿಯಾರ್‌ಪುರದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಮುಂದೆ ಹಾಜರಾಗಿ ಚರ್ಚಾಕೂಟ ಏರ್ಪಡಿಸಲು ಮನವಿ ಮಾಡಿಕೊಂಡಿದ್ದರು. ಅದರ ಪರಿಣಾಮವಾಗಿ ಸುರ್ಮಾ ಚಶ್ಮ ಆರ್ಯ ದಂತಹ ಅದ್ವಿತೀಯ ಗ್ರಂಥ ನಮ್ಮ ಕೈಸೇರಿತು. ಈ ನೆಲೆಯಲ್ಲಿ ನಾವು ಲಾಲಾ ಸಾಹೇಬರಿಗೆ ಕೃತಜ್ಞರಾಗಿದ್ದೇವೆ. ಮುಬಾಹಲಕ್ಕೆ ಎದುರಾಗಿ ಬರುವವರು ಹೇಗಿರಬೇಕು. ಅದರ ಶರತ್ತುಗಳು ಮತ್ತು ನಿರ್ಣಯದ ವಿಧಿ ವಿಧಾನಗಳನ್ನು ವಿವರಿಸುತ್ತಾ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು.

ಜ್ಞಾಪಕವಿರಲಿ ಯಾವ ವ್ಯಕ್ತಿ ತನ್ನನ್ನು ತಾನು ಸತ್ಯದಿಂದ ದೂರವಾಗುವನೋ ಅವನಿಗೆ ಮೌಊನ್ (ದಿಕ್ಕಾರಿ) ಎನ್ನುತ್ತೇವೆ. ಮತ್ತು ಯಾರು ಸತ್ಯವನ್ನು ಪಡೆಯಲು ತನ್ನ ಆತ್ಮವನ್ನು ತಾನಾಗಿ ರಕ್ಷಿಸಿಕೊಳ್ಳುವನೋ ಅವನಿಗೆ "ಮಖ್‌ರೂನ್" (ವಿಶ್ವಾಸಿ) ಎನ್ನುತ್ತಾರೆ. ಈಗ ನಮ್ಮ ಎದುರಿನಲ್ಲಿ ಮಖ್‌ರೂನ್ ಅಥವಾ ದಿಕ್ಕಾರಿ ಆಗುವುದು ಅವರ ಕೈಯಲ್ಲಿದೆ. ಯಾರಾದರೂ ಶಿಸ್ತುಬದ್ಧ ಅರ್ಯ, ಅವನು ವೇದಗಳನ್ನು ತಿಳಿದವನಾಗಿರಬೇಕು. ವೇದಗಳ ಮತ್ತು ಪವಿತ್ರ ಖುರ್‌ಆನ್‌ಗೆ ತುಲನೆ ಮಾಡಿ ಹೇಳುವ ನಿಯತ್ತಿನಿಂದ ಮೂರು ತಿಂಗಳ ಅವಧಿಯಲ್ಲಿ ಮೈದಾನಕ್ಕೆ ಬಾರದಿದ್ದರೆ ಮತ್ತು ನಮ್ಮ ಕಡೆಯಿಂದ ವಚನಗಳ ಸಾಕ್ಷ್ಯಗಳೊಂದಿಗೆ ಪವಿತ್ರ ಖುರಆನ್ ಮೂಲಕ ಬರೆದದ್ದು, ವೇದಗಳ ಕೃತಿಗಳ ಮೂಲಕ ಅದನ್ನು ರದ್ದುಗೊಳಿಸಿ ತೋರಿಸಿಕೊಟ್ಟರೆ ಅವನು ವೇದ ಮತ್ತು ವೇದ ಅನುಯಾಯಿಗಳ ಗೌರವ ಉಳಿಸಿಕೊಂಡಿದ್ದಾನೆ ಎಂದರ್ಥ. ಅವನು ಮಖ್‌ರೂನ್ ಎಂಬಂತಹ ಗೌರವ ಪದಕ್ಕೆ ಅರ್ಹನು. ಆದರೆ ಈ ಅವಧಿಯಲ್ಲಿ ಯಾವ ಪಂಡಿತನು ಆಗ್ರಹಿಸಲಿಲ್ಲವಾದರೆ ಮಖ್‌ರೂನ್ ಎಂಬ ಪದಕ್ಕೆ ವಿರುದ್ಧವಾಗಿರುವ ಪದ ತಮಗಾಗಿ ಸ್ವೀಕರಿಸಿಕೊಂಡಂತೆ ಆಗುವುದು. ಅದಾಗ್ಯೂ ಅವರು ಒಪ್ಪಲಿಲ್ಲ ಎಂದಾದರೆ ಅಂತಿಮವಾಗಿ ಮುಬಾಹಲವಿದೆ. ಅದರೆಡೆಗೆ ಮುಬಾಹಲಕ್ಕಾಗಿ ವೇದಗಳ ಪಂಡಿತನೇ ಆಗಿರಬೇಕು ಎಂಬುದೇನಿಲ್ಲ. ನೀತಿವಂತನೂ ಮತ್ತು ಗೌರವಯುತನು ಮತ್ತು ಹೆಸರುವಾಸಿ ಆರ್ಯನಾಗಿರುವುದು ಅವಶ್ಯವಾಗಿದೆ. ಏಕೆಂದರೆ ಅವನ ಪ್ರಭಾವ ಇತರರ ಮೇಲೂ ಆಗುತ್ತದೆ. ಆದುದರಿಂದ ಮೊಟ್ಟ ಮೊದಲು ಲಾಲಾ ಮುರಳಿಧರ ಸಾಹಿಬ್, ಮತ್ತು ಲಾಲಾ ಜೀವನ್‌ದಾಸ್ ಸಾಹಿಬ್, ಕಾರ್ಯದರ್ಶಿ ಆರ್ಯ ಸಮಾಜ ಲಾಹೋರ್ ಮತ್ತು ಮುನ್ಶಿ ಇಂದರ್‌ಮನ್ ಸಾಹಿಬ್ ಮುರಾದಾಬಾದಿ ಹಾಗೂ ಬೇರೆ ಯಾರಾದರೂ ಆರ್ಯರಲ್ಲಿ ಗೌರವಾನ್ವಿತರಾದವರು ಒಪ್ಪಿಕೊಂಡರೆ ಸಂಬೋಧಿಸಲಾಗುವುದು. ನಾವು ಆ ಪತ್ರಿಕೆಯಲ್ಲಿ ವೇದಗಳ ಕುರಿತು ಏನೆಲ್ಲ ಬರೆದಿದ್ದೇವೆ. ವಾಸ್ತವವಾಗಿ ಅದನ್ನು ಸರಿ ಮತ್ತು ಸತ್ಯ ಎಂದು ಭಾವಿಸುವವರಾದರೆ ಅದರ ವಿರುದ್ಧವಾಗಿ ಪವಿತ್ರ ಖುರ್‌ಆನ್‌ನ ತತ್ವಗಳು ಹಾಗೂ ಶಿಕ್ಷಣಗಳು ಅದೆ ಪತ್ರಿಕೆಯಲ್ಲಿ ವಿವರಿಸಲಾಗಿದೆ. ಮಿಥ್ಯ ಮತ್ತು ನಿರಾಧಾರ ಎಂದು ಭಾವಿಸುವುದಾದರೆ ಆಗ ಈ ವಿಷಯದಲ್ಲಿ ನಮ್ಮೊಡನೆ ಮುಬಾಹಲ ಮಾಡಿಕೊಳ್ಳಲಿ. ಇಬ್ಬರಿಗೆ ಸೂಕ್ತವಿರುವಂತಹ ಸ್ಥಳ ಮತ್ತು ದಿನಾಂಕ ನಿಗದಿಗೊಳಿಸಲಿ. ಅಲ್ಲಿ ನಾವು ಸೇರುವೆವು ಪ್ರತಿಯೊಂದು ತಂಡ ಸಾರ್ವಜನಿಕರಲ್ಲಿ ಎದ್ದು ನಿಂತು ಈ ಮುಬಾಹಲ ವಿಷಯದ ಬಗ್ಗೆ ಈ ಪತ್ರಿಕೆಯ ಅಂತ್ಯದಲ್ಲಿ ಮಾದರಿಯಾಗಿ ಬರೆಯಲಾದ ನುಡಿಗಳನ್ನು ಇಬ್ಬರೂ ಮೂರು ಸಲ ಆಣೆ ಮಾಡಿ ಸಾಕ್ಷ್ಯ ವಹಿಸಬೇಕು. ನಾವು ವಾಸ್ತವವಾಗಿಯೂ ಅದನ್ನು ಸತ್ಯವೆಂದು ನಂಬುತ್ತೇವೆ. ನಮ್ಮ ಹೇಳಿಕೆ ಸರಿಯಿಲ್ಲ ಎಂದಾದರೆ ನಮ್ಮ ಮೇಲೆ ಇದೇ ಲೋಕದಲ್ಲಿ ಶಾಪ ಎರಗಲಿ. ಶಿಕ್ಷೆ ದೊರೆಯಲಿ. ಒಟ್ಟಿನಲ್ಲಿ ಉಭಯತ್ರರ ಮುಬಾಹಲ ಪತ್ರದಲ್ಲಿ ಏನು ಬರೆಯಲಾಗಿದೆಯೋ ಅವು ಉಭಯತ್ರರ ವಿಶ್ವಾಸಕ್ಕೆ ಸಂಬಂಧಿಸಿದ್ದಾಗಿದೆ. ಸುಳ್ಳು ಹೇಳುವ ಪಕ್ಷದಲ್ಲಿ ಶಿಕ್ಷೆ ಅನುಭವಿಸುವ ಶರತ್ತನ್ನು ದೃಢಿಕರಿಸಬೇಕಾಗಿದೆ. ದೈವಿಕ ದೃಷ್ಟಾಂತಕ್ಕಾಗಿ ಒಂದು ವರ್ಷದ ಅವಧಿ ನಿಗದಿಪಡಿಸಲಾಗಿದೆ.

ಒಂದು ವರ್ಷ ಕಳೆದ ನಂತರ ಈ ಪತ್ರಿಕೆಯ ಲೇಖಕರಾದ ನನ್ನ ಮೇಲೆ ಯಾವುದೇ ಶಿಕ್ಷೆ ಅಥವಾ ಶಾಪ ಅವತೀರ್ಣವಾದರೆ ಅಥವಾ ಪ್ರತಿ ಸ್ಪರ್ಧಿಯ ಮೇಲೆ ಅವತೀರ್ಣವಾಗಲಿಲ್ಲ ಎಂದಾದರೆ ಈ ಎರಡೂ ರೂಪದಲ್ಲೂ ವಿನೀತನು ಐದು ನೂರು ರೂಪಾಯಿಗಳನ್ನು ದಂಡ ರೂಪದಲ್ಲಿ ಕಟ್ಟುವೆನು.

ನಾವು ವಿಜಯಿಯಾದರೆ ನಿಮಗೆ ಯಾವ ಶರತ್ತು ಒಡ್ಡುವುದಿಲ್ಲ. ಏಕೆಂದರೆ ಶರತ್ತಿನ ಪ್ರಕಾರ ಪ್ರಾರ್ಥನೆಯ ಸ್ವೀಕೃತಿಯ ಪ್ರಭಾವ ಬಹಿರಂಗಗೊಂಡರೆ ಸಾಕು.

ಮುಬಾಹಲ ಸಮಯಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವತಿಯಿಂದ ಘೋಷಿಸಲ್ಪಡುವ ವಿಷಯ:

ದೇವಸ್ತುತಿಯ ನಂತರ ನಾನು ಹಝ್ರತ್ "ಖುದಾವಂದೇವ ಇಝ್ಝ ಇಸ್ಮುಹು" (ಪ್ರತಾಪ ಶಾಲಿಯಾದ ಅಲ್ಲಾಹನ ನಾಮದಿಂದ) ಆಣೆ ಹಾಕುವ ಮೂಲಕ ಹೇಳುತ್ತಾನೆ. ನಾನು ತನ್ನ ವಯಸ್ಸಿನ ಅಧಿಕವಾದ ಭಾಗ ಧರ್ಮ ಶೋಧನೆಯಲ್ಲಿ ವ್ಯಯ ಮಾಡಿ ಈ ನಿರ್ಣಯಕ್ಕೆ ಬಂದಿರುತ್ತೇನೆ. ಲೋಕದಲ್ಲಿ ಸತ್ಯವಾದ ಮತ್ತು ಅಲ್ಲಾಹನ ವತಿಯಿಂದ ಬಂದ ಧರ್ಮ ಇಸ್ಲಾಮ್ ಧರ್ಮವಾಗಿದೆ. ಹಝ್ರತ್ ಸಯ್ಯದ್‌ನಾ ಮೌಲಾನ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಸಲೈಹಿವಸಲ್ಲಮ್ ಅಲ್ಲಾಹನ ಸಂದೇಶವಾಹಕರು ಮತ್ತು ಎಲ್ಲಾ ಪ್ರವಾದಿಗಳಲ್ಲಿ ಶ್ರೇಷ್ಠರಾಗಿದ್ದಾರೆ. ಹಾಗೆಯೇ ಪವಿತ್ರ ಖುರ್‌ಆನ್ ಅಲ್ಲಾಹನ ಪವಿತ್ರ ಪರಿಪೂರ್ಣ ಗ್ರಂಥವಾಗಿದೆ. ಅದು ಎಲ್ಲಾ ಪವಿತ್ರ ಸಾಕ್ಷ್ಯಗಳನ್ನು ಸತ್ಯಗಳನ್ನು ಒಳಗೊಂಡಿದೆ. ಈ ಪವಿತ್ರ ಗ್ರಂಥದಲ್ಲಿ ಏನೆಲ್ಲ ವಿವರಿಸಲಾಗಿದೆಯೋ, ಅದು ಅಲ್ಲಾಹನು ತನ್ನ ಸ್ವಂತ ಅಸ್ತಿತ್ವದ ಮೂಲಕ ಅನಾದಿ ಕಾಲದಿಂದಲೂ ಸರ್ವ ಸಾಮರ್ಥ್ಯ ಉಳ್ಳವನು ಮತ್ತು ಇತರ ಎಲ್ಲ ಪವಿತ್ರ ಗುಣಗಳಲ್ಲಿ ಏಕಸಾಮ್ಯನು ಅವನಿಗೆ ಯಾರೂ ಭಾಗಿದಾರರಿಲ್ಲ, ಮತ್ತು ಎಲ್ಲಾ ಸೃಷ್ಟಿಯ ಅವನೇ ಸೃಷ್ಟಿಕರ್ತನು. ಎಲ್ಲ ಆತ್ಮಗಳ ಹಾಗೂ ಶರೀರಗಳ ಸೃಷ್ಟಿಕರ್ತ ಅವನಾಗಿದ್ದಾನೆ. ಸಾತ್ವಿಕರಿಗೆ ಮತ್ತು ನಿಷ್ಠರಿಗೆ ಹಾಗೂ ವಿಶ್ವಾಸ ಹೊಂದಿದವರಿಗೆ ಶಾಶ್ವತವಾದ ಮುಕ್ತಿ ನೀಡುವನು. ಅವನು ಪರಮ ದಯಾವಂತನು ಹಾಗೂ ಕಾರುಣ್ಯ ನಿಧಿಯಾಗಿದ್ದಾನೆ. ನಮ್ಮ ಪಶ್ಚಾತ್ತಾಪಗಳನ್ನು ಸ್ವೀಕರಿಸುವವನಾಗಿದ್ದಾನೆ. ಅದೇ ರೀತಿ ಇತರ ದೈವಿಕ ಗುಣಗಳು, ಪವಿತ್ರ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಬದರ್ ಯುದ್ಧ ಸಮಯದಲ್ಲಿ ಅವರು ತರುಯೌವ್ವನ ಪ್ರಾಯದಲ್ಲಿದ್ದರು. ಅವರ ಕೈಗಳಿಂದಲೇ ಇರಾನಿನ ಮೇಲೆ ವಿಜಯ ಸಾಧಿಸಲಾಯಿತು. ಅವರು ಕೂಫದ ಸ್ಥಾಪಕ ಮತ್ತು ಇರಾಕಿನ ಗೌರ್ವನರ್ ಆಗಿದ್ದರು. ಆದರೆ ಅವರ ದೃಷ್ಟಿಯಲ್ಲಿ ಈ ಎಲ್ಲ ಗೌರವಾದರಗಳು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರ ಹೆಮ್ಮೆಯ ಮುಂದೆ ಏನೂ ಆಗಿರಲಿಲ್ಲ. ಬದರ್ ಯುದ್ಧದಂದು ಧರಿಸಿದ್ದ ವಸ್ತ್ರವನ್ನು ಎಲ್ಲ ಬಟ್ಟೆಗಳಿಗಿಂತ ಉತ್ತಮವೆಂದು ಭಾವಿಸುತ್ತಿದ್ದರು.**

**ಮೊಟ್ಟಮೊದಲು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಜನರಲ್ಲಿ, ಮಕ್ಕದಲ್ಲಿ ಹಿಂಸೆಗಳನ್ನು ಅನುಭವಿಸಿದ, ಪ್ರವಾದಿ ಮುಹಮ್ಮದ್[ಸ]ರವರಿಗೆ ಕಾವಲು ನೀಡಿದ, ಇಸ್ಲಾಮ್ ಹಾಗೂ ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧ ಹೊಂದಿದ ಬದರಿ ಸಹಾಬಿಯಾದ ಸಅದ್ ಬಿನ್ ಅಬಿ ವಖ್ಖಾಸ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಇತ್ತೀಚೆಗೆ ನಿಧನ ಹೊಂದಿದ ನಾಲ್ಕು ದಿವಂಗತರು ಮುಕರ್‍ರಮ್ ಸಫ್‌ದರ್ ಅಲಿ ಗುಜರ್ ಸಾಹಿಬ್, ಮುಕರ್‍ರಮ್ ಪ್ರೊಫೇಸರ್ ನಸೀರ್ ಅಹ್ಮದ್ ಖಾನ್ ಸಾಹಿಬ್‌ರವರ ಧರ್ಮಪತ್ನಿಯಾದ ಮುಕರ್‍ರಮ ಇಫತ್ ನಸೀರ್ ಸಾಹಿಬ, ಮುಕರ್‍ರಮ್ ಅಬ್ದುರ್ರಹೀಮ್ ಸಾಖಿ ಸಾಹಿಬ್ ಮತ್ತು ಮುಕರ್‍ರಮ್ ಸಯೀದ್ ಅಹ್ಮದ್ ಸೆಹ್‌ಗಲ್ ಸಾಹಿಬ್ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಮತ್ತು ಅವರೆಲ್ಲರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14–08–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಜುಮಾಗೆ ಮುಂಚೆ ಸಹಾಬಿವರ್ಯರಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸುತ್ತಿದ್ದೆನು. ಅವರ ಬಗ್ಗೆ ಇನ್ನೂ ಹೆಚ್ಚಿನ ಕೆಲವು ಸಂಗತಿಗಳಿವೆ. ಯುದ್ಧದ ಪ್ರಸ್ತಾಪವಾಗುತ್ತಿತ್ತು. ಯುದ್ಧದ ವೇಳೆ ಸಂಕೋಲೆಗಳಲ್ಲಿ ಬಿಗಿಯಲ್ಪಟ್ಟಿದ್ದ ಒಬ್ಬ ಕೈದಿಯಾದ ಅಬೂ ಮಹ್‌ಜನ್ ಸಖ್‌ಫಿ ಎಂಬವರಿಗೆ ಈ ಯುದ್ಧದಲ್ಲಿ ಭಾಗವಹಿಸಲು ಅತ್ಯಧಿಕ ಅಭಿಲಾಷೆಯಿರುವುದಾಗಿ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರ ಪತ್ನಿಯಾದ ಹಝ್ರತ್ ಸಲ್ಮಾ ಬಿನ್ತ್ ಹಫ್ಸರವರು ಕಂಡರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರು ಈ ಸೆರೆಯಾಳಿಗೆ ಶರಾಬು ಕುಡಿದ ಕಾರಣದಿಂದ ಭ್ರಷ್ಟತೆಯ ಶಿಕ್ಷೆ ನೀಡಿ ಬಹಿಷ್ಕರಿಸಿದರಿಂದ ಅವರು ಇಲ್ಲಿಗೆ ತಲುಪಿದ್ದರು. ಇಲ್ಲಿಗೆ ತಲುಪಿದ ನಂತರ ಪುನಃ ಶರಾಬು ಕುಡಿದ ಕಾರಣ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಅವರಿಗೆ ಚಾವಟಿಯ ಶಿಕ್ಷೆ ನೀಡಿ ಸಂಕೋಲೆಯಲ್ಲಿ ಬಂಧಿಸಿದರು. "ನಾನು ಯುದ್ಧದಲ್ಲಿ ಭಾಗವಹಿಸುವಂತಾಗಲು ನನ್ನ ಸರಪಣಿಯನ್ನು ತೆರೆಯಿರಿ, ಅಲ್ಲಾಹನಾಣೆ, ನಾನು ಜೀವಂತವಾಗಿ ಉಳಿದರೆ, ಮರಳಿಬಂದು ಪುನಃ ಕೈಕೋಳವನ್ನು ಹಾಕುವನು" ಎಂದು ಅಬೂಜಹನ್ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರ ದಾಸಿಯಾದ ಝುಬ್ರಾಗೆ ಹೇಳಿದರು. ಈ ಮಾತನ್ನು ಒಪ್ಪಿ ಸರಪಣಿಯನ್ನು ದಾಸಿ ಬಿಡಿಸಿಕೊಟ್ಟಳು. ಅಬೂಮಹ್‌ಜನ್ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರ ಕುದುರೆಯಲ್ಲಿ ಸವಾರರಾಗಿ ಯುದ್ಧ ಮೈದಾನದ ದಿಕ್ಕಿಗೆ ಹೊರಟರು. ಶತ್ರುಗಳ ಪಂಕ್ತಿಗಳಿಗೆ ನುಗ್ಗಿ ನೇರವಾಗಿ ದೊಡ್ಡ ಬಿಳಿ ಆನೆಯ ಮೇಲೆ ದಾಳಿ ಮಾಡಿದರು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರವರು ಇವನ್ನೆಲ್ಲ ನೋಡುತ್ತಿದ್ದರು. "ಈ ಕುದುರೆಯಂತು ನನ್ನದಾಗಿದೆ ಆದರೆ ಇದರಲ್ಲಿ ಮಹ್‌ಜನ್ ಸಖ್‌ಫಿ ಸವಾರರಾಗಿರುವರು ಎಂದು ತೋರುತ್ತಿದೆ" ಎಂದು ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಹೇಳಿದರು. ಮೊದಲು ಪ್ರಸ್ತಾಪಿಸಿದಂತೆ ಕಾಯಿಲೆಯ ಕಾರಣ ಸಅದ್ ರಝಿಯಲ್ಲಾಹು ಅನ್‌ಹು ಈ ಯುದ್ಧದಲ್ಲಿ ನೇರವಾಗಿ ಭಾಗವಹಿಸಿರಲಿಲ್ಲ. ದೂರದಿಂದ ಮೇಲ್ನೋಟವಹಿಸುತ್ತಿದ್ದರು. ಹೇಗಿದ್ದರೂ ಯುದ್ಧ ಮೂರು ದಿನಗಳ ಕಾಲ ಜಾರಿಯಲ್ಲಿತ್ತು. ಯುದ್ಧ ಮುಗಿದಾಗ ಅಬು ಮಹ್‌ಜನ್ ಸಖ್‌ಫಿ ಮರಳಿಬಂದು ತನ್ನ ಸರಪಣಿಯನ್ನು ಹಾಕಿದನು. "ಇನ್ನು ಮುಂದೆ ಎಂದಾದರೂ ನೀನು ಶರಾಬು ಕುಡಿದರೆ ನಾನು ನಿನ್ನನ್ನು ಕಠಿಣವಾಗಿ ಶಿಕ್ಷಿಸುವೆನು" ಎಂದು ಹೇಳಿ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಅವರನ್ನು ಬಿಡುಗಡೆಗೊಳಿಸಿದರು. ನಾನು ಇನ್ನು ಮುಂದೆ ಎಂದೂ ಶರಾಬು ಕುಡಿಯಲಿಕ್ಕಿಲ್ಲ ಎಂದು ಅಬುಮಹ್‌ಜನ್ ವಾಗ್ದಾನ ಮಾಡಿದರು. ಇನ್ನೊಂದು ಕಡೆ ಹೀಗೆಯೂ ವರದಿಯಾಗಿದೆ: ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಈ ಘಟನೆಯನ್ನು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಬರೆದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: ಇನ್ನು ಮುಂದೆ ಅವನು ಶರಾಬು ಕುಡಿಯುವುದರಿಂದ ಬಿಟ್ಟುನಿಂತರೆ ಅವನಿಗೆ ಶಿಕ್ಷೆ ನೀಡಬೇಕಾಗಿಲ್ಲ. ಆಗ ಅಬುಮಹ್‌ಜನ್ ಇನ್ನು ಮುಂದೆ ಶರಾಬು ಕುಡಿಯುವುದಿಲ್ಲ ಎಂದು ಹೇಳಿ ಆಣೆಹಾಕಿದನು. ಇದರಂತೆ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಅವರನ್ನು ಬಿಡುಗಡೆಗೊಳಿಸಿದರು.
(ಅಶ್ರಹ್ ಮುಬಶ್ಶಿರಹ್, ಬಶೀರ್ ಸಾಜಿದ್, ಪುಟ–850–851)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವರ್ಣಿಸಿರುವರು. ಮೊದಲ ಪ್ರಸ್ತಾಪದಲ್ಲಿ ಅವರ ಸಂಕೋಲೆಯನ್ನು ದಾಸಿ ತೆರೆದುಕೊಟ್ಟಿದಳು ಎಂದಿದೆ. ಆದರೆ ಹಝ್ರತ್ ಮುಸ್ಲಿಹ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿಶಿಷ್ಟ ಸಹಾಬಿವರ್ಯರಲ್ಲಿ ಒಬ್ಬರಾಗಿದ್ದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರು ತಮ್ಮ ಖಿಲಾಫತ್ ಕಾಲದಲ್ಲಿ ಇರಾನ್ ಸೈನ್ಯದ ವಿರುದ್ಧವಿರುವ ಇಸ್ಲಾಮಿಕ ಸೈನ್ಯದ ಸೇನಾನಾಯಕತ್ವವನ್ನು ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರಿಗೆ ನೀಡಿದರು. ಅನಿರೀಕ್ಷಿತವಾಗಿ ಅವರ ತೊಡೆಯಲ್ಲಿ ಒಂದು ದೊಡ್ಡ ಕುರು ಉಂಟಾಯಿತು. ಅದು ದೀರ್ಘಕಾಲದ ವರೆಗೂ ವಾಸಿಯಾಗಲಿಲ್ಲ. ತುಂಬಾ ಚಿಕಿತ್ಸೆ ನಡೆಸಲಾಗಿತ್ತಾದರೂ ಯಾವುದೇ ಪ್ರಯೋಜನ ಉಂಟಾಗಲಿಲ್ಲ. ನಾನು ಕಟ್ಟಿಲಲ್ಲಿ ಹೀಗೆ ಇದ್ದು ಬಿಟ್ಟಿರುವುದನ್ನು ಸೈನ್ಯ ನೋಡುವುದಾದರೆ, ಅವರೊಂದಿಗೆ ಸೇನಾಧಿಪತಿಯಿಲ್ಲದ ಕಾರಣ ಸೈನ್ಯ ಧೈರ್ಯಗುಂದುವುದು ಎಂದು ಹಝ್ರತ್ ಸಅದ್ ಯೋಚಿಸಿ ಕೊನೆಗೆ ಒಂದು ಮರದಲ್ಲಿ ಒಂದು ಅಟ್ಟಣಿಗೆಯನ್ನು ತಯಾರಿಸಿದರು. ತೋಟಗಳ ಸಂರಕ್ಷಣೆಗಾಗಿ ಇಲ್ಲಿ ನಾವು ತಯಾರಿಸುವ ಅಟ್ಟಣಿಗೆಯಂತೆ. ಮುಸ್ಲಿಮ್ ಸೈನ್ಯ ಅವರನ್ನು ನೋಡುವಂತಾಗಲು ಈ ಅಟ್ಟಣಿಯಲ್ಲಿ ಜನರ ಸಹಾಯದಿಂದ ಕುಳಿತುಕೊಳ್ಳುತ್ತಿದ್ದರು. ಸೇನಾಧಿಪತಿ ತಮ್ಮೊಂದಿಗೆ ಇರುವರು ಎಂಬ ಭಾವನೆಯನ್ನು ಮೂಡಿಸಲು ಇದುಸಹಾಯಕವಾಯಿತು. ಒಬ್ಬ ಅರಬ್ ಸರದಾರ ಶರಾಬು ಕುಡಿದರು ಎಂಬ ವಾರ್ತೆ ಈ ದಿನಗಳಲ್ಲೇ ಅವರಿಗೆ ಲಭಿಸಿತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಶರಾಬು ಕುಡಿಯುವುದು ಇಸ್ಲಾಮಿನಲ್ಲಿ ನಿಷಿದ್ಧಮಾಡಲಾಗಿತ್ತಾದರೂ ಅರಬ್ ಜನರು ಅದರ ಚಟವನ್ನು ಬಿಟ್ಟಿರಲಿಲ್ಲ. ಅಭ್ಯಾಸಗಳನ್ನು ಉಪೇಕ್ಷಿಸುವುದು

ತುಂಬ ಕಷ್ಟದ ಕೆಲಸವಾಗಿದೆ. ಈ ಸರ್ದಾರನು ಇಸ್ಲಾಮನ್ನು ಸ್ವೀಕರಿಸಿ ಮೂರ್‍ನಾಲ್ಕು ವರ್ಷವೇ ಆಗಿತ್ತು. ಹಳೆಯ ಹವ್ಯಾಸ ಮೂರ್‍ನಾಲ್ಕು ವರ್ಷದಲ್ಲಿ ಬಿಟ್ಟುಹೋಗುವುದಿಲ್ಲ. ಹೇಗಿದ್ದರೂ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರಿಗೆ ಈ ಮುಸ್ಲಿಮ್ ಸರದಾರನು ಶರಾಬು ಕುಡಿದ ಬಗ್ಗೆ ವರದಿ ಲಭಿಸಿದಾಗ ಅವರನ್ನು ಸೆರೆಹಿಡಿಲಾಯಿತು. ಆ ಕಾಲದಲ್ಲಿ ವ್ಯವಸ್ಥಾಪಿತವಾಗ ಸೆರೆಮನೆಗಳಿರಲಿಲ್ಲ. ಬಂಧನದಲ್ಲಿ ಇರಿಸಲು ಉದ್ದೇಶಿಸುವವರನ್ನು ಯಾವುದಾದರೊಂದು ಕೊಠಡಿಯಲ್ಲಿ ಮುಚ್ಚಿಟ್ಟು ಕಾವಲು ನಿಲ್ಲಿಸಲಾಗುತ್ತಿತ್ತು. ಹೀಗೆ ಈ ಮುಸ್ಲಿಮ್ ಅರಬ್ ಸರದಾರನನ್ನೂ ಒಂದು ಕೋಣೆಯಲ್ಲಿ ಬಂಧಿಯಾಗಿ ಇರಿಸಲಾಯಿತು. ಅದರ ಬಾಗಿಲ ಹೊರಗೆ ಕಾವಲು ನಿಲ್ಲಿಸಲಾಗಿತ್ತು. ಈ ಯುದ್ಧ ನಡೆದ ವರ್ಷವನ್ನು ಇಸ್ಲಾಮಿನ ಚರಿತ್ರೆಯಲ್ಲಿ ವಿಪತ್ತಿನ ವರ್ಷವೆಂದು ಹೇಳಲಾಗುತ್ತದೆ. ಏಕೆಂದರೆ ಮುಸ್ಲಿಮರಿಗೆ ಯುದ್ಧದಲ್ಲಿ ತುಂಬ ನಷ್ಟವುಂಟಾಯಿತು. ಒಂದು ಕಡೆ ಇಸ್ಲಾಮಿಕ ಸೈನ್ಯದ ಕುದುರೆಗಳು ಶತ್ರು ಸೈನ್ಯದ ಆನೆಗಳಿಗೆ ಹೆದರಿ ಸಮೀಪದಲ್ಲಿದ್ದ ಒಂದು ಚಿಕ್ಕ ನದಿಗೆ ಧುಮುಕುತ್ತಿತ್ತು. ಅರಬರಿಗೆ ಈಜಲು ಬಾರದ ಕಾರಣ ನೂರಾರು ಮುಸ್ಲಿಮರು ಮುಳುಗಿ ಸಾವನ್ನಪ್ಪಿದರು. ಆದ್ದರಿಂದ ಆ ವರ್ಷವನ್ನು ಸಂಕಷ್ಟದ ವರ್ಷವೆಂದು ಕರೆಯಲಾಗಿದೆ. ಹೇಗಿದ್ದರೂ ಆ ಮುಸ್ಲಿಮ್ ಸರದಾರ ಕೊಠಡಿಯಲ್ಲಿ ಕೈದಿಯಾಗಿದಾಗಿದ್ದನು. ಮುಸ್ಲಿಮ್ ಸೈನಿಕರು ಯುದ್ಧದಿಂದ ಮರಳಿಬಂದು ಆ ಕೋಣೆಯ ಸಮೀಪ ಕುಳಿತುಕೊಂಡು, ಯುದ್ಧದಲ್ಲಿ ಮುಸ್ಲಿಮರಿಗೆ ಉಂಟಾದ ನಷ್ಟದ ಬಗ್ಗೆ ಹೇಳುತ್ತಿದ್ದರು. ಆಗ ಸರದಾರ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಿರದ ಕಾರಣ ತನ್ನ ಹತಾಶೆಯನ್ನು ವ್ಯಕ್ತಿಪಡಿಸುತ್ತಿದ್ದರು. ನಿಸ್ಸಂಶಯವಾಗಿಯೂ ಆ ವ್ಯಕ್ತಿಯಲ್ಲಿ ದೌರ್ಬಲ್ಯವಿತ್ತು. ಅವನು ಶರಾಬು ಕುಡಿದಿದ್ದನು. ಆದರೆ ಅವನು ಶೂರನಾಗಿದ್ದನು. ಅವನೊಳಗೆ ಆವೇಶವಿತ್ತು. ಯುದ್ಧದಲ್ಲಿ ಮುಸ್ಲಿಮರಿಗೆ ಉಂಟಾದ ನಷ್ಟದ ಬಗ್ಗೆ ಕೇಳಿ ಕೊಠಡಿಯಲ್ಲಿ ಒಂದು ಸಿಂಹದ ಹಾಗೆ ಆಚೆ ಈಚೆ ನಡೆಯುತ್ತಿದ್ದ. ನಡೆಯುತ್ತಾ ಒಂದು ಪದ್ಯವನ್ನು ಹೇಳುತ್ತಿದ್ದ. ಅದರ ಅರ್ಥ ಇದಾಗಿತ್ತು: "ಇಸ್ಲಾಮನ್ನು ಸಂರಕ್ಷಿಸಿ ನಿನ್ನ ಶೌರ್ಯದಿಂದ ಕೂಡಿದ ಕೌಶಲ್ಯವನ್ನು ತೋರಿಸಲು ನಿನಗೆ ಇಂದೇ ಒಂದು ಸಂದರ್ಭವಾಗಿತ್ತು, ಆದರೆ ನೀನು ಸೆರೆಯಲ್ಲಿರುವೆ. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರ ಹೆಂಡತಿ ತುಂಬ ಧೈರ್ಯವಂತ ಸ್ತ್ರೀಯಾಗಿದ್ದಳು. ಅವಳು ಒಂದು ದಿನ ಆ ಕೊಠಡಿಯ ಸಮೀಪದಿಂದ ಹಾದುಹೋಗುತ್ತಿದ್ದಾಗ ಈ ಪದ್ಯವನ್ನು ಕೇಳಿದಳು. ಅಲ್ಲಿ ಯಾವುದೇ ಕಾವಲಿಲ್ಲ ಎಂದು ಅವಳು ಕಂಡಳು. ಅವಳು ಕೈದಿಯನ್ನು ಸಂಬೋಧಿಸಿ ಹೇಳಿದಳು: ನಿನ್ನನ್ನು ಸಅದ್ ಬಂಧಿಸಿರುವರು ಎಂದು ನಿನಗೆ ಗೊತ್ತಿದೆಯಲ್ಲವೇ? ನಾನು ನಿನ್ನನ್ನು ಬಂಧನದಿಂದ ವಿಮುಕ್ತಗೊಳಿಸಿದ್ದೇನೆ ಎಂದು ಅವರು ತಿಳಿದರೆ, ನನ್ನನ್ನು ಸುಮ್ಮನೆ ಬಿಡಲಿಕ್ಕಿಲ್ಲ. ಆದರೆ ನೀನು ನಿನ್ನ ಅಭಿಲಾಷೆಯ ಪ್ರಕಾರ ಇಸ್ಲಾಮಿಗೆ ನೆರವಾಗುವಂತಾಗಲು ನಿನ್ನನ್ನು ಬಂಧನದಿಂದ ಬಿಡುಗಡೆಗೊಳಿಸಬೇಕೆಂದು ನನ್ನ ಮನಸ್ಸು ಹೇಳುತ್ತಿದೆ. ಅವನು ಹೇಳಿದನು: ಈ ಯುದ್ಧಕ್ಕಾಗಿ ನನ್ನನ್ನು ಬಿಡಿರಿ, ಯುದ್ಧ ಮುಗಿದ ಕೂಡಲೆ ನಾನು ವಾಪಾಸ್ಸು ಬಂದು ಈ ಕೊಠಡಿಯಲ್ಲಿ ಪ್ರವೇಶಿಸುವನು. ಆ ಸ್ತ್ರೀಯ ಹೃದಯದಲ್ಲಿಯೂ ಇಸ್ಲಾಮಿನ ಬಗ್ಗೆ ವೇದನೆಯಿತ್ತು. ಅದರ ಸಂರಕ್ಷಣೆಗಾಗಿ ಆವೇಶವಿತ್ತು. ಆದ್ದರಿಂದ ಅವಳು ಅವನನ್ನು ಬಂಧನದಿಂದ ಮುಕ್ತಿಮಾಡಿದಳು. ಆ ವ್ಯಕ್ತಿ ಯುದ್ಧದಲ್ಲಿ ಭಾಗವಹಿಸಿ ಎಷ್ಟು ಸಾಹಸದಿಂದ ಹೋರಾಡಿದನೆಂದರೆ, ಅವನ ಶೌರ್ಯದ ಕಾರಣ ಇಸ್ಲಾಮಿನ ಸೈನ್ಯ ಹಿಮ್ಮೆಟ್ಟುವುದಕ್ಕೆ ಬದಲಾಗಿ ಮುಂದೆ ಮುಂದೆ ಸಾಗಿತ್ತು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಅವನನ್ನು ಗುರುತಿಸಿದರು. ಅನಂತರ ಹೇಳಿದರು: ಶರಾಬು ಕುಡಿದಿದ್ದ ಕಾರಣ ನಾನು ಬಂಧಿಸಿದ್ದ ವ್ಯಕ್ತಿ ಇಂದಿನ ಯುದ್ಧದಲ್ಲಿ ಇದ್ದನು. ಅವನು ಮುಖವಾಡ ಹಾಕಿದ್ದರೂ, ನನಗೆ ಅವನ ಹಲ್ಲೆಯ ವಿಧಾನ ಮತ್ತು ಮೈಕಟ್ಟಿನ ಪರಿಚಯವಿದೆ. ಅವನನ್ನು ಬಂಧನದಿಂದ ವಿಮುಕ್ತಗೊಳಿಸಿದ ವ್ಯಕ್ತಿಯನ್ನು ಕಂಡುಹಿಡಿದು ನಾನು ಅವನಿಗೆ ಕಠಿಣ ಶಿಕ್ಷೆಯನ್ನು ನೀಡುವನು. ಎಂದರೆ ಸೆರೆಯಿಂದ ಬಿಡುಗಡೆಗೊಳಿಸಿದ, ಸಂಕೋಲೆಯನ್ನು ಬಿಡಿಸಿದ ವ್ಯಕ್ತಿಯನ್ನು ಕಠಿಣವಾಗಿ ಶಿಕ್ಷಿಸುವನು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ಈ ಮಾತುಗಳನ್ನಾಡಿದಾಗ ಅವರ ಪತ್ನಿಗೆ ಕೋಪಬಂದು ಹೀಗೆ ಹೇಳಿದಳು: ನಿಮಗೆ ನಾಚಿಕೆಯಾಗುವುದಿಲ್ಲವೇ? ನೀವು ಮರದ ಕೆಳಗೆ ಹಲಗೆ ಹಾಕಿ ಕುಳಿತುಕೊಂಡು ಆ ವ್ಯಕ್ತಿಯನ್ನು ಕೈದಿಮಾಡಿದ್ದೀರಿ. ಅವನಾದರೋ ಶತ್ರುಗಳ ಸೈನ್ಯಕ್ಕೆ ಹಿಂಜರಿಕೆಯಿಲ್ಲದೆ ನುಗ್ಗುತ್ತಾನೆ ಮತ್ತು ತನ್ನ ಜೀವದ ಪರಿವೆ ಕೂಡ ಮಾಡುವುದಿಲ್ಲ. ನಾನೇ ಅವನನ್ನು ಬಂಧನದಿಂದ ವಿಮುಕ್ತಗೊಳಿಸಿದ್ದು. ನೀವು ಏನು ಬೇಕಾದರೂ ಮಾಡಿರಿ. ಅವನ ಸಂಕೋಲೆಯನ್ನು ಬಿಡಿಸಿಕೊಟ್ಟಿದು ನಾನೇ, ಈಗ ನೀವು ಮಾಡಬೇಕಾದದನ್ನು ಮಾಡಿರಿ. ಹೇಗಿದ್ದರೂ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಲಜ್‌ನಾಗೆ ನೀಡಿದ ತಮ್ಮೊಂದು ಭಾಷಣದಲ್ಲಿ ಇದನ್ನು ವಿವರಿಸುತ್ತಾ ಹೇಳುತ್ತಾರೆ: ಒಟ್ಟಿನಲ್ಲಿ ಸ್ತ್ರೀಯರು ಇಸ್ಲಾಮಿನಲ್ಲಿ ಬಹಳ ಶ್ರೇಷ್ಠ ಕೆಲಸಗಳನ್ನು ಮಾಡಿರುವರು. ಇಂದೂ ಅಹ್ಮದೀ ಸ್ತ್ರೀಯರು ಈ ಉದಾಹರಣೆಗಳನ್ನು ತಮ್ಮ ಮುಂದಿರಿಸಬೇಕು. (ಖುರೂನೆ ಊಲಾ ಕಿ ಮುಸಲ್ಮಾನ್ ಖವಾತೀನ್ ಕಾ ನಮೂನ, ಅನ್ವಾರುಲ್ ಉಲೂಮ್, ಸಂಪುಟ-25, ಪುಟ-428-430)

ಹೆಂಗಸರ ತ್ಯಾಗದ ಇನ್ನೂ ಹೆಚ್ಚಿನ ಘಟನೆಗಳನ್ನು ಕೇಳಿರಿ. ಅದೂ ಸಹ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರಿಗೆ ಸಂಬಂಧಪಟ್ಟದ್ದೇ ಆಗಿವೆ.

ಅನ್ಸಾರಿನ ಒಂದು ಗೋತ್ರವಾದ ಬನೂ ಸುಲೈಮಿನ ಪ್ರಸಿದ್ಧ ಕವಯಿತ್ರಿ ಮತ್ತು ಸಹಾಬಿಯಾಗಿದ್ದ ಹಝ್ರತ್ ಖನ್ಸಾರವರು ಆ ಯುದ್ಧದಲ್ಲಿ ತಮ್ಮ ನಾಲ್ಕು ಮಕ್ಕಳನ್ನು ಅಲ್ಲಾಹನ ಮಾರ್ಗದಲ್ಲಿ ತ್ಯಾಗಮಾಡಿದಳು. ಹಝ್ರತ್ ಖನ್ಸಾರ ಯೌವ್ವನ ಕಾಲದಲ್ಲೇ ಗಂಡ ಹಾಗೂ ಅವರ ಸಹೋದರ ಮೃತಪಟ್ಟಿದರು. ಹಝ್ರತ್ ಖನ್ಸಾ ಬಹಳ ಪರಿಶ್ರಮದಿಂದ ತಮ್ಮ ಮಕ್ಕಳನ್ನು ಸಾಕಿ ಸಲಹಿದ್ದರು. ಖಾದಿಸಿಯಾ ಯುದ್ಧದ ಕೊನೆಯ ದಿನದ ಬೆಳಿಗ್ಗೆ ಯುದ್ಧಕ್ಕೆ ಮುಂಚಿತವಾಗಿ ಹಝ್ರತ್ ಖನ್ಸಾ ತನ್ನ ಮಕ್ಕಳನ್ನು ಸಂಬೋಧಿಸಿ ಹೀಗೆ ಹೇಳಿದಳು: ಎಲ್ಲೈ ನನ್ನ ಮಕ್ಕಳೇ, ನೀವು ಸ್ವಂತ ಇಷ್ಟದಿಂದ ಇಸ್ಲಾಮನ್ನು ಸ್ವೀಕರಿಸಿದ್ದೀರಿ. ಸ್ವಂತ ಇಷ್ಟ ಪ್ರಕಾರ ಹಿಜ್‌ರತ್ ಮಾಡಿದ್ದೀರಿ. ಏಕ ಆರಾಧ್ಯನಾದ ಅಲ್ಲಾಹನ ಆಣೆ ಹಾಕಿ ನಾನು ಹೇಳುತ್ತೇನೆ. ನಿಮ್ಮ ಕುಲೀನತೆಗೆ ಯಾವ ಕಳಂಕವೂ ಉಂಟಾಗಲು ನಾನು ಬಿಡಲಿಲ್ಲ. ಪರಲೋಕ ಈ ನಶ್ವರ ಲೋಕಕ್ಕಿಂತ ಉತ್ತಮವೆಂದು ನೆನಪಿಡಿರಿ. ಮಕ್ಕಳೇ, ಅಚಲವಾಗಿ ನಿಲ್ಲಿರಿ, ಸ್ಥಿರಚಿತ್ತರಾಗಿರಿ, ತೋಳಿಗೆ ತೋಳು ಸೇರಿಸಿ ಹೋರಾಡಿರಿ. ಅಲ್ಲಾಹನ ಭಯವಿರಿಸಿಕೊಳ್ಳಿರಿ. ಘನಘೋರವಾದ ಯುದ್ಧ ನಡೆಯುತ್ತಿದೆ. ಅದರ ಬೆಂಕಿಯ ಭಟ್ಟಿ ಪ್ರಜ್ವಲಿಸುತ್ತಿದೆ. ನಿಪುಣರಾದ ಕುದುರೆಸವಾರರು ಕೆಚ್ಚೆದೆಯಿಂದ ಹೋರಾಡುತ್ತಿದ್ದಾರೆ. ಆದ್ದರಿಂದ ನೀವು ನಿಮ್ಮ ಪರಲೋಕವನ್ನು ಅಲಂಕರಿಸಲು ಈ ಯುದ್ಧಕ್ಕೆ ನುಗ್ಗಿರಿ. ಹಝ್ರತ್ ಖನ್ಸಾರ ಮಕ್ಕಳು ಅವರ ಉಪದೇಶದಂತೆ ತಮ್ಮ ಕುದುರೆಯ ಲಗಾಮು ಹಿಡಿದುಕೊಂಡು ಯುದ್ಧಗೀತೆಯನ್ನು ಹಾಡುತ್ತಾ ಯುದ್ಧ ಮೈದಾನಕ್ಕೆ ಧುಮುಕಿದರು. ಶೌರ್ಯದಿಂದ ಹೋರಾಡಿ ಹುತಾತ್ಮರಾದರು. ಆ ದಿನ ಸಂಜೆಗೆ ಮುಂಚಿತವಾಗಿ ಖಾದಿಸಿಯಾದಲ್ಲಿ ಇಸ್ಲಾಮಿನ ಬಾವುಟ ಹಾರಾಡುತ್ತಿತ್ತು. "ನಿಮ್ಮ ನಾಲ್ಕು ಮಕ್ಕಳೂ ಶಹೀದಾದರು ಎಂದು ಹಝ್ರತ್ ಖನ್ಸಾಗೆ ಹೇಳಲಾದಾಗ ಅವರು ಹೇಳಿದಳು: ಅಲ್ಲಾಹನಿಗೆ ಸ್ತುತಿ. ಅಲ್ಲಾಹನು ಅವರೆಲ್ಲರಿಗೂ ಶಹಾದತಿನ ಪದವಿಯನ್ನು ನೀಡಿರುವನು. ಅವರು ಸತ್ಯದ ಮಾರ್ಗದಲ್ಲಿ ತ್ಯಾಗಗೊಂಡರು ಎಂಬುದು ನನಗೆ ಕಡಿಮೆ ಹೆಮ್ಮೆಯ ವಿಷಯವೇ? ಅಲ್ಲಾಹನು ನಮ್ಮನ್ನು ತನ್ನ ಕಾರುಣ್ಯದ ನೆರಳಿನಲ್ಲಿ ಖಂಡಿತ ಒಟ್ಟುಗೂಡಿಸುವನು ಎಂದು ನನಗೆ ನಿರೀಕ್ಷೆಯಿದೆ.

ಖಾದಿಸಿಯಾದ ಮೇಲೆ ವಿಜಯ ಸಾಧಿಸಿದ ಮೇಲೆ ಇಸ್ಲಾಮಿನ ಸೈನ್ಯ ಬಾಬುಲಿನ ಮೇಲೆ ವಿಜಯ ಸಾಧಿಸಿತು. ಬಾಬುಲ್ ಈಗಿನ ಇರಾಕಿನ ಪ್ರಾಚೀನ ಪಟ್ಟಣವಾಗಿತ್ತು. ಅದರ ಬಗ್ಗೆ ಪವಿತ್ರ ಖುರ್‌ಆನ್ ಸಹ ಹಾರೂತ್ ಮಾರೂತಿಗೆ ಸಂಬಂಧಿಸಿದ ಪ್ರಸ್ತಾಪದಲ್ಲಿ ವಿವರಿಸಿದೆ. ಈಗ ಕೂಫ ಇರುವ ಪ್ರದೇಶದಲ್ಲೇ ಇದು ಇತ್ತು. ಪಟ್ಟಣಗಳ ಪರಿಚಯದಲ್ಲಿ ಇದರ ಬಗ್ಗೆ ಹೀಗೆ ಬರೆಯಲಾಗಿದೆ. ಅನಂತರ ಅವರು ಕೂಸ ಎಂಬ ಹೆಸರಿನ ಚಾರಿತ್ರಿಕ ಪಟ್ಟನಕ್ಕೆ ತಲುಪಿ ಅದರ ಮೇಲೆ ವಿಜಯ ಸಾಧಿಸಿದರು. ಇದು ನಮ್ರೂದನು ಹಝ್ರತ್ ಇಬ್ರಾಹೀಂ ಅಲೈಹಿಸ್ಸಲಾಮರನ್ನು ಬಂಧಿಮಾಡಿದ್ದ ಸ್ಥಳವಾಗಿದೆ. ಸೆರೆಮನೆಯ ಜಾಗ ಆಗಿನ ತನಕ ಸುರಕ್ಷಿತವಾಗಿತ್ತು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಅಲ್ಲಿಗೆ ತಲುಪಿ ಆ ಸೆರೆಮನೆಯನ್ನು ಕಂಡಾಗ ಪವಿತ್ರ ಖುರ್‌ಆನಿನ ಈ ಆಯತನ್ನು ಓದಿದರು: **ತಿಲ್ಕಲ್ ಅಯ್ಯಾಮು ನುದಾವಿಲುಹಾ ಬೈನನ್ನಾಸ್.** (ಆಲಿ ಇಮ್ರಾನ್: 141) ಅಂದರೆ ಇಂತಹ ದಿನಗಳನ್ನು ನಾವು ಜನರೆಡೆಯಲ್ಲಿ ಬದಲಾಯಿಸುತ್ತಲಿರುತ್ತೇವೆ.

ಕೂಸದಿಂದ ಮುಂದೆ ಸಾಗುತ್ತಾ ಬಹ್‌ರಶೀರ್ ಎಂಬ ಹೆಸರಿನ ಒಂದು ಸ್ಥಳಕ್ಕೆ ಅವರು ತಲುಪಿದರು. ಪಟ್ಟಣಗಳಿಗೆ ಸಂಬಂಧಿಸಿದ ನಿಘಂಟುವಾದ ಮುಅ್‌ಜಮುಲ್ ಬುಲ್‌ದಾನ್ ಪ್ರಕಾರ ಇದರ ಹೆಸರು ಬಹ್‌ವರ್ ಸೀರ್ ಎಂದಾಗಿದೆ. ಇದು ದಜ್‌ಲ ನದಿಯ ಪಶ್ಚಿಮದಲ್ಲಿರುವ ಇರಾಕಿನ ಪಟ್ಟಣವಾದ ಮದಾಇನಿನ ಸಮೀಪ, ಬಗ್ದಾದಿನ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಒಂದು ಸ್ಥಳದ ಹೆಸರಾಗಿದೆ. ಇಲ್ಲಿ ಕಿಸ್ರಾ ರಾಜನ ಬೇಟೆಯಾಡುವ ಸಿಂಹ ಇರುತ್ತಿತ್ತು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರ ಸೈನ್ಯ ಸಮೀಪಕ್ಕೆ ತಲುಪಿದಾಗ ಅವನು ಆ ಕ್ರೂರ ಮೃಗವನ್ನು ಸೈನ್ಯದ ಎದುರಿಗೆ ಬಿಟ್ಟನು. ಸಿಂಹ ಗರ್ಜಿಸುತ್ತಾ ಸೈನ್ಯದ ಮೇಲೆ ಧಾಳಿ ನಡೆಸಿತು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರ ಸಹೋದರನಾದ ಹಾಶಿಮ್ ಬಿನ್ ಅಬೀ ವಖಾಸ್ ಸೈನ್ಯದ ಪ್ರತಿಯೊಂದು ಮೊದಲ ಸಂಘದ ನಾಯಕರಾಗಿದ್ದರು. ಅವರು ಸಿಂಹದ ಮೇಲೆ ಖಡ್ಗದಿಂದ ಆಕ್ರಮಣ ನಡೆಸಿದಾಗ ಅದು ಅಲ್ಲೇ ಸತ್ತುಹೋಯಿತು.

ಅನಂತರ ಅದೇ ಯುದ್ಧದಲ್ಲಿ ಮದಾಇನಿನ ಸಂಗ್ರಾಮ ಸಹ ನಡೆಯಿತು. ಮದಾಇನನಲ್ಲಿ ಕಿಸ್ರಾನ ಸಿಂಹಾಸನವಿತ್ತು. ಇಲ್ಲಿ ಅವನ ಶ್ವೇತ ಮಹಲ್ಲುಗಳಿತ್ತು. ಮುಸ್ಲಿಮರು ಮತ್ತು ಮದಾಇನರ ನಡುವೆ ತಡೆಯಾಗಿ ದಜ್‌ಲ ನದಿಯಿತ್ತು. ಇರಾನಿಯರು ನದಿಯ ಎಲ್ಲ ಸೇತುವೆಗಳನ್ನು ಮುರಿದುಹಾಕಿದರು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಸೈನ್ಯದೊಡನೆ ಹೇಳಿದರು: ಮುಸ್ಲಿಮರೇ, ಶತ್ರುಗಳು ಈ ನದಿಯ ಆಶ್ರಯವನ್ನು ಪಡೆದಿದ್ದಾರೆ. ಬನ್ನಿರಿ, ಇದನ್ನು ನಾವು ಈಜಿ ದಾಟೋಣ. ಹೀಗೆ ಹೇಳುತ್ತಾ ಅವರು ತಮ್ಮ ಕುದುರೆಯನ್ನು ನದಿಗೆ ಹಾಕಿದರು. ತಮ್ಮ ಸೇನಾಧಿಪತಿಯನ್ನು ಅನುಸರಿಸುತ್ತಾ ಸಿಪಾಯಿಗಳು ಸಹ ತಮ್ಮ ತಮ್ಮ ಕುದುರೆಗಳನ್ನು ನದಿಗೆ ಹಾಕಿದರು. ಇಸ್ಲಾಮಿನ ಸೈನ್ಯ ನದಿಯನ್ನು ದಾಟಿ ದಡ ತಲುಪಿತು. ಇರಾನಿಯರು ಈ ಆಶ್ಚರ್ಯಕರ ದೃಶ್ಯವನ್ನು ಕಂಡು ಭಯದಿಂದ ಕಿರುಚಾಡಲು ಶುರುಮಾಡಿದರು. ದೆವ್ವ ಬಂತು, ಭೂತ ಬಂತು ಎಂದು ಹೇಳಿ ಓಡಿಹೋದರು. ಮುಸ್ಲಿಮರು ಮುಂದಕ್ಕೆ ಸಾಗಿ ಪಟ್ಟಣ ಮತ್ತು ಕಿಸ್ರಾನ ಮಹಲ್ಲುಗಳನ್ನು ವಶಪಡಿಸಿದರು. ಹೀಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಹ್‌ಝಾಬ್ ಯುದ್ಧದ ವೇಳೆ ಹೊಂಡ ಮಾಡುತ್ತಿದ್ದ ಸಂದರ್ಭದಲ್ಲಿ ಬಂಡೆಕಲ್ಲಿಗೆ ಗುದ್ದಲಿಯಿಂದ ಹೊಡೆಯುತ್ತಿದ್ದಾಗ ಮಾಡಿದ ಭವಿಷ್ಯವಾಣಿ ಪೂರ್ತಿ ಆಯಿತು. "ನಾನು ಮದಾಇನಿನ ಬಿಳಿ ಮಹಲ್ಲುಗಳು ಬೀಳುತ್ತಿರುವುದಾಗಿ ಕಂಡೆನು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದಿದ್ದರು. ಈ ಮಹಲ್ಲುಗಳನ್ನು ನಿರ್ಜನ ಮತ್ತು ಮೌನದ ಅವಸ್ಥೆಯಲ್ಲಿ ಕಂಡು ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಸೂರತುಲ್ ದುಖಾನಿನ ಈ ಆಯತುಗಳನ್ನು ಓದಿದರು: **ಕಮ್‌ತರಕೂ ಮಿನ್ ಜನ್ನಾತಿನ್ ವ ಉಯೂನ್ ವ ಝುರೂಇನ್ ವ ಮಖಾಮಿನ್ ಕರೀಮ್ ವ ನಅ್‌ಮತಿನ್ ಕಾನೂ ಫೀಹಾ ಫಾಕಿಹೀನ್, ಕಧಾಲಿಕ್ ವ ಔರಸ್‌ನಾಹಾ ಖೌಮನ್ ಆಖರೀನ್. (ಅದ್ದುಖ್ಖಾನ್:26–29)** ಅಂದರೆ, ಎಷ್ಟೆಲ್ಲ ಉದ್ಯಾನಗಳನ್ನೂ ಚಿಲುಮೆಗಳನ್ನೂ ಅವರು ತೊರೆದು ಹೋದರು! ಎಷ್ಟೆಲ್ಲ ಕೃಷಿ ಪ್ರದೇಶಗಳನ್ನೂ ರಮ್ಯ ಅರಮನೆಗಳನ್ನೂ! ಯಾವೆಲ್ಲ ಸುಖ ಸೌಕರ್ಯಗಳನ್ನು ಅವರು ಅನುಭವಿಸಿ ಅನಂದಿಸುತ್ತಿದ್ದರು!

ಹೇಗಿದ್ದರೂ ಅನಂತರ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಪತ್ರ ಬರೆದು ಇನ್ನೂ ಮುಂದೆ ಸಾಗಲು ಅನುಮತಿ ಕೇಳಿದರು. ಸದ್ಯಕ್ಕೆ ಇಷ್ಟು ಸಾಕೆಂದೂ ಹಾಗೂ ವಶಪಡಿಸಿದ ಪ್ರದೇಶಗಳ ಆಡಳಿತ ವ್ಯವಸ್ಥೆಯ ಕಡೆಗೆ ಗಮನಹರಿಸಬೇಕೆಂದೂ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದರು. ಹೀಗೆ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಮದಾಇನನ್ನು ಕೇಂದ್ರೀಕರಿಸಿ ಆಡಳಿತವ್ಯವಸ್ಥೆಯನ್ನು ಸುದೃಢಗೊಳಿಸಲು ಪ್ರಯತ್ನಿಸಿ ಅದನ್ನು ಬಹಳ ಚೆನ್ನಾಗಿ ನೆರವೇರಿಸಿದರು. ಅವರು ಇರಾಕಿನ ಜನಗಣತಿ ಮತ್ತು ಭೂಮಾಪನ ಮಾಡಿದರು. ಪ್ರಜೆಗಳಿಗಾಗಿ ಕ್ಷೇಮ ಮತ್ತು ನೆಮ್ಮದಿಯ ವ್ಯವಸ್ಥೆ ಮಾಡಿದರು. ಅಲ್ಲಾಹನು ಅವರನ್ನು ಯುದ್ಧದ ಸಾಮರ್ಥ್ಯದೊಂದಿಗೆ ಆಡಳಿತ ಸಾಮರ್ಥ್ಯದಿಂದಲೂ ಅನುಗ್ರಹಿಸಿರುವನು ಎಂದು ತಮ್ಮ ರಾಜನೀತಿ ಮತು ಉತ್ತಮ ಕೆಲಸಗಳಿಂದ ಸಾಬೀತುಪಡಿಸಿದರು. ವಶಪಡಿಸಿದ ನಂತರ ಪ್ರಜೆಗಳ ಬಗ್ಗೆ ಗಮನಹರಿಸಲಿಲ್ಲ ಎಂದು ಜನರು ಭಾವಿಸುತ್ತಾರೆ: ಆದರೆ ಮುಸ್ಲಿಮರು ಪಟ್ಟಣಗಳ ಮೇಲೆ ವಿಜಯ ಸಾಧಿಸಿದಾಗ ಅಲ್ಲಿಯ ನಿವಾಸಿಗಳ ಬಗ್ಗೆ ಹಿಂದಿಗಿಂತ ಉತ್ತಮವಾಗಿ ಶ್ರದ್ಧೆವಹಿಸಿದ್ದರು.

ಅನಂತರ ಕೂಫದ ನಿರ್ಮಾಣದ ಕೆಲಸ. ಮದಾಇನಿನ ಹವಾಮಾನ ಅರಬರ ಪ್ರಕೃತಿಗೆ ಅನುಕೂಲಕರವಾಗಿರಲಿಲ್ಲ. ಆದ್ದರಿಂದ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಅನುಮತಿ ಪಡೆದು ಒಂದು ಹೊಸ ನಗರವನ್ನು ನೆಲೆಸಿದರು. ಅದರಲ್ಲಿ ವಿವಿಧ ಅರಬ್ ಗೋತ್ರದವರನ್ನು ಬೇರೆ ಬೇರೆ ಬಡಾವಣೆಗಳಲ್ಲಿ ನೆಲೆಸಿದರು. ಪಟ್ಟಣದ ಮಧ್ಯೆ ಒಂದು ದೊಡ್ಡ ಮಸೀದಿಯನ್ನು ಮಾಡಿದರು. ಅದರಲ್ಲಿ ನಲ್ವತ್ತು ಸಾವಿರ ಜನರು ಒಟ್ಟಿಗೆ ನಮಾಝ್ ಮಾಡಬಹುದಾಗಿತ್ತು. ಕೂಫ ಸತ್ಯದಲ್ಲಿ ಸೈನ್ಯದ ಪ್ರದೇಶವಾಗಿತ್ತು. ಅದರಲ್ಲಿ ಒಂದು ಲಕ್ಷ ಸಿಪಾಯಿಗಳನ್ನು ನೆಲೆಸಲಾಗಿತ್ತು. ಇದರ ವಿಶದ ವಿವರವೇನೆಂದರೆ, ಮದಾಇನಿನ ಹವಾಗುಣ ಅರಬರ ರೂಪ ಮತ್ತು ಬಣ್ಣವನ್ನು ಸಂಪೂರ್ಣವಾಗಿ ಬದಲಾಯಿಸಿದೆ ಎಂದು ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರಿಗೆ ಅಲ್ಲಿ ಕೆಲವು ಕಾಲ ನಿಂತ ನಂತರ ಅನುಭವವಾಯಿತು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಈ ವಿವರವನ್ನು ತಿಳಿಸಲಾಯಿತು. ಅರಬ್ ಪ್ರದೇಶದ ಗಡಿಯಲ್ಲಿ ಯಾವುದಾದರೂ ಅನುಯೋಜ್ಯವಾದ ಭೂಮಿಯನ್ನು ಹುಡುಕಿ ಒಂದು ಹೊಸ ನಗರವನ್ನು ನಿರ್ಮಿಸಿ ಅರಬ್ ಗೋತ್ರದವರನ್ನು ಅಲ್ಲಿ ನೆಲೆಸಿ ಅದನ್ನು ಆಡಳಿತ ಕೇಂದ್ರವನ್ನಾಗಿ ಮಾಡಲು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರು ಆದೇಶಿಸಿದರು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ಆ ಆದೇಶದ ಮೇರೆಗೆ ಮದಾಇನಿನಿಂದ ಹೊರಟು ಸರಿಯಾದೊಂದು ಜಾಗವನ್ನು ಆಯ್ಕೆಮಾಡಿ ಕೂಫ ಎಂಬ ಹೆಸರಿನಿಂದ ಒಂದು ದೊಡ್ಡ ಪಟ್ಟಣಕ್ಕೆ ತಳಪಾಯ ಹಾಕಿದರು. ಅರಬಿನ ಬೇರೆ ಬೇರೆ ಗೋತ್ರದ ಜನರನ್ನು ಬೇರೆ ಬೇರೆ ಬಡಾವಣೆಗಳಲ್ಲಿ ನೆಲೆಸಿದರು. ಮಧ್ಯದಲ್ಲಿ ಒಂದು ದೊಡ್ಡದಾದ ಒಂದು ಮಸೀದಿಯನ್ನು ನಿರ್ಮಿಸಿದರು. ಅದರಲ್ಲಿ ಸುಮಾರು 40 ಸಾವಿರ ನಮಾಝಿಗಳಿಗೆ ನಮಾಝ್ ಮಾಡಲು ಸ್ಥಳವಿತ್ತು. ಮಸೀದಿಯ ಸಮೀಪವೇ ಬೈತುಲ್ ಮಾಲಿನ ಕಟ್ಟಡ ಮತ್ತು ತನ್ನ ಮಹಲ್ಲನ್ನು ನಿರ್ಮಿಸಿದ್ದರು.ಅದು ಖಸ್‌ರೇ ಸಅದ್ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯಿತ್ತು. (ರೌಶನ್ ಸಿತಾರೆ, ಪುಟ–84–88) (ಸೈರುಸ್ಸಹಾಬ, ಸಂಪುಟ–2, ಪುಟ–117–118) (ಮುಜಮುಲ್ ಬಲದಾನ್, ಅನುವಾದ ಪುಟ–56) (ಮುಜಮುಲ್ ಬಲದಾನ್, ಸಂಪುಟ–1, ಪುಟ–610)

ಅನಂತರ ನಹಾವಂದಿನ ಯುದ್ಧ. ಇಲ್ಲಿ ಹಿಜರೀ 21ಕ್ಕೆ ಇರಾನಿಗಳು ಇರಾಕೇ ಅಜಮ್ ಎಂದರೆ ಫಾರಸಿಯರ ಬಳಿ ಇದ್ದ ಇರಾಕಿನ ಭಾಗದಲ್ಲಿ ಮುಸ್ಲಿಮರ ವಿರುದ್ಧ ಯುದ್ಧದ ತಯಾರಿಗಳನ್ನು ಮಾಡಿದರು. ಮುಸ್ಲಿಮರು ವಶಪಡಿಸಿದ ಪ್ರದೇಶ ಮರಳಿ ಪಡೆಯುವ ಉದ್ದೇಶದಿಂದ ನಹಾವಂದಿನ ಪ್ರದೇಶದಲ್ಲಿ ಒಂದುವರೆ ಲಕ್ಷ ಇರಾನಿನ ಯುದ್ಧ ಸೈನಿಕರು ಮುಸ್ಲಿಮರ ವಿರುದ್ಧ ಒಟ್ಟುಗೂಡಿದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ಇದರ ಮಾಹಿತಿ ನೀಡಿದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ತಮ್ಮ ಸಲಹೆಗಾರರರೊಂದಿಗೆ ಸಮಾಲೋಚಿಸಿ ಒಬ್ಬ ಇರಾಕಿಯಾದ ಹಝ್ರತ್ ನುಮಾನ್ ಬಿನ್ ಮಖ್‌ರನ್ ಮುಝ್‌ನಿಯವರನ್ನು ಮುಸ್ಲಿಮ್ ಸೈನ್ಯದ ಸೇನಾಧಿಪತಿಯಾಗಿ ನಿಶ್ಚಯಿಸಿದರು. ಹಝ್ರತ್ ನುಮಾನ್ ಆ ಕಾಲದಲ್ಲಿ ಕಸ್ಕರ್‌ನಲ್ಲಿ ಇದ್ದರು. ಕಸ್ಕರ್ ಎಂಬುದು ನೆಹ್ರೂನ್‌ನಿಂದ ಬಸ್‌ರದ ಸಮೀಪ ದಜ್‌ಲ ನದಿಯ ಬಲಗಡೆ ವರೆಗಿನ ಪ್ರದೇಶವಾಗಿದೆ. ಅದರಲ್ಲಿ ಇಪ್ಪತ್ತಕ್ಕೂ ಹೆಚ್ಚಿನ ಹಳ್ಳಿಗಳು ಮತ್ತು ಗ್ರಾಮಗಳಿದ್ದುವು. ಹೇಗಿದ್ದರೂ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ನುಮಾನರಿಗೆ ನಹಾವಂದ್ ಹೋಗಲು ಆಜ್ಞಾಪಿಸಿದರು. ಒಂದುವರೆ ಲಕ್ಷ ಇರಾನಿಯ ವಿರುದ್ಧ ಮುಸ್ಲಿಮರ ಸಂಖ್ಯೆ ಮುವತ್ತು ಸಾವಿರವಾಗಿತ್ತು. ಹಝ್ರತ್ ನುಮಾನ್ ಸೈನ್ಯದ ಪಂಕ್ತಿಗಳಲ್ಲಿ ಸುತ್ತಿ ಅವರಿಗೆ ನಿರ್ದೇಶನಗಳನ್ನು ಕೊಟ್ಟರು. ನಾನು ಶಹೀದನಾದರೆ ಸೈನ್ಯದ ನೇತೃತ್ವ ಹುಧೈಫ ವಹಿಸುವರು. ಅವರು ಹುತಾತ್ಮರಾದರೆ, ಸೈನ್ಯದ ಸೇನಾಧಿಪತಿ ಇವರು ಆಗುವರು ಎಂದು ಒಬ್ಬರ ಹೆಸರು ಅವರು ಹೇಳಿದರು. ಹೀಗೆ ಒಂದೊಂದಾಗಿ ಏಳು ಜನರ ಹೆಸರನ್ನು ಅವರು ಹೇಳಿದರು. ಅನಂತರ ಅಲ್ಲಾಹನಲ್ಲಿ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್ ನಿನ್ನ ಧರ್ಮವನ್ನು ಆದರಣೀಯವನ್ನಾಗಿ ಮಾಡು. ನಿನ್ನ ದಾಸರಿಗೆ ಸಹಾಯವನ್ನು ನೀಡು. ಎಲ್ಲರಿಗಿಂತ ಮುಂಚೆ ನನಗೆ ಶಹೀದಿನ ಪದವಿಯನ್ನು ನೀಡು. ಮತ್ತೊಂದು ವರದಿ ಪ್ರಕಾರ ಅವರು ಹೀಗೆ ದುಆ ಮಾಡಿದ್ದರು ಎಂದು ಬಂದಿದೆ: ಹೇ ಅಲ್ಲಾಹ್, ಇಸ್ಲಾಮಿಗೆ ಗೌರವ ಲಭಿಸುವಂತಹ ವಿಜಯದ ಮೂಲಕ ನನ್ನ ಕಣ್ಣುಗಳನ್ನು ತಂಪುಗೊಳಿಸು ಮತ್ತು ನನಗೆ ಶಹಾದತ್ ನೀಡು. ಯುದ್ಧ ಶುರುವಾಯಿತು. ಮುಸ್ಲಿಮರು ಎಷ್ಟು ಶೌರ್ಯದಿಂದ ಹೋರಾಡಿದರೆಂದರೆ, ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಮೈದಾನ ಮುಸ್ಲಿಮರ ಕೈಗಳಲ್ಲಿ ಬಂದಿತ್ತು. ಅದೇ ಯುದ್ಧದಲ್ಲಿ ನುಮಾನ್ ಹುತಾತ್ಮರಾದರು. ಅಬೂ ಲೂಅ್‌ಲುಅ ಫಿರೋಝ್ ಇದೇ ಯುದ್ಧದಲ್ಲಿ ಬಂಧಿಯಾದರು. ಅವರು ಗುಲಾಮರಾಗಿ ಹಝ್ರತ್ ಮುಗೈರ ಬಿನ್ ಶುಅ್‌ಬರ ಪಾಲಿಗೆ ಬಂದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಮೇಲೆ ಹಲ್ಲೆ ನಡೆಸಿ ಅವರನ್ನು ಶಹೀದ್ ಮಾಡಿದ ವ್ಯಕ್ತಿ ಇವನೇ ಆಗಿದ್ದನು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ನಹಾವಂದಿನ ಅಮೀರರಿಗೆ ಹೀಗೆ ಪತ್ರ ಬರೆದರು: ಅಲ್ಲಾಹನು ಮುಸ್ಲಿಮರಿಗೆ ವಿಜಯ ನೀಡಿದರೆ, ಐದನೇ ಒಂದು ಭಾಗವನ್ನು ಬೈತುಲ್ ಮಾಲಿಗೆ ಇರಿಸಿ ಬಾಕಿ ಎಲ್ಲ ಯುದ್ಧ ಸಂಪತ್ತನ್ನು ಮುಸ್ಲಿಮರಲ್ಲಿ ವಿತರಣೆ ಮಾಡಬೇಕು, ಆದರೆ ಈ ಸೈನ್ಯ ನಾಶವಾದರೆ, ಯಾವುದೇ ಚಿಂತೆಯಿಲ್ಲ, ಏಕೆಂದರೆ ಭೂಮಿಯ ಹೊರಮೈಗಿಂತ ಉತ್ತಮ ಅದರ ಗರ್ಭವಾಗಿದೆ ಎಂದರೆ ಅದರ ಖಬರ್ ಉತ್ತಮವಾಗಿದೆ.

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲಘಟ್ಟದಲ್ಲಿ ಒಂದು ಬಾರಿ ಬನೂ ಅಸದಿನ ಗೋತ್ರದ ಜನರು ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರ ನಮಾಝ್ ಬಗ್ಗೆ ಆಕ್ಷೇಪ ಎತ್ತಿದ್ದರು. ಅವರು ಸರಿಯಾಗಿ ನಮಾಝ್ ಮಾಡಿಸುತ್ತಿರಲಿಲ್ಲ ಎಂದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ದೂರುಕೊಟ್ಟರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹಝ್ರತ್ ಮುಹಮ್ಮದ್ ಬಿನ್ ಮಸ್ಲಿಮರನ್ನು ತನಿಖೆಗಾಗಿ ಕಳುಹಿಸಿದರು. ಇದು ಅವರ ಮೇಲೆ ಮಾಡಲಾದ ತಪ್ಪಾದ ಆರೋಪಗಳೆಂದು ತಿಳಿಯಿತು. ಆದರೆ ಕೆಲವು ಸಾಂದರ್ಭಿಕ ಕಾರಣಗಳಿಂದ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರನ್ನು ಮದೀನಕ್ಕೆ ಕರೆದರು. (ರೌಶನ್ ಸಿತಾರೆ,

ಸಂಪುಟ–2, ಪುಟ–88–90) (ಶರಹ್ ಝುರ್‌ಖಾನಿ, ಸಂಪುಟ–4, ಪುಟ–539, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಮುಜಮುಲ್ ಬಲದಾನ್, ಅನುವಾದ, ಪುಟ–292)

ಅದರ ವಿಶದ ವಿವರಣೆ ಸಹೀಹ್ ಬುಖ್ಖಾರಿಯಲ್ಲಿ ಹೀಗೆ ವರದಿಯಾಗಿದೆ. ಹಝ್ರ್‌ರತ್ ಜಾಬಿರ್ ಬಿನ್ ಸಮ್‌ರ ಹೇಳುತ್ತಾರೆ: ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರ ಬಗ್ಗೆ ಕೂಫದವರು ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹುರಿಗೆ ದೂರು ಕೊಟ್ಟರು. ಆಗ ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹು ಅವರನ್ನು ಪದಚ್ಯುತಿಗೊಳಿಸಿದರು. ಹಝ್ರ್‌ರತ್ ಅಮ್ಮಾರರನ್ನು ಅವರ ಅಧಿಕಾರಿಯನ್ನಾಗಿ ನೇಮಿಸಿದರು. ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹು ಸರಿಯಾಗಿ ನಮಾಝ್ ಮಾಡಿಸುತ್ತಿಲ್ಲ ಎಂದೂ ಕೂಫದ ಜನರು ಅವರ ಬಗ್ಗೆ ದೂರುಕೊಟ್ಟಿದ್ದರು. ಆಗ ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹು ಅವರನ್ನು ಮದೀನಕ್ಕೆ ಕರೆದು ಹೀಗೆ ಹೇಳಿದರು: ಹೇ ಅಬೂ ಇಸ್‌ಹಾಖ್ (ಅಬೂ ಇಸ್‌ಹಾಖ್ ಎಂಬುದು ಅವರ ಉಪನಾಮವಾಗಿತ್ತು) ನೀವು ಸರಿಯಾಗಿ ನಮಾಝ್ ಇಮಾಮತ್ ನಿರ್ವಹಿಸುತ್ತಿಲ್ಲ ಎಂದು ಈ ಜನರು ಹೇಳುತ್ತಿದ್ದಾರೆ. ಹಝ್ರ್‌ರತ್ ಅಬೂ ಇಸ್‌ಹಾಖ್ ಹೇಳಿದರು: ಅಲ್ಲಾಹನಾಣೆ ನಾನು ಹಝ್ರ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತೋರಿಸಿದ ರೀತಿಯಲ್ಲಿ ಇಮಾಮತ್ ಮಾಡುತ್ತಿರುವೆನು. ಅದರಲ್ಲಿ ಅಲ್ಪವೂ ಕೊರತೆ ಮಾಡುತ್ತಿರಲಿಲ್ಲ. ಇಶಾ ನಮಾಝ್ ನಿರ್ವಹಿಸುವಾಗ ಮೊದಲ ಎರಡು ರಕಅತ್‌ಗಳು ದೀರ್ಘವಾಗಿ ಮತ್ತು ನಂತರ ಎರಡು ರಕಅತ್‌ಗಳು ಹ್ರಸ್ವವಾಗಿ ನಿರ್ವಹಿಸುತ್ತೇನೆ. ಆಗ ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹು ಹೇಳಿದರು: ಹೇ ಅಬೂ ಇಸ್‌ಹಾಖ್ ನಿಮ್ಮ ಬಗ್ಗೆ ನನ್ನ ಭಾವನೆ ಇದೇ ಆಗಿತ್ತು. ನೀವು ಹೀಗೆಯೇ ಮಾಡುತ್ತಿರಬಹುದು ಎಂದು ನಿರೀಕ್ಷಿಸುತ್ತಿದ್ದೆ.

ಅನಂತರ ಅವರ ಬಗ್ಗೆ ಕೂಫದ ಜನರಿಂದಲೂ ಕೇಳಲಿಕ್ಕಾಗಿ ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹು ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರೊಂದಿಗೆ ಒಂದು ವ್ಯಕ್ತಿಯನ್ನು ಅಥವಾ ಕೆಲವು ವ್ಯಕ್ತಿಗಳನ್ನು ಕೂಫಗೆ ಕಳುಹಿಸಿದರು. ಆ ವ್ಯಕ್ತಿಗಳು ಒಂದು ಮಸೀದಿಯನ್ನೂ ಬಿಡದೆ ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರ ಬಗ್ಗೆ ಅನ್ವೇಷಣೆ ನಡೆಸಿದರು. ಜನರು ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರ ಬಗ್ಗೆ ಪ್ರಶಂಸೆ ಮಾತುಗಳನ್ನಾಡುತ್ತಿದ್ದರು. ಕೊನೆಗೆ ಅವರು ಬನೂ ಅಬ್ಸಿನ ಮಸೀದಿಗೆ ಹೋದರು. ಅಲ್ಲೊಬ್ಬ ಉಸಾಮ ಬಿನ್ ಖತಾದ ಎಂಬ ಹೆಸರಿನ ಅಬೂ ಸಾಅದ ಎಂಬ ಕುಲನಾಮವಿದ್ದ ಒಬ್ಬ ವ್ಯಕ್ತಿ ಹೇಳಿದನು: ನೀವು ದೇವನ ಆಣೆಹಾಕಿ ಕೇಳುತ್ತಿರುವುದರಿಂದ ಹೇಳುತ್ತೇನೆ: ಸತ್ಯವೇನೆಂದರೆ ಸಅದ್ ಸೈನ್ಯದೊಂದಿಗೆ ಹೋಗುತ್ತಿರಲಿಲ್ಲ. ಮಾತ್ರವಲ್ಲ ಅವರು ಸಮವಾಗಿ ವಿತರಣೆ ಮಾಡುತ್ತಿರಲಿಲ್ಲ ಹಾಗೂ ತೀರ್ಮಾನಗಳಲ್ಲಿ ನ್ಯಾಯ ಪಾಲಿಸುತ್ತಿರಲಿಲ್ಲ. ಈ ಆರೋಪಗಳನ್ನೆಲ್ಲ ಅವನು ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರ ಬಗ್ಗೆ ಹೊರಿಸಿದನು. ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹು ಹೇಳಿದರು: ಅಲ್ಲಾಹನಾಣೆ, ನಾನು ಮೂರು ದುಆಗಳನ್ನು ಮಾಡುತ್ತೇನೆ. ನನ್ನ ಮೇಲೆ ಆರೋಪ ಹೊರಿಸುವ ಈ ನಿನ್ನ ಈ ದಾಸ ಸುಳ್ಳುಗಾರನಾಗಿದ್ದರೆ ಹಾಗೂ ತೋರಿಕೆ ಮತ್ತು ಪ್ರಸಿದ್ಧಿಗಾಗಿ ನಿಂತಿರುವನಾದರೆ ಅವನ ಆಯಸ್ಸನ್ನು ವರ್ಧಿಸು, ಅವನನ್ನು ಕಂಗಾಳನ್ನಾಗಿ ಮಾಡು, ಅವನನ್ನು ವಿಪತ್ತಿಗೆ ಸಿಲುಕಿಸು, ಅನಂತರ ಕಾಲದಲ್ಲಿ ಅವನ ಕ್ಷೇಮದ ಬಗ್ಗೆ ಯಾರೇ ಕೇಳಿದ್ದರೂ ಅವನು ಹೀಗೆ ಹೇಳುತ್ತಿದ್ದ: ಬಹಳ ಮುದಿವೃದ್ಧನಾಗಿರುವೆನು. ಬಹಳ ಕೆಟ್ಟ ಸ್ಥಿತಿಯಲ್ಲಿದ್ದೇನೆ. ವಿಪತ್ತಿನಲ್ಲಿ ಸಿಲುಕಿರುವೆನು. ಹಝ್ರ್‌ರತ್ ಸಅದ್‌ರ ಶಾಪ ಪ್ರಾರ್ಥನೆಯ ಪರಿಣಾಮ ನನ್ನಲ್ಲಿ ಉಂಟಾಗಿದೆ. ಅದನ್ನು ನಾನು ಅನುಭವಿಸುತ್ತಿರುವೆನು. ಅಬ್ದುಲ್‌ಮಲಿಕ್ ಹೀಗೆ ಹೇಳುತ್ತಿದ್ದರು: ನಾನು ಅವರನ್ನು ಅದರ ನಂತರ ನೋಡಿದ್ದೆ. ಅವನ ಸ್ಥಿತಿ ಏನಾಗಿತ್ತೆಂದರೆ, ವಾರ್ಧಕ್ಯದ ಕಾರಣ ಅವನ ಕಣ್ಣಿನ ಹುಬ್ಬು ಮತ್ತು ರೆಪ್ಪೆಗಳು ಅವನ ಎರಡೂ ಕಣ್ಣುಗಳನ್ನು ಆವರಿಸಿದ್ದುವು. ಅಚ್ಚರಿಯ ಸಂಗತಿಯೇನೆಂದರೆ, ಇದಾಗ್ಯೂ ಅವನ ಸ್ವಭಾವದ ಸ್ಥಿತಿ ಹೇಗಿತ್ತೆಂದರೆ, ಮಾರ್ಗದಲ್ಲಿ ಹೆಣ್ಮಕ್ಕಳನ್ನು ಕೆಣಕುತ್ತಿದ್ದನು. ಅವರನ್ನು ಸತಾಯಿಸುತ್ತಿದ್ದನು. ಬುಖ್ಖಾರಿಯಲ್ಲಿ ಈ ಘಟನೆಯನ್ನು ಪೂರ್ತಿಯಾಗಿ ನಮೂದಿಸಲಾಗಿದೆ. (ಸಹೀಹ್ ಬುಖಾರಿ ಕಿತಾಬುಲ್ ಅಝಾನ್, ಹದೀಸ್–755)

ಹೇಗಿದ್ದರೂ ಈ ದೂರುಗಳಿಂದ ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರಿಗೆ ತುಂಬ ದುಃಖವಾಯಿತು. ಅವರು ಹೇಳಿದರು: ಅರಬರಲ್ಲಿ ಅಲ್ಲಾಹನ ಮಾರ್ಗದಲ್ಲಿ ಬಾಣ ಹೂಡಿದ ಮೊದಲ ವ್ಯಕ್ತಿ ನಾನಾಗಿರುವೆನು. "ನಾವು ಪೈಗಂಬರ್ ಸಲ್ಲಲ್ಲಾಹ ಅಲೈಹಿ ವಸಲ್ಲಮ್‌ರೊಂದಿಗೆ ಯುದ್ಧಗಳಿಗೆ ಹೊರಡುತ್ತಿದ್ದೆವು. ನಮ್ಮ ಸ್ಥಿತಿ ಏನಾಗಿತ್ತೆಂದರೆ, ನಮ್ಮ ಬಳಿ ಮರಗಳ ಎಲೆಗಳ ಹೊರತು ತಿನ್ನಲಿಕ್ಕೆ ಏನೂ ಇರುತ್ತಿರಲಿಲ್ಲ. ನಮ್ಮ ಪರಿಸ್ಥಿತಿ ಏನಾಗಿತ್ತೆಂದರೆ, ನಮ್ಮಲ್ಲಿ ಪ್ರತಿಯೊಬ್ಬರು ಆಡುಗಳ ಹಾಗೆ ಅಥವಾ ಒಂಟೆಗಳ ಹಿಕ್ಕೆಯ ರೀತಿಯ ಮಲ ವಿಸರ್ಜನೆ ಮಾಡುತ್ತಿದ್ದವು. ಎಂದರೆ, ಒಣಗಿದ, ತೇವವಿಲ್ಲದ. ಈಗ ಸ್ಥಿತಿ ಏನೆಂದರೆ ಬನೂ ಅಸದ್ ಬಿನ್ ಖುಝೈಮ ನನಗೆ ಇಸ್ಲಾಮಿನ ಶಿಷ್ಟಾಚಾರಗಳನ್ನು ಕಲಿಸುತ್ತಿದ್ದಾನೆ. ಹಾಗಾದರೆ ನಾನು ಹತಭಾಗಿಯೇ ಸರಿ, ನನ್ನ ಕರ್ಮಗಳೆಲ್ಲ ವ್ಯರ್ಥವೇ ಸರಿ. ಬನೂ ಅಸದಿನ ಜನರು ಹಝ್ರ್‌ರತ್ ಸಅದ್ ಬಗ್ಗೆ ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹುರ ಬಳಿ ಹೋಗಿ ಚಾಡಿ ಹೇಳಿದರು. ಇದು ಸಹ ಬುಖ್ಖಾರಿಯ ವರದಿಯಾಗಿದೆ. (ಸಹೀಹ್ ಬುಖಾರಿ, ಕಿತಾಬ್ ಫಝಾಇಲುಸ್ಸಹಾಬ, ಹದೀಸ್–3728) (ಸನನ್ ಅತ್ತಿರ್‌ಮಿಝಿ ಅಬ್ವಾಬುಝ್ಝುಹದ್, ಹದೀಸ್–2365–2366)

ಹಿಜರೀ 23ರಲ್ಲಿ ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹುರ ಮೇಲೆ ಮಾರಣಾಂತಿಕ ಹಲ್ಲೆ ನಡೆದಾಗ ಖಿಲಾಫತಿಗಾಗಿ ಯಾರದಾದರೂ ಹೆಸರನ್ನು ಸೂಚಿಸಲು ಜನರು ಅವರಲ್ಲಿ ಕೋರಿದರು. ಆಗ ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹು ಖಿಲಾಫತ್ ಚುನಾವಣೆಗಾಗಿ ಒಂದು ಚುನಾವಣಾ ಮಂಡಳಿಯನ್ನು ನಿಶ್ಚಯಿಸಿದರು. ಅದರಲ್ಲಿ ಹಝ್ರ್‌ರತ್ ಉಸ್ಮಾನ್(ರ), ಹಝ್ರ್‌ರತ್ ಅಲಿ(ರ), ಹಝ್ರ್‌ರತ್ ಅಬ್ದುರಹ್ಮಾನ್ ಬಿನ್ ಔಫ್(ರ), ಹಝ್ರ್‌ರತ್ ಸಅದ್ ಬಿನ್ ಅಬೀ ವಖಾಸ್(ರ), ಹಝ್ರ್‌ರತ್ ಝುಬೈರ್ ಬಿನ್ ಅವಾಮ್(ರ) ಮತ್ತು ಹಝ್ರ್‌ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಇದ್ದರು. ಹಝ್ರ್‌ರತ್ ಉಮರ್ ರಝ್ಹಿಯಲ್ಲಾಹು ಅನ್‌ಹು ಹೇಳಿದರು: ಇವರಲ್ಲಿ ಯಾರನ್ನಾದರೂ ಆಯ್ಕೆ ಮಾಡಿರಿ. ಏಕೆಂದರೆ ಹಝ್ರ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಸ್ವರ್ಗವಾಸಿಗಳು ಎಂದು ಬಣ್ಣಿಸಿರುವರು. ಖಿಲಾಫತ್ ಸಅದ್ ಬಿನ್ ಅಬೀ ವಖಾಸರಿಗೆ ಲಭಿಸಿದರೆ, ಅವರೇ ಖಲೀಫರಾಗಲಿ. ಅನ್ಯಥಾ ನಿಮ್ಮಲ್ಲಿ ಯಾರೇ ಖಲೀಫರಾಗಲಿ, ಅವರು ಸಅದ್‌ರಿಂದ ನೆರವು ಪಡೆಯುತ್ತಿರಲಿ. ಏಕೆಂದರೆ ಅವರು ಯಾವುದೇ ಕೆಲಸಮಾಡಲು ಅಶಕ್ತರಾದ ಕಾರಣದಿಂದ ನಾನು ಅವರನ್ನು ಪದಚ್ಯುತಿಗೊಳಿಸಿರಲಿಲ್ಲ ಅಥವಾ ಅವರು ಯಾವುದೇ ಮೋಸ ಕೂಡ ಮಾಡಿರಲಿಲ್ಲ.(ಸಹೀಹ್ ಬುಖಾರಿ, ಕಿತಾಬ್ ಫಝಾಇಲುಸ್ಸಹಾಬ, ಬಾಬ್ ಖಿಸ್ಸತುಲ್ ಬೈಅ, ಹದೀಸ್–3700) (ಸಹೀಹ್ ಬುಖಾರಿ, ಕಿತಾಬುಲ್ ಜನಾಇಝ್, ಹದೀಸ್–1392)

ಹಝ್ರ್‌ರತ್ ಉಸ್ಮಾನ್ ರಝ್ಹಿಯಲ್ಲಾಹು ಅನ್‌ಹು ಖಲೀಫರಾದಾಗ ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರನ್ನು ಪುನಃ ಕೂಫದ ಅಧಿಕಾರಿಯನ್ನಾಗಿ ಮಾಡಿದರು. ಅವರು ಮೂರು ವರ್ಷಗಳ ಕಾಲ ಈ ಹುದ್ದೆಯಲ್ಲಿ ಇದ್ದರು. ಅನಂತರ ಯಾವುದೋ ಕಾರಣದಿಂದ ಬೈತುಲ್ ಮಾಲಿನ ಇಂಚಾರ್ಜ್ ಆಗಿದ್ದ ಹಝ್ರ್‌ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್‌ರೊಂದಿಗೆ ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರ ಭಿನ್ನಾಭಿಪ್ರಾಯವುಂಟಾಯಿತು. ಈ ಕಾರಣದಿಂದ ಹಝ್ರ್‌ರತ್ ಉಸ್ಮಾನ್ ರಝ್ಹಿಯಲ್ಲಾಹು ಅನ್‌ಹು ಹಝ್ರ್‌ರತ್ ಸಅದ್‌ರನ್ನು ಪದಚ್ಯುತಿಗೊಳಿಸಿದರು. ವಜಾ ಮಾಡಲ್ಪಟ್ಟ ನಂತರ ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹು ಏಕಾಂತವಾಸ ಕೈಗೊಂಡರು. ಹಝ್ರ್‌ರತ್ ಉಸ್ಮಾನ್ ರಝ್ಹಿಯಲ್ಲಾಹು ಅನ್‌ಹುರ ವಿರುದ್ಧ ಫಿತ್ನಗಳು ಶುರುವಾದಾಗಲೂ ಅವರು ವಿರಾಗಿಯಾಗಿಯಂತೆಯೇ ಇದ್ದರು. (ಸೈರುಸ್ಸಹಾಬ, ಸಂಪುಟ–2, ಪುಟ–120)

ಒಂದು ವರದಿಯಲ್ಲಿ ಹೀಗೆ ಬಂದಿದೆ. ಫಿತ್ನದ ಕಾಲಘಟ್ಟದಲ್ಲಿ ಒಂದು ಬಾರಿ ಹಝ್ರ್‌ರತ್ ಸಅದ್‌ರ ಮಗನು ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹುರೊಡನೆ ಕೇಳಿದನು: ನೀವು ಈಗ ಜಿಹಾದ್ ಮಾಡದಿರಲು ಕಾರಣವೇನು. ಆಗ ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹು ಹೀಗೆ ಉತ್ತರಿಸಿದರು: ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿಯನ್ನು ಗುರುತಿಸುವ ಖಡ್ಗ ತಂದುಕೊಡುವ ವರೆಗೆ ನಾನು ಯುದ್ಧ ಮಾಡಲಿಕ್ಕಿಲ್ಲ. ಈಗಂತು ಮುಸ್ಲಿಮರು ಪರಸ್ಪರ ಜಗಳವಾಡುತ್ತಿದ್ದಾರೆ. ಇನ್ನೊಂದು ವರದಿಯಲ್ಲಿ ಹೀಗೆಯೂ ಇದೆ. ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹು ಹೇಳಿದರು: ಕಣ್ಣುಗಳು, ತುಟಿಗಳು ಮತ್ತು ನಾಲಗೆಯಿರುವ ಹಾಗೂ ಯಾರು ಕಾಫಿರ್ ಎಂದೂ ಯಾರೂ ಸತ್ಯವಿಶ್ವಾಸಿಯೆಂದೂ ನನಗೆ ತಿಳಿಸುಕೊಡುವ ಖಡ್ಗವಿದ್ದರೆ ನನಗೆ ಕೊಡು, ಇಲ್ಲಿಯ ತನಕ ನಾನು ಸತ್ಯನಿಷೇಧಿಗಳ ವಿರುದ್ಧ ಮಾತ್ರವೇ ಹೋರಾಡಿರುವೆನು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–106, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಸುನನ್ ತಿರ್ಮಿಧಿಯ ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರ್‌ರತ್ ಸಅದ್ ರಝ್ಹಿಯಲ್ಲಾಹು ಅನ್‌ಹು ಹಝ್ರ್‌ರತ್ ಉಸ್ಮಾನ್ ರಝ್ಹಿಯಲ್ಲಾಹು ಅನ್‌ಹುರ ಕಾಲದಲ್ಲಿ ಶುರುವಾದ ಫಿತ್ನಗಳ ಬಗ್ಗೆ ಹೀಗೆ ಹೇಳಿದರು: ಹಝ್ರ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದ್ದ ಬಗ್ಗೆ ನಾನು ಸಾಕ್ಷ್ಯವಹಿಸುತ್ತೇನೆ: ಖಂಡಿತವಾಗಿಯೂ ಕೆಲವು ಕಾಲಗಳ ನಂತರ ಒಂದು ಫಿತ್ನ ಉಂಟಾಗುವುದು. ಆ ಕಾಲದಲ್ಲಿ ಕುಳಿತುಕೊಂಡಿರುವವನು ನಿಂತುಕೊಂಡಿರುವವನಿಗಿಂತ ಉತ್ತಮವಾಗಿರುವನು. ನಿಂತುಕೊಂಡಿರುವವನು ನಡೆಯುವವನಿಗಿಂತ ಉತ್ತಮವಾಗಿರುವನು ಮತ್ತು ನಡೆಯುವವನು ಓಡುವವನಿಗಿಂತ ಉತ್ತಮವಾಗಿರುವನು. ಯಾವುದೇ ರೀತಿಯಲ್ಲೂ ಫಿತ್ನದಲ್ಲಿ

ಭಾಗವಹಿಸಬಾರದು, ಬದಲಿಗೆ ಅದರಿಂದ ಬಿಟ್ಟುನಿಲ್ಲಬೇಕು ಎಂದಾಗಿದೆ ತಾತ್ಪರ್ಯ. ಆಗ ಯಾರೋ ಒಬ್ಬನು ಕೇಳಿದನು: ಫಿತ್ನ ನನ್ನ ಮನೆಯೊಳಗೆ ಪ್ರವೇಶಿಸಿದರೆ ನಾನು ಏನು ಮಾಡಬೇಕು. ಅದಕ್ಕೆ ಉತ್ತರವಾಗಿ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ಹೇಳಿದರು: ನೀನು ಆದಮನ ಮಗನ ಹಾಗೆ ಆಗು. (ಸುನನ್ ತಿರ್ಮಿದಿ, ಅಬ್ವಾಬುಲ್ ಫಿತನ್, ಹದೀಸ್-2194)

ಅಂದರೆ: ಪವಿತ್ರ ಖುರ್‌ಆನಿನಲ್ಲಿ ಆದಮನ ಮಗನ ಬಗ್ಗೆ ಹೇಳಿದ ಹಾಗೆ ತನ್ನ ಸ್ವಂತ ಸಂರಕ್ಷಣೆ ಮಾಡು, ಆದರೆ ಕೊಲ್ಲುವ ಉದ್ದೇಶದಿಂದ ಪರಸ್ಪರ ಜಗಳವಾಡಬಾರದು. ಇದೇ ಘಟನೆ ಪವಿತ್ರ ಖುರ್‌ಆನಿನಲ್ಲಿ ವಿವರಿಸಲಾಗಿದೆ. ಇದೇ ಉದಾಹರಣೆಯನ್ನು ಅವರು ಕೊಟ್ಟಿದ್ದರು ಎಂದು ಇದರಿಂದ ತೋರುತ್ತದೆ.

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲಿ ಫಿತ್ನಗಳು ಶುರುವಾದಾಗ ಅವುಗಳನ್ನು ನಂದಿಸಲು ಸಹಾಬಿವರ್ಯರ ಪ್ರಯತ್ನಗಳ ಪ್ರಸ್ತಾಪ ಮಾಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಬಳಿ ಒಟ್ಟುಗೂಡುವ ಅವಕಾಶವನ್ನು ಸಹಾಬಿವರ್ಯರಿಗೆ ನೀಡಲಾಗುತ್ತಿರಲಿಲ್ಲ. ಆದರೂ ಅವರು ತಮ್ಮ ಕರ್ತವ್ಯದಿಂದ ಅಜಾಗರೂಕರಾಗಿರಲಿಲ್ಲ. ಸಂದರ್ಭಾನುಸಾರ ಅವರು ತಮ್ಮ ಕೆಲಸಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಿದ್ದರು. ಜನಸಾಮಾನ್ಯರ ಮೇಲೆ ತಮ್ಮ ಉತ್ತಮ ಸ್ವಭಾವದ ಪ್ರಭಾವವನ್ನು ಬೀರಬಲ್ಲವರಾದ ಹಿರಿವಯಸ್ಸಿನವರು ತಮ್ಮ ಸಮಯಗಳನ್ನು ಜನರಿಗೆ ತಿಳಿಹೇಳಲು ಖರ್ಚುಮಾಡುತ್ತಿದ್ದರು. ಇಂತಹ ಪ್ರಭಾವವನ್ನು ಬೀರಲಾರದವರು ಮತ್ತು ಯುವಕರು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಸಂರಕ್ಷಣೆ ಮಾಡುವ ಪ್ರಯತ್ನದಲ್ಲಿ ಮಗ್ನರಾಗುತ್ತಿದ್ದರು. ಮೊದಲು ಪ್ರಸ್ತಾಪಿಸಲಾದ ಸಂಘದವರಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರವರು ಪಿತೂರಿಯನ್ನು ಕಡಿಮೆಗೊಳಿಸಲು ಅತ್ಯಧಿಕವಾಗಿ ಪ್ರಯತ್ನಿಸುತ್ತಿದ್ದರು. (ಇಸ್ಲಾಮ್ ಮೇ ಇಖ್ತೆಲಾಫಾತ್ ಕಾ ಆಘಾಝ್, ಅನ್ವಾರುಲ್ ಉಲೂಮ್, ಸಂಪುಟ-4, ಪುಟ-321)

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲೂ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ವಿರಾಗಿಯಂತೆ ಜೀವನಸಾಗಿಸುತ್ತಿದ್ದರು. ಒಂದು ವರದಿ ಪ್ರಕಾರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಮುಆವಿಯಾರ ನಡುವೆ ಭಿನ್ನಾಭಿಪ್ರಾಯಗಳು ವರ್ಧಿಸಿದಾಗ ಅಮೀರ್ ಮುಆವಿಯಾ 3 ಮೂರು ಸಹಾಬಿವರ್ಯರಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ ರಝಿಯಲ್ಲಾಹು ಅನ್‌ಹುರಿಗೆ ತನ್ನನ್ನು ಸಹಾಯ ಮಾಡಬೇಕೆಂದು ಪತ್ರ ಬರೆದಿದ್ದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಎದುರಾಗಿ ತನಗೆ ನೆರವು ನೀಡಬೇಕೆಂದು ಅವರು ಬರೆದಿದ್ದರು. ಆದರೆ ಅವರು ಮೂವರೂ ಅದನ್ನು ನಿರಾಕರಿಸಿದರು.

ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ಅಮೀರ್ ಮುಆವಿಯಾಗೆ ಈ ಪದ್ಯಪಂಕ್ತಿಗಳನ್ನು ಬರೆದು ಕಳಿಸಿದರು:

**ಮುಆವಿಯ ದಾಉಕದ್ದಾಇಲ್‌ಇಯಾ, ವಲೈಸ ಲಮಾ ತಜೀಉ ಬಿಹೀ ದವಾಉ,**

**ಅಯದ್‌ಊನಿ ಅಬೂ ಹಸನಿ ಅಲಿ, ಫಲಮ್ ಅರದ್ದುದ್ ಅಲೈಹಿ ಮಾಯಶಾಉ,**

**ವಖುಲ್‌ತು ಲಹೂ ಅಅ್‌ತನೀ ಸೈಫನ್ ಬಸೀರ, ತಮೀಝ್ಬಿ ಬಿಹಿಲ್ ಅದಾವತು ವಲ್‌ವಿಲಾ,**

**ಅತ್‌ಮಉ ಫಿಲ್ಲಧಿ ಅಅ್‌ಯಾ ಉಲ್‌ಯಾ, ಅಲಾ ವಾಖಿದ್ ತಮಅತ್ ಬಿಹಿಲ್ ಅಫಾಉ,**

**ಲಯೌಮಿನ್ ಮಿನ್‌ಹು ಖೈರನ್ ಮಿನ್‌ಕ ಹಯ್ಯನ್, ವ ಮೈತನ್ ಅಂತ ಲಿಲ್ ಮರ್‌ಇ ಫದಅಹು.**

ಅದರ ಅರ್ಥ: ಹೇ ಮುಆವಿಯಾ ನಿನ್ನ ರೋಗ ತುಂಬಾ ತೀವ್ರತರದ್ದಾಗಿದೆ. ನಿನ್ನ ಕಾಯಿಲೆಗೆ ಯಾವುದೇ ಮದ್ದಿಲ್ಲ. ನೀನು ಇಷ್ಟು ಸಹ ತಿಳಿಯುವುದಿಲ್ಲವೇ? ಅಬೂ ಹಸನ್ ಎಂದರೆ ಅಲಿ ರಝಿಯಲ್ಲಾಹು ಅನ್‌ಹು ನನ್ನೊಡನೆ ಹೋರಾಡಲು ಹೇಳಿದರು. ಆದರೆ ನಾನು ಅವರ ಮಾತನ್ನು ಸಹ ಕೇಳಿಲ್ಲ. ಶತ್ರು ಮತ್ತು ಮಿತ್ರನನ್ನು ಬೇರೆ ಬೇರೆಯಾಗಿ ತೋರಿಸುವಂತಹ ಅಂತರ್‌ದೃಷ್ಟಿಯಿರುವ ಖಡ್ಗವನ್ನು ನನಗೆ ತಂದುಕೊಡಲು ನಾನು ಅವರನ್ನು ಕೋರಿದ್ದೆ. ಹೋರಾಡಲಿಕ್ಕಾಗಿ ಹೇಳಿದ್ದ ಹಝ್ರತ್ ಅಲಿಯ ಮಾತನ್ನೂ ಕೇಳದ ನಾನು ನಿನ್ನ ಮಾತನ್ನು ಕೇಳುವೆನು ಎಂದು ನೀನು ಪ್ರತೀಕ್ಷಿಸುತ್ತೀಯಾ? ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಜೀವಿತದ ಒಂದು ದಿನ ನಿನ್ನ ಪೂರ್ತಿ ಜೀವನ ಮತ್ತು ಮರಣಕ್ಕಿಂತ ಉತ್ತಮವಾಗಿದೆ. ಹೀಗಿರುವಾಗ ನೀನು ಅಂತಹ ವ್ಯಕ್ತಿ ವಿರುದ್ಧ ಹೋರಾಡಲು ನನ್ನನ್ನು ಕರೆಯುತ್ತಿರುವಿಯಾ? ಅಸದುಲ್ ಗ್ಗಾಬದಲ್ಲಿ ಈ ಘಟನೆ ವರದಿಯಾಗಿದೆ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಭಾಗ-2, ಪುಟ-455, ಸಅದ್ ಬಿನ್ ಮಾಲಿಕ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಒಂದು ವರದಿಯಲ್ಲಿ ಹೀಗೆ ಬಂದಿದೆ: ಒಂದು ಸಲ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರೊಡನೆ ಅಮೀರ್ ಮುಆವಿಯಾ ಕೇಳಿದರು: ಅಬೂ ತುರಾಬ್‌ರನ್ನು, ಇದು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಉಪನಾಮವಾಗಿತ್ತು. ಎಂದರೆ, ನೀವು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರನ್ನು ದೂಷಿಸದಿರಲು ಕಾರಣವೇನು? ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ಹೇಳಿದರು: ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಗ್ಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಮೂರು ಸಂಗತಿಗಳಲ್ಲಿ ಒಂದಾದರೂ ನನಗೆ ಲಭಿಸಿದ್ದರೆ ಅದು ನನಗೆ ಕೆಂಪು ಒಂಟೆಗಳಿಂದ ಪ್ರಿಯವಾಗುತ್ತಿತ್ತು.ಈ ಮೂರು ಸಂಗತಿಗಳ ಕಾರಣ ನಾನು ಅವರ ಬಗ್ಗೆ ಕೆಟ್ಟದ್ದು ಹೇಳಲಾರೆನು. ಅದರಲ್ಲಿ ಒಂದು ಇದಾಗಿದೆ. ಒಂದು ಬಾರಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧಕ್ಕೆ ಹೋಗುವ ಸಂದರ್ಭದಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಮದೀನದಲ್ಲಿ ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಆಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಕೇಳಿದರು: ಯಾ ರಸೂಲುಲ್ಲಾಹ್, ನೀವು ನನ್ನನ್ನು ಸ್ತ್ರೀಯರು ಮತ್ತು ಮಕ್ಕಳ ನಡುವೆ ಬಿಟ್ಟುಹೋಗುತ್ತಿರುವಿರಾ? ಆಗ ಹಝ್ರತ್ ಪೈಗಂಬರ್ ಸಲ್ಲಲಾಹು ಅಲೈಹಿ ವಸಲ್ಲಮರು ಹೇಳಿದರು: ಹಾರೂನ್ ಅಲೈಹಿಸ್ಸಲಾಮರಿಗೆ ಮೂಸಾ ಅಲೈಹಿಸ್ಸಲಾಮರೊಡನೆ ಇದ್ದ ಅದೇ ಸಂಬಂಧ ನಿನಗೆ ನನ್ನೊಂದಿಗೆ ಇದೆ ಎಂಬ ಸಂಗತಿಯಿಂದ ನಿನಗೆ ಸಂತೋಷವಿಲ್ಲವೇ? ನಾನು ಇಲ್ಲಿಂದ ಹೋದ ನಂತರ ನಿನಗೆ ಪ್ರವಾದಿತ್ವದ ಪದವಿಯಿಲ್ಲ ಎಂಬ ವ್ಯತ್ಯಾಸ ಮಾತ್ರವಿದೆ. ಎರಡನೇ ಸಂಗತಿಯೇನೆಂದರೆ, ಖೈಬರ್ ಯುದ್ಧದ ವೇಳೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಹೇಳಿದರು: ಯಾರು ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು ಪ್ರೀತಿಸುತ್ತಾನೋ ಮತ್ತು ಯಾರನ್ನು ಅಲ್ಲಾಹನು ಮತ್ತು ಅವನ ಪ್ರವಾದಿ ಪ್ರೀತಿಸುತ್ತಾರೋ ಅಂತಹ ವ್ಯಕ್ತಿಗೆ ನಾನು ಇಸ್ಲಾಮಿನ ಧ್ವಜವನ್ನು ಕೊಡುವೆನು. ಧ್ವಜ ನಮಗೆ ಸಿಗಬೇಕೆಂದು ಎಲ್ಲರಲ್ಲಿ ಬಯಕೆಯುಂಟಾಯಿತು. ನಾವು ಸಹ ಅಲ್ಲಾಹನನ್ನೂ ಅವನ ರಸೂಲರನ್ನೂ ಪ್ರೀತಿಸುತ್ತಿದ್ದುವು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಕರೆಯಲು ಹೇಳಿದರು. ಧ್ವಜವನ್ನು ನಮ್ಮಲ್ಲಿ ಯಾರಿಗೂ ನೀಡಲಿಲ್ಲ. ಹಝ್ರತ್ ಅಲಿ ಬಂದರು. ಅವರ ಕಣ್ಣಿಗೆ ಕಾಯಿಲೆಯಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಬಾಯಿಯ ಲಾಲಾರಸವನ್ನು ಅವರ ಕಣ್ಣಿಗೆ ಹಾಕಿದರು.ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಇಸ್ಲಾಮಿನ ಬಾವುಟವನ್ನು ನೀಡಿದರು. ಅಲ್ಲಾಹನು ಆ ದಿನ ಮುಸ್ಲಿಮರಿಗೆ ವಿಜಯ ನೀಡಿದನು. ಮೂರನೇ ಸಂಗತಿಯೇನೆಂದರೆ, **ಫಕುಲ್ ತಆಲೌ ನದ್‌ಉ ಅಬ್‌ನಾಅನಾ ವ ಅಬ್‌ನಾಅಕುಮ್ ವ ನಿಸಾಅನಾ ವ ನಿಸಾಅಕುಮ್** ಎಂದರೆ, ಹೇಳು: 'ಬನ್ನಿರಿ, ನಮ್ಮ ಸಂತಾನಗಳನ್ನೂ ನಿಮ್ಮ ಸಂತಾನಗಳನ್ನೂ ನಮ್ಮ ಸ್ತ್ರೀಯರನ್ನೂ ನಿಮ್ಮ ಸ್ತ್ರೀಯರನ್ನೂ ಕರೆಯೋಣ' ಎಂಬ ಆಯತ್ ಅವತೀರ್ಣವಾದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು, ಹಝ್ರತ್ ಫಾತಿಮ ರಝಿಯಲ್ಲಾಹು ಅನ್‌ಹು, ಹಝ್ರತ್ ಹಸನ್ ಮತ್ತು ಹುಸೈನ್‌ರನ್ನು ಕರೆದು ಹೀಗೆ ಹೇಳಿದರು: ಹೇ ಅಲ್ಲಾಹ್, ಇದು ನನ್ನ ಕುಟುಂಬವಾಗಿದೆ. (ಸುನನ್ ಅತ್ತಿರ್‌ಮಿಝಿ, ಅಬ್ವಾಬುಲ್ ಮನಾಖಿಬ್, ಹದೀಸ್-3724)

ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹುರ ಮಗನಾದ ಮುಸ್‌ಅಬ್ ಬಿನ್ ಸಅದ್ ಹೇಳುತ್ತಾರೆ: ನನ್ನ ತಂದೆಯ ಮರಣದ ಸಮಯದಲ್ಲಿ ಅವರ ತಲೆ ನನ್ನ ಮಡಿಲಲ್ಲಿತ್ತು. ನನಗೆ ಕಣ್ಣೀರು ಉಕ್ಕಿಬಂತು. ಅವರು ನನ್ನನ್ನು ನೋಡಿದರು. ಎಲೈ ನನ್ನ ಪ್ರಿಯ ಮಗ, ನೀನೇಕೆ ಅಳುತ್ತಿದ್ದೀಯಾ? ನಾನು ಹೇಳಿದೆ, ನಿಮ್ಮ ಮರಣದ ದುಃಖ ಮತ್ತು ನಿಮ್ಮ ನಂತರ ನಿಮಗೆ ಸರಿಸಾಟಿಯಾಗಿ ನಾನು ಯಾರನ್ನು ಕಂಡಿಲ್ಲ ಎಂಬ ದುಃಖದಿಂದ ಅಳುತ್ತಿದ್ದೇನೆ. ಆಗ ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ಹೇಳಿದರು, ನನ್ನ ಬಗ್ಗೆ ಚಿಂತಿಸಿ ನೀನು ಅಳಬೇಡ. ಅಲ್ಲಾಹನು ನನಗೆ ಎಂದಿಗೂ ಶಿಕ್ಷೆ ನೀಡಲಿಕ್ಕಿಲ್ಲ. ನಾನು ಸ್ವರ್ಗವಾಸಿಯವರಲ್ಲಿ ಸೇರಿದವನಾಗಿರುವೆನು. ಕೆಲವರು ಕೆಲವರ ಬಗ್ಗೆ ಆಕ್ಷೇಪವೆತ್ತುತ್ತಾರೆ. ಹಾಗೆ ಹೀಗೆ ಹೇಳಿದರೆಂದು..... ಅವರು ಸ್ವರ್ಗವಾಸಿಗಳಲ್ಲಿ ಹೇಗೆ ಆದರೆಂದು. ಇಲ್ಲಿ ಹಝ್ರತ್ ಸಅದ್ ಸಹ ಹೇಳುತ್ತಾರೆ ನಾನು

ಸ್ವರ್ಗವಾಸಿಗಳಲ್ಲಿ ಆಗಿರುವೆನೆಂದು. ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಅಲ್ಲಾಹನಗಾಗಿ ಮಾಡಿದ ಒಳಿತುಗಳಿಗೆ ಪ್ರತಿಫಲಗಳನ್ನು ನೀಡುತ್ತಾನೆ. ಸತ್ಯನಷೇಧಿಗಳು ಮಾಡುವ ಒಳ್ಳೆಯ ಕೆಲಸಗಳ ಕಾರಣದಿಂದ ಅವರ ಶಿಕ್ಷೆಯನ್ನು ಹಗುರಗೊಳಿಸುತ್ತಾನೆ. ಆದರೆ ಆ ಒಳ್ಳೆಯ ಕೆಲಸಗಳು ಕೊನೆಗೊಳ್ಳುವಾಗ ಅವರಿಗೆ ಪುನಃ ಶಿಕ್ಷೆ ನೀಡುತ್ತಾನೆ. ಮನುಷ್ಯನು ತಾನು ಮಾಡಿದ ಸತ್ಕರ್ಮಗಳ ಪ್ರತಿಫಲವನ್ನು ಅಲ್ಲಾಹನಲ್ಲಿ ಬೇಡಬೇಕು. (ಅತ್ತಬಖಾತುಲ್ ಕುಬ್ರ, ಭಾಗ–3, ಪುಟ–108–109, ಸಅದ್ ಬಿನ್ ಅಬೀ ವಖ್ಖಾಸ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲಬನಾನ್, 1990)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹು ಹಿಜರೀ 55ಕ್ಕೆ ನಿಧನರಾದರು. ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರ ಮಗನು ವರದಿ ಮಾಡುತ್ತಾನೆ. ನಾನು ನನ್ನ ತಂದೆಯೊಡನೆ ಕೇಳಿದೆ, ನೀವು ಯಾರೊಂದಿಗೆ ತೋರಿಸದಂತಹ ಉತ್ತಮ ನಡೆವಳಿಕೆ ಅನ್ಸಾರ್ ಗೋತ್ರದೊಂದಿಗೆ ಮಾಡುತ್ತೀರಿ. ಆಗ ಅವರು ಹೇಳಿದರು: ಹೇ ನನ್ನ ಮಗನೇ, ನಾನು ಅವರೊಡನೆ ಉತ್ತಮವಾಗಿ ವರ್ತಿಸುವುದರಿಂದ ನಿನ್ನ ಹೃದಯಲ್ಲಿ ಏನಾದರೂ ಕ್ಷೇಶವುಂಟಾಗುತ್ತಿದೆಯೇ? ಆಗ ನಾನು ಹೇಳಿದೆ, ನಿಲ್ಲ, ಆದರೆ ನಿಮ್ಮ ಈ ವರ್ತನೆಯ ಕಾರಣದಿಂದ ನನಗೆ ಅಚ್ಚರಿಯಾಗುತ್ತದೆ. ಆಗ ಅವರು ಹೇಳಿದರು: ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದ್ದಾಗಿ ಕೇಳಿದ್ದೇನೆ: ಮದೀನದ ಮುಸ್ಲಿಮರನ್ನು ಸತ್ಯವಿಶ್ವಾಸಿಗಳಾಗಿರುವರು ಪ್ರೀತಿಸುವರು, ಅವರನ್ನು ಸತ್ಯನಿಷೇಧಿಗಳಾದವರು ಮಾತ್ರ ದ್ವೇಷಿಸುವರು. ಆದ್ದರಿಂದ ನಾನು ಅವರೊಂದಿಗೆ ಇಂತಹ ಸಂಬಂಧವನ್ನು ಇರಿಸಿದ್ದೇನೆ. (ಅಸದುಲ್ಗಾಬ ಫೀ ಮಾರಿಫತಿಸ್ಸಹಾಬ, ಭಾಗ–2, ಪುಟ–456, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಜರೀರ್ ಹೀಗೆ ವರದಿ ಮಾಡಿರುವರು: ಒಂದು ಬಾರಿ ನಾನು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಬಳಿ ಹೋದೆ. ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಬಗ್ಗೆ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಕೇಳಿದರು. ಆಗ ನಾನು ಹೇಳಿದೆ: ಅವರು ತಮ್ಮ ಆಡಳಿತದಲ್ಲಿ ಸಾಮರ್ಥ್ಯವಿದ್ದೂ ಸಭ್ಯ ಮತ್ತು ಮರ್ಯಾದಸ್ಥ ವ್ಯಕ್ತಿಯಾಗಿರುವರು. ಕಠಿಣವಾಗಿ ಅವರು ವರ್ತಿಸುತ್ತಿರಲಿಲ್ಲ, ಅವರು ಜನರಿಗೆ ವಾತ್ಸಲ್ಯವುಳ್ಳ ತಾಯಿಯ ಹಾಗೆ ಆಗಿರುವರು. ಅವರು ಅವರ ಎಲ್ಲ ಸೌಕರ್ಯಗಳ ವಸ್ತುಗಳನ್ನು ಒಂದು ಇರುವೆ ಕೂಡಿಸುವಂತೆ ಕೂಡಿಸುತ್ತಾರೆ. ಯುದ್ಧದ ವೇಳೆಯಲ್ಲಿ ಜನರಲ್ಲಿ ಎಲ್ಲರಿಗಿಂತ ಧೈರ್ಯಶಾಲಿಯಾಗಿರುತ್ತಾರೆ. ಖುರೈಶಿಗಳಲ್ಲಿ ಅತ್ಯಂತ ಪ್ರಿಯರಾಗಿರುವರು.
(ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–3, ಪುಟ–64, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1995)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹು ಹಿಜರೀ 55ಗೆ ನಿಧನರಾದರು. ಮರಣದ ಸಮಯದಲ್ಲಿ ಅವರಿಗೆ ಎಪ್ಪತ್ತಕ್ಕಿಂತ ಸ್ವಲ್ಪ ಹೆಚ್ಚಿನ ವಯಸ್ಸಿತ್ತು. ಕೆಲವರ ಪ್ರಕಾರ ಅವರ ವಯಸ್ಸು 74 ಆಗಿತ್ತು. ಇನ್ನು ಕೆಲವರ ಪ್ರಕಾರ ಅವರು ವಯಸ್ಸು 83 ಎಂದಾಗಿದೆ.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–110, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990) (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಭಾಗ–2, ಪುಟ–610, ದಾರುಲ್ ಜೀಲ್ ಬೈರೂತ್)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರ ನಿಧನರಾದ ವರ್ಷದ ಬಗ್ಗೆ ಭಿನ್ನಾಭಿಪ್ರಾಯಗಳು ಇವೆ. ವಿವಿಧ ವರದಿಗಳಿಂದ ಅವರ ನಿಧನದ ವರ್ಷ ಹಿಜರಿ 51 ರಿಂದ ಹಿಜರಿ 58ರ ವರೆಗೆ ಬಂದಿದೆ. ಆದರೆ ಹೆಚ್ಚಿನವರು ಅವರ ಮರಣದ ವರ್ಷ ಹಿಜರಿ 55 ಎಂದು ಹೇಳಿರುವರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–2, ಪುಟ–456, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹು ತನ್ನ ಮರಣದ ಸಮಯದಲ್ಲಿ ಎರಡುವರೆ ಲಕ್ಷ ದಿರ್ಹಮ್ ಆಸ್ತಿಯಾಗಿ ಬಿಟ್ಟುಹೋಗಿದ್ದರು. ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹು ಅಖೀಖ್ ಎಂಬ ಸ್ಥಳದಲ್ಲಿ ನಿಧನರಾದರು. ಅದು ಮದೀನದಿಂದ 7 ಅಥವಾ 10 ಮೈಲುಗಳ ದೂರಲ್ಲಿರುವ ಪ್ರದೇಶವಾಗಿದೆ. ಕೆಲವರು ಹೇಳುತ್ತಾರೆ, ಅಲ್ಲಿಂದ ಅವರ ಮಯ್ಯತ್ತನ್ನು ತೋಳುಗಳಲ್ಲಿ ಇಟ್ಟುಕೊಂಡು ಮದೀನಕ್ಕೆ ತಂದು ಮಸ್ಜಿದ್ ನಬ್‌ವಿಯಲ್ಲಿ ಜನಾಝ ನಮಾಝ್ ನಿರ್ವಹಿಸಲಾಯಿತು. ಅವರ ಜನಾಝವನ್ನು ಆ ಕಾಲದಲ್ಲಿ ಮದೀನದ ಆಡಳಿತಗಾರನಾಗಿದ್ದ ಮರ್‌ವಾನ್ ಬಿನ್ ಹಕಮ್ ನಿರ್ವಹಿಸಿದ್ದರು. ಅವರ ಜನಾಝ ನಮಾಝಿನಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಪತ್ನಿಯಂದಿರು ಸಹ ಭಾಗವಹಿಸಿದ್ದರು. ಅವರನ್ನು ಜನ್ನತುಲ್ ಬಖೀನಲ್ಲಿ ದಫನ್ ಮಾಡಲಾಗಿತ್ತು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಭಾಗ–3, ಪುಟ–456, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, ಲೆಬನಾನ್) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–110, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990) (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಭಾಗ–2, ಪುಟ–610, ದಾರುಲ್ ಜೀಲ್ ಬೈರೂತ್)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಹೀಗೆ ವರದಿಯಾಗಿದೆ: ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದ್ದಾಗಿ ಅಬ್ದುಲ್ಲಾಹ್ ಬಿನ್ ಝುಬೈರ್ ವರದಿ ಮಾಡುತ್ತಾರೆ: ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹು ನಿಧನರಾದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಪತ್ನಿಯಂದಿರು ಸಹ ಜನಾಝ ನಮಾಝ್ ನಿರ್ವಹಿಸುವಂತಾಗಲು ಅವರ ಜನಾಝವನ್ನು ಮಸೀದಿಗೆ ತರಲು ಜನರನ್ನು ಕಳುಹಿಸಿದರು. ಹಾಗೆಯೇ ಮಾಡಲಾಯಿತು. ಜನಾಝ ನಮಾಝ್ ನಿರ್ವಹಿಸುವಂತಾಗಲು ಜನಾಝವನ್ನು ಅವರ ಕೋಣೆಗಳ ಮುಂದೆ ಇರಿಸಲಾಯಿತು. ಅನಂತರ ಜನಾಝವನ್ನು ಬಾಬುಲ್‌ಜನಾಯತ್ ಮೂಲಕ ಹೊರಗೆ ತರಲಾಯಿತು. ಅದು ಕುಳಿತುಕೊಳ್ಳುವ ಜಾಗದ ಸಮೀಪವಾಗಿತ್ತು. ಜನಾಝವನ್ನು ಮಸೀದಿಯಲ್ಲಿ ಹಿಂದೆಂದೂ ಪ್ರವೇಶಿಸಲಾಗುತ್ತಿರಲಿಲ್ಲ ಎಂದು ಹೇಳಿ ಕೆಲವರು ಆಕ್ಷೇಪಿಸಿದ್ದರು. ಈ ಮಾತುಗಳು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹುರಿಗೆ ತಲುಪಿದಾಗ ಅವರು ಹೇಳಿದರು: ಜನರು ಎಷ್ಟು ಬೇಗ ತಮಗೆ ಗೊತ್ತಿಲ್ಲದ ಸಂಗತಿಗಳ ಬಗ್ಗೆ ದೋಷವನ್ನು ಹುಡುಕುತ್ತಾರೆ. ಜನಾಝವನ್ನು ಮಸೀದಿಯಿಂದ ದಾಟಿಸಲಾಗಿದೆ ಎಂಬುದಕ್ಕೆ ನಮ್ಮ ಮೇಲೆ ಆರೋಪ ಹೊರಿಸಲಾಗಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಹೈಲ್ ಬಿನ್ ಬೈಝಾರ ಜನಾಝ ನಮಾಝ್ ಮಸೀದಿಯೊಳಗೆಯೇ ನಿರ್ವಹಿಸಿದ್ದರು. ಇದು ಮುಸ್ಲಿಮಿನ ವರದಿಯಾಗಿದೆ. (ಸಹೀಹ್ ಮುಸ್ಲಿಮ್ ಕಿತಾಬುಲ್ ಜನಾಎಝ್, ಬಾಬ್ ಅಸ್ಸಲಾತು ಅಲಲ್ ಜನಾಝು ಫಿಲ್ ಮಸ್ಜಿದೆ 973) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–109, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರವರು ತಮ್ಮ ಮರಣ ಸಮೀಪಿಸಿದಾಗ ಹೀಗೆ ವಸಿಯ್ಯತ್ ಮಾಡಿದರು: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮಾಡಲಾದ ಅದೇ ರೀತಿಯ ಸಮಾಧಿಯನ್ನು ನನಗಾಗಿ ಮಾಡಬೇಕು. ಅದರ ಮೇಲೆ ಇಟ್ಟಿಗೆಯನ್ನು ಕಟ್ಟಬೇಕು. ಇದು ಸಹ ಮುಸ್ಲಿಮಿನ ವರದಿ ಆಗಿದೆ.
(ಸಹೀಹ್ ಮುಸ್ಲಿಮ್ ಕಿತಾಬುಲ್ ಜನಾಎಝ್ 966)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರವರು ಮುಹಾಜಿರುಗಳಾದ ಪುರುಷರಲ್ಲಿ ಎಲ್ಲರಿಗಿಂತ ಕೊನೆಗೆ ನಿಧನರಾದ ವ್ಯಕ್ತಿಯಾಗಿದ್ದರು. ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರವರು ತಮ್ಮ ಮರಣದ ಸಮಯದಲ್ಲಿ ಒಂದು ಉಣ್ಣೆಯ ನಿಲುವಂಗಿ ತೆಗೆದು ಹೀಗೆ ಹೇಳಿದರು: ನನಗೆ ಇದರಿಂದ ಕಫನ್ ಮಾಡಿಸಬೇಕು. ಏಕೆಂದರೆ ನಾನು ಈ ನಿಲುವಂಗಿಯನ್ನು ಧರಿಸಿ ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದೆ. ನಾನು ಇದನ್ನು ಈ ಸಮಯಕ್ಕಾಗಿ ಎಂದರೆ ಮರಣದ ಸಮಯದಲ್ಲಿ ಧರಿಸಲು ಜೋಪಾನವಾಗಿ ಇಟ್ಟಿದ್ದೆ.
(ಅಸದುಲ್ಗಾಬ ಫೀ ಮಾರಿಫತಿಸ್ಸಹಾಬ, ಭಾಗ–2, ಪುಟ–456, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರಝಿಯಲ್ಲಾಹು ಅನ್‌ಹು ಸೀರತ್ ಖಾತಮುನ್ನಬಿಯ್ಯೀನಿನಲ್ಲಿ ಹೀಗೆ ಬರೆದಿರುವರು: ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದಲ್ಲಿ ಸಹಾಬಿವರ್ಯರಿಗಾಗಿ ಪಿಂಚಣಿ ಎಂದರೆ ಸ್ಟೈಪೆಂಡ್ ನಿಶ್ಚಯಿಸಲಾದಾಗ ಬದರೀ ಸಹಾಬಿವರ್ಯರ ವೇತನವನ್ನು ವಿಶೇಷವಾಗಿ ವರ್ಧಿಸಿ ನಿಶ್ಚಯಿಸಿದ್ದರು. ಬದರೀ ಸಹಾಬಿಯರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದನ್ನು ಸ್ವತಃ ಗೌರವಭಾವದಿಂದ ಕಾಣುತ್ತಿದ್ದರು. ಪ್ರಸಿದ್ಧ ಒರಿಯನ್ಟಲಿಸ್ಟ್‌ರಾದ ವಿಲಿಯಮ್ ಮ್ಯೂರ್ ಬರೆಯುತ್ತಾರೆ: ಬದರೀ ಸಹಾಬಿವರ್ಯರನ್ನು ಇಸ್ಲಾಮಿಕ ಸಮಾಜದ ಅತ್ಯುನ್ನತ ಸದಸ್ಯರೆಂದು ಭಾವಿಸಲಾಗುತ್ತಿತ್ತು. ಹಝ್ರತ್ ಸಅದ್ ಬಿನ್ ಅಬೀ ವಖಾಸ್‌ರಿಗೆ 80ನೇ ವಯಸ್ಸಿನಲ್ಲಿ ಮರಣ ಸಮೀಪಿಸಿದಾಗ, ಬದರ್ ಯುದ್ಧದಲ್ಲಿ ಅವರು ಧರಿಸಿದ್ದ ನಿಲುವಂಗಿಯನ್ನು ತರಲು ಹೇಳಿದರು. ಅವರು ಅದನ್ನು ಈ ದಿನಕ್ಕಾಗಿ ಜೋಪಾನವಾಗಿ ಇರಿಸಿದ್ದರು. ಬದರ್ ಯುದ್ಧ ಸಮಯದಲ್ಲಿ ಅವರು ತರುಯೌವ್ವನ ಪ್ರಾಯದಲ್ಲಿದ್ದರು. ಅವರ ಕೈಗಳಿಂದಲೇ ಇರಾನಿನ ಮೇಲೆ ವಿಜಯ ಸಾಧಿಸಲಾಯಿತು. ಅವರು ಕೂಫದ ಸ್ಥಾಪಕ ಮತ್ತು ಇರಾಕಿನ ಗೌವರ್ನರ್ ಆಗಿದ್ದರು. ಆದರೆ ಅವರ ದೃಷ್ಟಿಯಲ್ಲಿ ಈ ಎಲ್ಲ ಗೌರವಾದರಗಳು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರ ಹೆಮ್ಮೆಯ ಮುಂದೆ ಏನೂ ಆಗಿರಲಿಲ್ಲ. ಬದರ್ ಯುದ್ಧದಂದು ಧರಿಸಿದ್ದ ವಸ್ತ್ರವನ್ನು ಎಲ್ಲ ಬಟ್ಟೆಗಳಿಗಿಂತ ಉತ್ತಮವೆಂದು ಭಾವಿಸುತ್ತಿದ್ದರು. ಅದೇ ನಿಲುವಂಗಿಯಲ್ಲಿ ಸುತ್ತಿ ಅವರನ್ನು ಗೋರಿಗೆ

ಇಳಿಸಬೇಕೆಂಬುದಾಗಿತ್ತು ಅವರ ಕೊನೆಯ ಅಭಿಲಾಷೆ. (ಸೀರ'ತ್ ಖಾತಮುನ್ನಬಿಯ್ಯೀನ್, ಪುಟ-373)

ಸಅದಿನ ಮಹಲು ನಿರ್ಮಾಣದ ಬಗ್ಗೆ ಯಾರದಾದರೂ ಮನಸ್ಸಲ್ಲಿ ಸವಾಲು ಏಳುವುದಾದರೆ, ಅದರ ಉತ್ತರವೇನೆಂದರೆ, ಕೊನೆಗೆ ಅವರು ಒಬ್ಬ ವಿರಾಗಿಯಂತೆ ಸಮಾಜದಿಂದ ಬಿಟ್ಟುನಿಂತು ಜೀವನ ಸಾಗಿಸಿದ್ದರು ಎಂಬುವುದಾಗಿದೆ. ಅವರಿಗೆ ಪ್ರಿಯವಾದ ವಸ್ತು ಬದರ್ ಯುದ್ಧದಲ್ಲಿ ಧರಿಸಿದ್ದ ನಿಲುವಂಗಿ ಮಾತ್ರವಾಗಿತ್ತು. ಅವರ ಏಕಾಂಗಿತನದ ಜೀವನವೇ ಅವರ ವಿನಮ್ರತೆ ಮತ್ತು ಸರಳತೆಗೆ ಸಾಕ್ಷ್ಯವಹಿಸುತ್ತದೆ.

ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಬದರ್ ಯುದ್ಧದಲ್ಲಿ ಭಾಗವಹಿಸಿದ್ದಾಗ ನನಗೆ ಒಬ್ಬಳೇ ಮಗಳಿದ್ದಳು. ಬೇರೊಂದು ವರದಿ ಪ್ರಕಾರ ವಿದಾಯದ ಹಜ್ಜಿನ ಕಾಲದಲ್ಲೂ ಅವರಿಗೆ ಒಬ್ಬಳೇ ಮಗಳಿದ್ದಳು. ಆದರೆ ಅನಂತರ ಅಲ್ಲಾಹನು ಅವರಿಗೆ ಬಹಳ ಅಧಿಕ ಮಕ್ಕಳಿಂದ ಅನುಗ್ರಹಿಸಿದನು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ವಿವಿಧ ಸಮಯಗಳಲ್ಲಿ ಒಟ್ಟು ಒಂಬತ್ತು ಮದುವೆ ಮಾಡಿದರು. ಅಲ್ಲಾಹನು ಆ ಪತ್ನಿಯರಿಂದ 34 ಮಕ್ಕಳನ್ನು ಅವರಿಗೆ ದಯಪಾಲಿಸಿದನು. ಅವರಲ್ಲಿ 17 ಹೆಣ್ಮಕ್ಕಳು ಮತ್ತು 17 ಗಂಡು ಮಕ್ಕಳಿದ್ದರು. ಇದರೊಂದಿಗೆ ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಬಗ್ಗೆಗಿನ ಪ್ರಸ್ತಾಪ ಮುಕ್ತಾಯವಾಯಿತು. ಮುಂದೆ ಬೇರೆ ಸಹಾಬಿಯ ಪ್ರಸ್ತಾಪ ಶುರುವಾಗುವುದು. (ರೌಶನ್ ಸಿತಾರೆ, ಸಂಪುಟ-2, ಪುಟ-98-99) (ಅಲ್‌ಅಸಾಬ, ಸಂಪುಟ-5, ಪುಟ-219, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, 1995)

ಇಂದು ನಾನು ಜುಮಾ ನಮಾಝ್‌ ನಂತರ ಕೆಲವು ಜನಾಝ ಗ್ಹಾಇಬ್ ನಿರ್ವಹಿಸುವೆನು. ಮೊದಲ ಜನಾಝ ದಿವಂಗತ ಸಫ್‌ದರ್ ಅಲಿ ಗುಜ್ಜರ್ ಸಾಹಿಬ್‌ರದ್ದಾಗಿದೆ. ಅವರು ಮಸ್ಜಿದ್ ಫಝ್ಲ್‌ಲಿನ ಅತಿಥಿ ಸತ್ಕಾರ ವಿಭಾಗದಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸುತ್ತಿದ್ದರು. ಜೂಲೈ 25ರಂದು ಹೃದಯಾಘಾತ ಕಾರಣದಿಂದ ಮರಣಹೊಂದಿದ್ದರು. ಕೆಲವು ದಿನಗಳು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು. ಅವರಿಗೆ 79 ವಯಸ್ಸಾಗಿತ್ತು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. ಅವರು 30 ವರ್ಷಗಳ ಕಾಲ ಅತಿಥಿ ಸತ್ಕಾರ ವಿಭಾಗದಲ್ಲಿ ವಲಂಟಿಯರ್ ಆಗಿ ಸೇವೆ ಮಾಡುವ ಸೌಭಾಗ್ಯ ಪಡೆದರು. ಕೊನೆಯುಸಿರು ವರೆಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳ, ಕಾರ್ಯಕರ್ತರ ಮತು ಜಮಾಅತಿನ ಸಹೋದರರ ಅತುಲ್ಯವಾದ ಸೇವೆ ಮತ್ತು ಸತ್ಕಾರ ಮಾಡುವ ಸೌಭಾಗ್ಯ ಪಡೆಯುತ್ತಾ ಇದ್ದರು. ಇದಲ್ಲದೆ, ಅವರು ಒಂದು ದೀರ್ಘಕಾಲದ ವರೆಗೆ ಅಲ್‌ಫಝ್ಲ್ ಇಂಟರ್‌ನೇಶನಲ್ ಮತ್ತು ಅಹ್ಮದಿಯಾ ಪತ್ರಿಕೆಗಳ ಪೇಕಿಂಗ್ ಮತ್ತು ಪೋಸ್ಟಿಂಗ್ ಕೆಲಸಗಳಲ್ಲಿ ಸೇವೆಗಳನ್ನು ನಿರ್ವಹಿಸಿದ್ದರು. ಬಹಳ ದೀರ್ಘಕಾಲ ಅವರ ಅಸೈಲಮ್ ಕೇಸ್ ಬಾಕಿಯಾಗಿ ಉಳಿದಿತ್ತು. ಅನಂತರ ಬಹಳ ಕಾಲದ ನಂತರ ಅದು ಪಾಸಾಗಿ ಅವರ ಕುಟುಂಬ ಯು.ಕೆ. ಬರುವಂತಾದಾಗ ಅಲ್ಲಾಹನಿಗೆ ಬಹಳ ಕೃತಜ್ಞತೆ ಅರ್ಪಿಸುತ್ತಿದ್ದರು. ಇಷ್ಟು ದೀರ್ಘಕಾಲ ಒಬ್ಬಂಟಿಯಾಗಿ ಇರಬೇಕಾಯಿತು ಎಂದು ಯಾವತ್ತು ದೂರಿರಲಿಲ್ಲ. ಅವರು ಖಿಲಾಫತಿನ ಪ್ರೇಮಿಯಾಗಿದ್ದರು. ಯಾವಾಗಲೂ ಅದರ ಬಾಗಿಲಲ್ಲೇ ತಮ್ಮನ್ನು ಅರ್ಪಿಸಿದ್ದರು. ಅವರು ಇತರರಿಗೆ ಒಂದು ಉದಾಹರಣೆ ಮತ್ತು ಮಾದರಿಯಾಗಿರುವ ರೀತಿಯಲ್ಲಿ ಖಿಲಾಫತಿನ ಪ್ರೇಮಿಯಾಗಿದ್ದರು. ಜಮಾಅತಿನ ವ್ಯಕ್ತಿಗಳೊಂದಿಗೆ ಮತ್ತು ರಕ್ತಸಂಬಂಧಿಗಳೊಂದಿಗೆ ಪ್ರೀತಿ ಮತ್ತು ಗೌರವದ ಸಂಬಂಧವನ್ನು ಹೊಂದಿದ್ದರು. ಬಹಳ ಹೆಚ್ಚಾಗಿ ಪ್ರಾರ್ಥಿಸುವವರೂ, ಸೇವೆ ಮಾಡುವವರೂ ಎಲ್ಲರಿಗೂ ಪ್ರಿಯರೂ ಹಾಗೂ ದಯಾಳು ಸ್ವಭಾವದವರಾಗಿದ್ದರು. ಪಂಜಾಬಿ ಭಾಷೆಯ ಕವಿಯೂ ಆಗಿದ್ದರು. ತಮ್ಮ ಮಧುರ ಕಂಠದ ಕಾರಣ ಜನರೆಡೆಯಲ್ಲಿ ಸ್ವೀಕೃತವಾಗಿದ್ದರು. ಜಲ್ಸ ಸಾಲಾನದಲ್ಲಿ ನಝ್ಮ್ ಹಾಡುವ ಕಾರಣದಿಂದ ಎಲ್ಲರಿಗೂ ಅವರು ಪ್ರಿಯವಾಗಿದ್ದರು. ಅವರು ಲಾಹೋರಿನ ಪ್ರಸಿದ್ಧ ಜಮಾಅತಾದ ಹಾಂಡುಗುಜರ್‌ನವರಾಗಿದ್ದರು. ಅವರು ತಮ್ಮ ಪತ್ನಿ, ನಾಲ್ಕು ಗಂಡು ಮಕ್ಕಳನ್ನು ಹಾಗೂ ಎರಡು ಹೆಣ್ಮಕ್ಕಳನ್ನು ಅಗಲಿರುವರು.

ಸನ್ಮಾನ್ಯ ಅತಾಉಲ್ ಮುಜೀಬ್ ರಾಶಿದ್ ಸಾಹಿಬರು ಬರೆಯುತ್ತಾರೆ: ಸಫ್‌ದರ್ ಅಲಿ ಸಾಹಿಬರು ಬಹಳ ಸರಳ ಸ್ವಭಾವದವರಾಗಿದ್ದರು. ಪ್ರಾಮಾಣಿಕವಾಗಿಯೂ ಆಯಾಸಗೊಳ್ಳದೆಯೂ ಜಮಾಅತಿನ ಸೇವೆ ಮಾಡುವವರು ಆಗಿದ್ದರು. ಅವರಲ್ಲಿ ಮೂರು ಅಸಾಧಾರಣವಾದ ವಿಶೇಷತೆಗಳಿದ್ದುವು. ಅವುಗಳು ನನ್ನ ಹೃದಯದಲ್ಲಿ ಅವರಿಗಾಗಿರುವ ಪ್ರೀತಿಯನ್ನು ವರ್ಧಿಸಿತ್ತು. ಮೊದಲ ಸಂಗತಿಯೇನೆಂದರೆ, ಅಲ್ಲಾಹನೊಂದಿಗೆ ಕೃತಜ್ಞತೆಭಾವ ಅವರಲ್ಲಿ ತುಂಬ ಇತ್ತು. ಪರಿಮಿತವಾದ ಜೀವನ ಸೌಕರ್ಯಗಳನ್ನು ಹೊಂದಿದ್ದರೂ ಪ್ರತಿ ಸಂಗತಿಗಳಿಗೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಿದ್ದರು. ಎರಡನೇ ಸಂಗತಿಯೇನೆಂದರೆ, ಖಲೀಫರೊಂದಿಗೆ ಮತ್ತು ಖಿಲಾಫತಿನೊಂದಿನ ಪ್ರೀತಿ ಅವರ ಹೃದಯದಲ್ಲಿ ತುಂಬಿತ್ತು. ಅಲ್ಪ ಸಮಯಕ್ಕೆ ಭೇಟಿಯಾದರೂ ಖಿಲಾಫತಿನೊಂದಿಗೆ ತನ್ನ ಪ್ರೀತಿಯ ಸಂಬಂಧದ ಬಗ್ಗೆ ವ್ಯಕ್ತಪಡಿಸದೆ ಇದ್ದದ್ದಾಗಿ ನನಗೆ ನೆನಪಿಲ್ಲ. ಮೂರನೇ ಸಂಗತಿಯೇನೆಂದರೆ, ಧರ್ಮದ ಸೇವೆಯನ್ನು ಮನಸ್ಸಾರೆ ಮಾಡುತ್ತಿದ್ದರು. ಅದನ್ನು ಸೌಭಾಗ್ಯವೆಂದು ಭಾವಿಸುತ್ತಿದ್ದರು. ಅವರ ಮಗಳಾದ ತಹ್ಸೀನ್ ಸಾಹಿಬ ಬರೆಯುತ್ತಾಳೆ: ಜೀವನದ ಪ್ರತಿಯೊಂದು ಕ್ಷಣದಲ್ಲಿ ಅವರು ಇತರರಿಗೆ ಸುಃಖ ನೀಡಿದ್ದರು. ಅವರಿಗೆ ಪರಿಚಯವಿರುವ ಯಾರಿಗಾದರೂ ಅಥವಾ ಮಸೀದಿಯಲ್ಲಿ ಭೇಟಿಯಾದ ಯಾರಿಗಾದರೂ ಯಾವುದಾದರೂ ಕಷ್ಟತೆಗಳು ಇದ್ದರೆ, ಅವರು ಮನೆಗೆ ಬಂದು ಅವರ ಹೆಸರು ಹೇಳಿ ಅವರಿಗಾಗಿ ದುಆ ಮಾಡಲು ನಮ್ಮೊಡನೆ ಹೇಳುತ್ತಿದ್ದರು. ಸದಾ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಿದ್ದರು. ಇತರರಿಗೆ ಒಳಿತನ್ನು ಮಾಡಿದ ನಂತರ ಒಳಿತು ಮಾಡುವ ಅವಕಾಶ ಒದಗಿಸಿ ಕೊಟ್ಟಿದ್ದೀರಿ ಎಂದು ಹೇಳಿ ಅವರಿಗೆ ಕೃತಜ್ಞತೆ ಅರ್ಪಿಸುತ್ತಿದ್ದರು. ಅವರು ನಮ್ಮೊಡನೆ ಹೇಳುತ್ತಿದ್ದರು: ನೀವು ಇಬ್ಬರು ಹೆಣ್ಮಕ್ಕಳು ನನಗೆ ಪ್ರಿಯವಾಗಿರಲು ಕಾರಣವೇನೆಂದರೆ, ತನ್ನ ಹೆಣ್ಮಕ್ಕಳನ್ನು ಗೌರವಿಸುವವನು ನನ್ನ ಜೊತೆಗಿರುವನು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು. ಅವರು ನಮ್ಮನ್ನು ಬಹಳ ಪ್ರೀತಿಯಿಂದಲೂ ಗೌರವದಿಂದಲೂ ಸಲಹಿದ್ದರು. ಎರಡನೇ ಮಗಳಾದ ರಝಿಯ ಸಾಹಿಬ ಹೇಳುತ್ತಾಳೆ: ಯಾವಾಗಲೂ ನಮ್ಮ ತಂದೆ ಖಿಲಾಫತನ್ನು ಅನುಸರಿಸಲು ಮತ್ತು ಪ್ರೀತಿಸಲು ಹೇಳುತ್ತಿದ್ದರು. ಖಿಲಾಫತಿನೊಡನೆ ಪ್ರೀತಿಗೆ ಅವರು ಸ್ವತಃ ಒಂದು ಹಿರಿದಾದ ಮಾದರಿಯಾಗಿದ್ದರು. ಅವರ ಬಗ್ಗೆ ಸಂತಾಪ ಸೂಚಿಸಲು ಬಂದ ಎಲ್ಲರೂ ಹೇಳುತ್ತಿದ್ದ ಸಂಗತಿಯೇನೆಂದರೆ, ಅವರು ನಮ್ಮನ್ನೇ ಹೆಚ್ಚು ಪ್ರೀತಿಸುತ್ತಿದ್ದರು ಎಂದು ಅವರಿಗೆ ಅನಿಸುತ್ತಿತ್ತು ಎಂದು. ಆದರೆ ಅವರು ಎಲ್ಲರನ್ನೂ ಪ್ರೀತಿಸುತ್ತಿದ್ದರು. ಅವರು ಮಸೀದಿಯಲ್ಲಿ ಸಮೀಪದ ಜನರೊಡನೆ ಮಾತ್ರ ಸಂಬಂಧವಿರಿಸಿರುವರು ಎಂದು ನಮಗೆ ಅನಿಸುತ್ತಿತ್ತು. ಆದರೆ ಅವರು ನಮ್ಮ ಕುಟುಂಬದ ಅಂಗವಾಗಿದ್ದರು ಎಂದು ಎಲ್ಲರೂ ಹೇಳುತ್ತಿದ್ದರು. ದೂರ ದೂರದ ಜನರ ಕೆಲಸಗಳನ್ನು ಮಾಡುತ್ತಿದ್ದರು. ಅವರೊಂದಿಗೆ ಸಂಬಂಧವನ್ನು ಇರಿಸಿದ್ದರು. ಅವರ ಕಾಪಟ್ಯವಿಲ್ಲದ ಪ್ರೀತಿ ಮತ್ತು ಸೇವೆಯೇಜನರು ಅವರ ಬಗ್ಗೆ ಹೀಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಕಾರಣವಾಗಿದೆ. ನನಗೂ ಹಲವರು ಇವರ ಬಗ್ಗೆ ಹೇಳಿ ಪತ್ರ ಬರೆದಿರುವರು. ಅವರಿಗೆ ಪ್ರತಿಯೊಬ್ಬರೊಂದಿಗೆ ವೈಯಕ್ತಿಕ ಸಂಬಂಧ ಮತ್ತು ಪ್ರೀತಿಯ ಸಂಬಂಧವಿತ್ತೆಂದು ಪ್ರತಿಯೊಂದು ಪತ್ರದಿಂದ ತಿಳಿದುಬರುತ್ತದೆ. ಎಲ್ಲರ ಪ್ರೀತಿಗೆ ಪಾತ್ರರಾಗುವಂತಹ ಸ್ವಭಾವವುಳ್ಳವರು ಬಹಳ ಕಡಿಮೆಯಿರುತ್ತಾರೆ. ಪ್ರತಿಯೊಂದು ಸಭೆಯಲ್ಲಿ ಅವರ ಮಾತುಗಳ ಕೇಂದ್ರಬಿಂಧು ಖಿಲಾಫತ್ ಮತ್ತು ಅದರೊಂದಿಗೆ ಸಂಬಂಧದ ಕುರಿತಾಗಿತ್ತು. ಅಲ್ಲಾಹನು ಅವರನ್ನು ತನ್ನ ಪ್ರಿಯ ದಾಸರೊಂದಿಗೆ ಸೇರಿಸಲಿ. ಅವರ ಮಕ್ಕಳನ್ನೂ ಅವರ ಒಳಿತುಗಳ ಮತ್ತು ಪ್ರಾರ್ಥನೆಗಳ ವಾರಸುದಾರರನ್ನಾಗಿ ಮಾಡಲಿ. ಅವರ ಪತ್ನಿಗೆ ಆರೋಗ್ಯ ನೀಡಲಿ. ಸಹನೆ ಮತ್ತು ಸಮಾಧಾನ ನೀಡಲಿ. ಅವರ ಪತ್ನಿ ಕೂಡ ಬಹಳ ಕಾಲದಿಂದ ರೋಗಿಯಾಗಿರುವರು. ಪತ್ನಿಯನ್ನು ಸಹ ಅವರು ಬಹಳ ಪ್ರಾಮಾಣಿಕವಾಗಿ ಮತ್ತು ಪ್ರೀತಿಯಿಂದ ಸೇವೆ ಮಾಡಿದರು. ತಮ್ಮ ಎಲ್ಲ ಕೆಲಸಗಳು ಮತ್ತು ಕರ್ತವ್ಯದೊಂದಿಗೆ ಸೇವೆ ಮಾಡಿದ್ದಾರೆ. ಲಂಗರ್ ಖಾನದಲ್ಲೂ ದಾರುಝಿಯಾಫತಿನಲ್ಲೂ ಸೇವೆ ಮಾಡಿದ್ದರು. ಒಬ್ಬ ವಖ್‌ಫೆ ಝಿಂದಗಿಗಿಂತ ಮಿಗಿಲಾಗಿ ಅವರಲ್ಲಿ ಆವೇಶವಿತ್ತು. ಅದರೊಂದಿಗೆ ತಮ್ಮ ಮನೆಯ ಕರ್ತವ್ಯಗಳನ್ನೂ ನಿರ್ವಹಿಸುತ್ತಿದ್ದರು. ಅದೇ ರೀತಿಯಲ್ಲಿ ಆಂಗ್ಲ ಭಾಷೆ ಬಾರದಿದ್ದರೂ ಆಂಗ್ಲೇಯರಾದ ನೆರೆಕರೆಯವರ ಸೇವೆ ಮಾಡುತ್ತಿದ್ದರು. ಅವರೊಂದಿಗೆ ಉತ್ತಮ ಸಂಬಂಧವಿರಿಸಿದ್ದರು. ನೆರೆಕರೆಯವರು ಕೂಡ ಅವರನ್ನು ತುಂಬ ಪ್ರಶಂಸಿಸಿರುವರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಇಫ್ಫತ್ ನಸೀರ್ ಸಾಹಿಬರದ್ದಾಗಿದೆ. ಅವರು ಸನ್ಮಾನ್ಯ ಪ್ರೋಫೆಸರ್ ಡಾಕ್ಟರ್ ನಸೀರ್ ಅಹ್ಮದ್ ಖಾನ್ ಸಾಹಿಬರ ಪತ್ನಿಯಾಗಿದ್ದರು. ಮೇ 3 ರಂದು 90 ವಯಸ್ಸಿನಲ್ಲಿ ಹೃದಯಾಘಾತದ ಕಾರಣದಿಂದ ಮರಣ ಹೊಂದಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ವಿವಾಹ 1951ರಲ್ಲಿ ದಿವಂಗತ ಪ್ರೋಫೆಸರ್ ಡಾಕ್ಟರ್ ನಸೀರ್ ಅಹ್ಮದ್ ಖಾನ್ ಸಾಹಿಬ್‌ರೊಂದಿಗೆ ಆಗಿತ್ತು. ಅಮೇರಿಕದ ಡಾಕ್ಟರ್ ಇನಾಯತುಲ್ಲಾಹ್ ಮಂಗ್ಲ ಸಾಹಿಬರ ಪತ್ನಿಯಾದ ಆಯಿಶ ನಸೀರ್ ಸಾಹಿಬ ಇವರ ಮಗಳಾಗಿದ್ದಾಳೆ. ಮಗನಾಗಿ ಝಹೀರ್ ಅಹ್ಮದ್ ಖಾನ್ ಮತ್ತು ಡಾಕ್ಟರ್ ಮುನೀರ್ ಅಹ್ಮದ್ ಖಾನ್ ಇರುವರು. ಈ ಎರಡು ಮಕ್ಕಳೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬದಲ್ಲಿ ವಿವಾಹಿತರಾಗಿರುವರು. ಇವರ ಒಬ್ಬ ಮೊಮ್ಮಗನಾದ ನಸೀರ್ ಅಹ್ಮದ್ ಸಾಹಿಬ್ ವಖ್‌ಫೆ ಝಿಂದಗಿ ಆಗಿರುವರು. ಈಗ ಅವರು ಬಹಳ ಉತ್ತಮವಾಗಿ ರೀತಿಯಲ್ಲಿ ಎಂ.ಟಿ.ಎ. ಟ್ರಾನ್ಸ್‌ಮಿಶನಿನಲ್ಲಿ ಸೇವೆ ಮಾಡುತ್ತಿರುವರು. ಇಲ್ಲಿ ಇವರು ಕಲಿತು ಉನ್ನತ ವಿದ್ಯಾಭ್ಯಾಸವನ್ನು ಪಡೆದ ನಂತರ ತನ್ನನ್ನು ವಖ್‌ಫ್ ಮಾಡಿದರು.

ಅಲ್ಲಾಹನು ಅವರನ್ನು ಸಹ ಅವರ ಪ್ರಾರ್ಥನೆಗಳ ವಾರಸುದಾರರನ್ನಾಗಿ ಮಾಡಲಿ.

ಅವರ ಮಗನು ಹೇಳುತ್ತಾರೆ: ನಾವು ಸಣ್ಣರವರಾಗಿದ್ದಾಗ ತಾಯಿಯೊಂದಿಗೆ ಮಲಗುತ್ತಿದ್ದೆವು. ರಾತ್ರಿ ಸಮಯಗಳಲ್ಲಿ ನಾವು ಎಚ್ಚೆತ್ತರೆ ಅವರನ್ನು ತಹಜ್ಜುದ್ ನಮಾಝ಼್‌ನಲ್ಲಿ ಅಳುತ್ತಾ ಪ್ರಾರ್ಥನೆ ಮಾಡುತ್ತಿರುವುದಾಗಿ ನಾವು ಕಾಣುತ್ತಿದ್ದೆವು. ಈ ಸಂಗತಿಯನ್ನು ಅವರ ಮಗಳು ಸಹ ಬರೆದಿರುವಳು. ಪವಿತ್ರ ಖುರ್‌ಆನನ್ನು ದಿನಾಲೂ ಪಾರಾಯಣ ಮಾಡುತ್ತಿದ್ದರು. ಬೆಳಿಗ್ಗೆ ತಿಲಾವತ್ ಮಾಡಿಯೇ ಸ್ಕೂಲು ಹೋಗಲು ಬಿಡುತ್ತಿದ್ದರು. ತಿಲಾವತ್ ಮಾಡುವುದು ಕಡ್ಡಾಯಗೊಳಿಸಿದ್ದರು, ಅದರ ಹೊರತು ಹೋಗಲು ಅನುಮತಿ ಇರಲಿಲ್ಲ. ಇವರು 1960ರ ಕಾಲದಲ್ಲಿ ಲಾಹೋರಿನಲ್ಲಿ ಇದ್ದರು. ಅಲ್ಲಿ ಜನರಲ್ ಸೆಕ್ರಟರಿ ಲಜ್‌ನ ಎಂಬ ನೆಲೆಯಲ್ಲಿ ಮಾಡಲ್ ಟೌನನಲ್ಲಿ ಸೇವೆ ಮಾಡುತ್ತಿದ್ದರು. 28 ವರ್ಷಗಳ ಕಾಲ ಪಶ್ಚಿಮ ದಾರುನ್ನಸ್‌ರಿನ ಲಜ್‌ನ ಸದರ್ ಆಗಿ ಸೇವೆ ಮಾಡುತ್ತಿದ್ದರು. ಆ ಕಾಲದಲ್ಲಿ ಸೌಕರ್ಯಗಳ ಕಮ್ಮಿಯಿತ್ತು. ದೊಡ್ಡದಾದ ಮೊಹಲ್ಲವಾಗಿತ್ತು. ಸವಾರಿಗಳು ಇರಲಿಲ್ಲ. ನಡೆದುಕೊಂಡೇ ದೂರದೂರಕ್ಕೆ ಹೋಗುತ್ತಿದ್ದರು. ದಾರುನ್ನಸ್‌ರ್ ಮೊಹಲ್ಲ ನದಿಯ ವರೆಗೆ ಹರಡಿತ್ತು. ಅಲ್ಲಿಯ ವರೆಗೆ ಅವರು ಸ್ವತಃ ಹೋಗುತ್ತಿದ್ದರು. ಅನಂತರ ಹಝ಼್ರತ್ ಖ಼ಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್ ಜಮಾಅತಿನ ಸಹೋದರರೊಡನೆ ತಮ್ಮ ತಮ್ಮ ಅಹ್ಮದಿಯೇತರ ಸಂಬಂಧಿಕರಿಗೆ ಹಾಗೂ ಬಲಹೀನರಾದ ಅಹ್ಮದಿಯರಿಗೆ ಪತ್ರ ಬರೆಯಬೇಕೆಂದು ಉಪದೇಶಿಸಿದಾಗ ಅವರು ತಮ್ಮ ಸಂಬಂಧಿಕರಿಗೆ ಅಗಣಿತ ಪತ್ರಗಳನ್ನು ಬರೆದಿದ್ದರು. ಯಾವುದಾದರೂ ಕಾರಣ ಹುಡುಕಿ ಬಡವರಾದ ಸ್ನೇಹಿತರನ್ನು ಮತ್ತು ಮೊಹಲ್ಲದವರನ್ನು ಸಹಾಯಿಸುತ್ತಿದ್ದರು. ವಿಶೇಷವಾಗಿ ರಮಝ಼ಾನ್ ತಿಂಗಳಲ್ಲಿ ಏನಾದರೊಂದು ಆಹಾರ ತಯಾರಿಸಿ ಕಳುಹಿಸುತ್ತಿದ್ದರು. ಜನರನ್ನು ಪರಸ್ಪರ ಒಂದುಸೇರಿಸಲು ಪ್ರಯತ್ನಿಸುತ್ತಿದ್ದರು. ಸಂಬಂಧದಲ್ಲಿ ಬಿರುಕು ಆಗದಂತೆ ನೋಡುತ್ತಿದ್ದರು. ಅವರ ಮಗಳಾದ ಆಯಿಶ ಸಾಹಿಬ ಬರೆಯುತ್ತಾಳೆ: ವಖ್‌ಫೆ ಝ಼ಿಂದಗಿಯೊಂದಿಗೆ ಬಹಳ ಸಂತೋಷದಿಂದ ಜೀವನ ಸಾಗಿಸಿದ್ದರು. ನಮ್ಮ ಶಿಕ್ಷಣ ಮತ್ತು ತರಬೇತಿಯನ್ನು ತನ್ನ ಮುಖ್ಯ ಕರ್ತವ್ಯವೆಂದು ಭಾವಿಸುತ್ತಿದ್ದರು. ಅದರೊಂದಿಗೆ ಬಹಳ ದುಆ ಸಹ ಮಾಡುತ್ತಿದ್ದರು. ಅಲ್ಲಾಹನು ಅವರೊಂದಿಗೆ ಕಾರುಣ್ಯ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ, ಅವರ ಮಕ್ಕಳಿಗೂ ಮತ್ತು ಸಂತಾನ ಪಾರಂಪರ್ಯಕ್ಕೂ ಅವರ ಉತ್ತಮ ಅಭಿಲಾಷೆಗಳನ್ನು ಪೂರ್ತಿ ಮಾಡುವವರನ್ನಾಗಿ ಮಾಡಲಿ. ಅವರ ದುಆಗಳ ವಾರಸುದಾರರನ್ನಾಗಿ ಮಾಡಲಿ.

ಮುಂದಿನ ಜನಾಝ಼ ಸನ್ಮಾನ್ಯ ಅಬ್ದುರ್ರಹೀಮ್ ಸಾಖಿ ಸಾಹಿಬರದ್ದಾಗಿದೆ. ಅವರು ಜನರಲ್ ಸೆಕ್ರಟರಿ ಆಫಿಸ್ ಯು.ಕೆ.ಯ ಕಾರ್ಯಕರ್ತರಾಗಿದ್ದರು. ಮಾರ್ಚ್ 31ರಂದು ನಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಅಲ್ಲಾಹನು ಅನುಗ್ರಹದಿಂದ ಅವರು ಮೂಸಿಯಾಗಿದ್ದರು. 31 ಡಿಸೆಂಬರ್, 1934ರಂದು ಹಿಂದೂಸ್ತಾನದ ಮೌಝ಼ ರಾಯಿಪೂರಿನ ನಾಭಾ ಎಂಬ ಸ್ಥಳದಲ್ಲಿ ಜನಿಸಿದ್ದರು. ಅವರ ತಂದೆಯ ಹೆಸರು ರಹ್ಮತ್ ಅಲಿ ಆಗಿತ್ತು. ಅವರ ಕುಟುಂಬದಲ್ಲಿ ಅಹ್ಮದಿಯತ್ ರಹ್ಮತಲಿ ಸಾಹಿಬರ ತಂದೆಯರ ದೊಡ್ಡಪ್ಪರಾದ ಚೌಧರಿ ಕರೀಂ ಬಖ್ಷ್ ಎಂಬ ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯ ಮೂಲಕ ಪ್ರವೇಶಿಸಿತ್ತು. ಸಾಖಿ ಸಾಹಿಬರಿಗೆ 1958ರಿಂದ 1968ರ ತನಕ ಹತ್ತು ವರ್ಷಗಳ ಕಾಲ ತಖ಼್ತ ಹಝ಼ಾರದ ಸೆಕ್ರಟರಿ ಮಾಲ್ ಮತ್ತು ಖಾಇದ್ ಖ಼ುದ್ದಾಮುಲ್ ಅಹ್ಮದಿಯಾ ಆಗಿ ಸೇವೆ ಮಾಡಲು ಸೌಭಾಗ್ಯ ಲಭಿಸಿತು. ಪಾರ್ಟಿಶನ್ ನಂತರ ಅವರು ತಖ಼್ತ ಹಝ಼ಾರಗೆ ಬಂದು ನೆಲೆಸಿದ್ದರು. ಅದರ ನಂತರ 1968ರಲ್ಲಿ ಅಹ್ಮದಿಯಾ ಜಮಾಅತ್ ತಖ಼್ತ ಹಝ಼ಾರದ ಅಮೀರರಾಗಿ ನಿಶ್ಚಯಿಸಲ್ಪಟ್ಟರು. 1974 ಜುಲಾಯಿ ವರೆಗೆ ಜಮಾಅತಿನ ಅಮೀರ್ ಆಗಿ ಸೇವೆ ಮಾಡುವ ಸೌಭಾಗ್ಯ ಪಡೆದರು. 13 ಜುಲಾಯಿ 1947ರಲ್ಲಿ ತಖ಼್ತ ಹಝ಼ಾರದ ಅಹ್ಮದಿಯೇತರ ಕಿಡಿಗೇಡಿಗಳ ಸಂಘ ಸುತ್ತುಮುತ್ತಲಿನ ಪ್ರದೇಶಗಳ ಗುಂಡಾಗಳ ಮತ್ತು ಅಹ್ಮದಿಯತ್ತಿನ ಶತ್ರುಗಳಗುಂಪನ್ನು ಮಾರಕ ಅಸ್ತ್ರಗಳೊಂದಿಗೆ ಒಟ್ಟುಗೂಡಿಸಿ ಅಹ್ಮದಿಯರ ವಿರುದ್ಧ ಕಲಹಗಳನ್ನು ಉಂಟುಮಾಡುವ ಪರಂಪರೆಯನ್ನೇ ಶುರುಮಾಡಿದರು. ಮಸೀದಿಯ ಒಂದು ಭಾಗಕ್ಕೆ ಬೆಂಕಿ ಇಟ್ಟುಕೊಂಡು ಅದನ್ನು ವಶಪಡಿಸಿದರು. ಅತಿಥಿಗೃಹವನ್ನು ಸಂಪೂರ್ಣವಾಗಿ ಸುಟ್ಟುಹಾಕಿದರು. ಸಾಕಿ ಸಾಹಿಬರ ದಿನಸಿ ಅಂಗಡಿಯನ್ನು ಸಹ ಲೂಟಿ ಮಾಡಿ ಅದಕ್ಕೆ ಬೆಂಕಿ ಹಚ್ಚಿದರು. ಅದೇ ರೀತಿಯಲ್ಲಿ ಅವರ ಒಂದು ಬಟ್ಟೆಯ ಅಂಗಡಿಯನ್ನು ಸಹ ವಶಪಡಿಸಿಕೊಂಡರು. ಮನೆಗಳಿಗೆ ಬೆಂಕಿ ಹಚ್ಚಿದ್ದರು. ಇವರು ಸಹ ಒಳಗಿದ್ದರು. ಹೊಗೆಯ ಕಾರಣ ಪ್ರಜ್ಞಾಹೀನರಾದರು. ಪ್ರಜ್ಞಾಹೀನತೆಯ ಸ್ಥಿತಿಯಲ್ಲೇ ಕಿಡಿಗೇಡಿಗಳು ಇವರನ್ನು ಎತ್ತಿ ಮಸೀದಿಗೆ ಕೊಂಡುಹೋದರು ಹಾಗೂ ಲೌಡ್‌ಸ್ಪೀಕರ್‌ನಲ್ಲಿ ಇವರು ಇಸ್ಲಾಮ್ ಸ್ವೀಕರಿಸಿದ್ದಾಗಿಯೂ ಪಶ್ಚಾತ್ತಾಪ ಮಾಡಿದ್ದಾಗಿಯೂ ಘೋಷಿಸಿದ್ದರು. ಇತರ ಅಹ್ಮದಿಗಳು ಸಹ ಜಮಾಅತಿನಿಂದ ಹಿಮ್ಮೆಟ್ಟುವಂತೆ ಮಾಡಲು ಅವರು ಹೀಗೆ ಮಾಡಿದ್ದರು. ಅವರು ಈಟಿ ಮತ್ತು ಬಾಣಗಳ ನಡುವೆ ಸಿಲುಕಿ ಇರುವುದಾಗಿ ಪ್ರಜ್ಞೆ ಬಂದ ನಂತರ ಕಂಡರು. ಅದು ಅವರ ಮನಸ್ಸಲ್ಲಿ ಹಿರಿದಾದ ಆಘಾತವುಂಟು ಮಾಡಿತ್ತು. ಅನಂತರ ಅಲ್ಲಿಂದ ಅವರ ಮಕ್ಕಳೇ ಅವರ ಒಬ್ಬ ಸ್ನೇಹಿತರ ಬಳಿ ಕಳುಹಿಸಿದರು. ಅಲ್ಲೇ ಅವರ ಚಿಕಿತ್ಸೆ ನಡೆಯಿತು. ಅನಂತರ ಲಾಹೋರಿನಲ್ಲಿರುವ ಒಂದು ಜಮಾಅತಿನಲ್ಲಿ ಪುನಃ ನೆಲೆಸಿ ಅವರು ತಮ್ಮ ವ್ಯಾಪಾರವನ್ನು ಶುರುಮಾಡಿದರು. ತನ್ನ ಸ್ನೇಹಿತನ ಮನೆಯೊಂದಿಗೆ ಸೇರಿರುವ ತನ್ನ ಮನೆಯ ಒಂದು ಭಾಗವನ್ನು ನಮಾಝ಼್ ಸೆಂಟರ್ ಮಾಡಿದರು. ಸಾಮೂಹಿಕ ನಮಾಝ಼್ ಬಗ್ಗೆ ಜನರ ಗಮನಹರಿಸಿದರು ಮತ್ತು ನೂರಾರು ಮಕ್ಕಳಿಗೆ ಮತ್ತು ದೊಡ್ಡವರಿಗೆ ಖುರ್‌ಆನ್ ಕಲಿಸಿ ಕೊಟ್ಟರು.

ಅನಂತರ 2000 ನವೆಂಬರ್‌ನಲ್ಲಿ ಹಿಜ್‌ರತ್ ಮಾಡಿ ಲಂಡನಿಗೆ ಬಂದರು. ಇಲ್ಲಿ 2020ರ ವರೆಗೆ ಜನರಲ್ ಸೆಕ್ರಟರಿ ಆಫಿಸ್ ಯು.ಕೆ.ಯಲ್ಲಿ ಸ್ವಯಂಸೇವಕರಾಗಿ ನಿಯತವಾಗಿ ಸೇವೆ ಮಾಡುತ್ತಿದ್ದರು. ವಾಖಿಫೆ ಝ಼ಿಂದಗಿಗಿಂತ ಮಿಗಿಲಾಗಿ ಸಮಯದ ಪಾಲನೆ ಮಾಡುತ್ತಿದ್ದರು. ಯಾರೂ ಕಾಯುವಂತಾಗದಿರಲು ಎಲ್ಲರಿಗಿಂತ ಮುಂಚೆ ಆಫಿಸ್ ಬರುತ್ತಿದ್ದರು. ಆಫೀಸಿಗೆ ಬರುವಾಗ ಬೆಳಗ್ಗಿನ ಉಪಹಾರ ತಯಾರಾಗಲು ತಡವಾದರೆ, ಉಪಹಾರ ಮಾಡದೆ ಆಫೀಸಿಗೆ ಬರುತ್ತಿದ್ದರು. ಅವರ ಒಂದು ವೈಶಿಷ್ಟ್ಯವಾಗಿ ಅವರ ಮಕ್ಕಳು ಬರೆದಿರುವ ಸಂಗತಿಯೇನೆಂದರೆ, ಅವರ ದಿನಾಲು 3 ಜುಝ಼್ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಖ಼ಿಲಾಫತಿನೊಂದಿಗೆ ತುಂಬಾ ವಿಶ್ವಾಸ ಮತ್ತು ಪ್ರೇಮವಿತ್ತು. ಮಕ್ಕಳನ್ನೂ ದೊಡ್ಡವರನ್ನೂ ಯಾವಾಗಲೂ ಖ಼ಿಲಾಫತ್‌ನೊಂದಿಗೆ ಸಂಬಂಧವಿರಿಸಲು ಮತ್ತು ಖ಼ಲೀಫರನ್ನು ಗೌರವ ಭಾವದಿಂದ ಮತ್ತು ಸಂಪೂರ್ಣ ನಿಷ್ಠೆಯಿಂದ ಅನುಸರಿಸಲು ಬಹಳ ವೇದನೆಯೊಂದಿಗೆ ಉಪದೇಶಿಸುತ್ತಿದ್ದರು. ವಖ್‌ಫ್ ಮಾಡಿದವರನ್ನು, ವಿಶೇಷವಾಗಿ ಮುಬಲ್ಲಿಗರನ್ನು ಮನಸ್ಸಾರೆ ಆದರಿಸುವ ಮತ್ತು ಅವರನ್ನು ಪ್ರೀತಿಸುವ ಒಬ್ಬ ವ್ಯಕ್ತಿಯಾಗಿದ್ದರು. ಸುಮಾರು 60ವರ್ಷಗಳಿಗಿಂತ ಹೆಚ್ಚಿನ ಕಾಲ ಸ್ವಯಂಸೇವಕರಾಗಿ ದೀನನ ಸೇವೆ ಮಾಡುವ ಸೌಭಾಗ್ಯ ಇವರಿಗೆ ಲಭಿಸಿತ್ತು. ಇವರ ಮಗ ಖ಼ಾಲಿದ್ ಮಹ್ಮೂದ್ ಸಾಹಿಬರು ಕೊಲಿರೋಡ್ಸ್‌ನ ಸದರ್ ಜಮಾಅತ್ ಆಗಿರುವರು. ದಿವಂಗತರು ತಮ್ಮ ಪತ್ನಿಯಲ್ಲದೆ, ಎರಡು ಗಂಡುಮಕ್ಕಳನ್ನು ಮತ್ತು ಐದು ಹೆಣ್ಮಕ್ಕಳನ್ನು ಅಗಲಿರುವರು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳನ್ನೂ ಮತ್ತು ಸಂತಾನ ಪರಂಪರೆಯನ್ನೂ ಅವರ ಉತ್ತಮ ಅಭಿಲಾಷೆಗಳನ್ನು ಪೂರ್ತಿಮಾಡುವವರನ್ನಾಗಿ ಮಾಡಲಿ.

ಮುಂದಿನ ಜನಾಝ಼ ಸಈದ್ ಅಹ್ಮದ್ ಸೆಹ್ಗಲ್ ಸಾಹಿಬರದ್ದಾಗಿದೆ. ಇವರು ನಮ್ಮ ಪಿ.ಎಸ್. ಆಫೀಸಿನ ಡಿಸ್ಪಾಚ್ ವಿಭಾಗದಲ್ಲಿ ವಲಂಟಿಯರ್ ಆಗಿದ್ದರು. ಇವರು ಏಪ್ರಿಲ್ 12ರಂದು 90ರ ವಯಸ್ಸಿನಲ್ಲಿ ನಿಧನರಾದರು. ಇಬ್ಬರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಮಕ್ಕಳನ್ನು ಅಗಲಿರುವರು. ಅವರ ಬಾಲ್ಯಕಾಲ ಖಾದಿಯಾನಿನಲ್ಲಿ ಕಳೆದಿತ್ತು. ಪ್ರಾಥಮಿಕ ಶಿಕ್ಷಣವನ್ನು ಸಹ ಇಲ್ಲೇ ಪಡೆದರು. ಒಂದು ದೀರ್ಘಕಾಲ ಪ್ರೈವೇಟ್ ಸೆಕ್ರಟರಿಯ ಆಫೀಸಿನ ಡಿಸ್‌ಪಾಚ್ ಸೆಕ್ಷಣಿನಲ್ಲಿ ಸ್ವಯಂಸೇವಕರಾಗಿ ಸೇವೆ ಮಾಡುವ ಸೌಭಾಗ್ಯ ಪಡೆದರು. ತುಂಬ ವಿದ್ಯಾವಂತರೂ, ಜ್ಞಾನಪ್ರಿಯರೂ ಆಗಿದ್ದರು. ಲೌಕಿಕವಾದ ಅರಿವಿನೊಂದಿಗೆ ಪವಿತ್ರ ಖುರ್‌ಆನ್ ಮತ್ತು ಜಮಾಅತಿನ ವಿಷಯಗಳ ಬಗ್ಗೆ ಉತ್ತಮ ತಿಳುವಳಿಕೆ ಅವರಿಗಿತ್ತು. ನಮಾಝ಼ನ್ನು ನಿಯತವಾಗಿ ನಿರ್ವಹಿಸುವವರೂ ಖ಼ಿಲಾಫತಿನ ಪ್ರೇಮಿಯೂ ಆಗಿದ್ದರು. ವಿನಮ್ರತೆಗೂ ಸಭ್ಯತೆಗೂ ಅವರು ಎಲ್ಲರಿಗೂ ಮಾದರಿಯಾಗಿದ್ದರು. ತಮ್ಮ ಸುತ್ತುಮುತ್ತಲಿನ ಎಲ್ಲರಿಗೂ ಪ್ರಿಯರಾಗಿದ್ದರು. ಅವರು ನನ್ನೊಡನೆ ಯಾವಾಗಲೂ ಬಹಳ ವಿನಯದಿಂದ ಭೇಟಿಯಾಗುತ್ತಿದ್ದರು. ಅವರು ಮಕ್ಕಳು ಸಹ ಜಮಾಅತಿನೊಂದಿಗೆ ಉತ್ತಮ ಸಂಬಂಧವಿರಿಸಬೇಕೆಂಬ ವೇದನೆ ಅವರಲ್ಲಿ ಇತ್ತು ಎಂಬುದನ್ನು ನಾನೂ ನೋಡಿದ್ದೇನೆ. ಅಸ್ಲಮ್ ಖ಼ಾಲಿದ್ ಸಾಹಿಬ್ ಬರೆಯುತ್ತಾರೆ: ಅವರು ಅರಿವು ಪಡೆಯುವ ಸ್ವಭಾವದವರಾಗಿದ್ದರು. ಹೆಚ್ಚಾಗಿ ಮಧ್ಯಾಹ್ನ ಊಟದ ವೇಳೆ ವಿವಿಧ ವಿಷಯಗಳ ಬಗ್ಗೆ ತುಂಬ ಮಾತುಕತೆ ನಡೆಸುತ್ತಿದ್ದರು. ವಿಶೇಷವಾಗಿ ಕ್ರೈಸ್ತ ಧರ್ಮ ಮತ್ತು ಯಹೂದ ಧರ್ಮದ ಬಗ್ಗೆ ಆಳವಾದ ಅರಿವಿತ್ತು.

ನಮ್ಮ ಆಫೀಸಿನ ಕಾರ್ಯಕರ್ತರಾದ ಬಶೀರ್ ಅಹ್ಮದ್ ಸಾಹಿಬರು ಬರೆಯುತ್ತಾರೆ: ಕೊನೆಯ ಕಾಲದಲ್ಲೂ ಜಮಾಅತಿನ ಸೇವೆ ಮಾಡಲು ಅವರು ಪ್ರಯತ್ನಿಸುತ್ತಿದ್ದರು. ಒಂದು ಬಾರಿ ಮಸೀದಿಗೆ ಯಾವುದೋ ಕೆಲಸಕ್ಕಾಗಿ ಬರುತ್ತಿದ್ದರು. ಆಗ ತಲೆಸುತ್ತಿ ಬಿದ್ದರು. ಗಾಯ ಸಹ ಆಯಿತು. ಹೀಗಿದ್ದರೂ ಸೇವೆಯ ಸಂದರ್ಭ ನಷ್ಟವಾಗದಿರಲಿ ಎಂದು ಹೇಳಿ ಬಹಳ ದೂರದಿಂದ ನಡೆದುಕೊಂಡು ಆಫೀಸಿಗೆ ಖಂಡಿತ ಬರುತ್ತಿದ್ದರು. ಹೋಗುವ ಮತ್ತು ಬರುವ ಅನುಕೂಲಕ್ಕಾಗಿ ತಮ್ಮ ದೊಡ್ಡ ಮನೆಯನ್ನು ಮಾರಾಟ ಮಾಡಿ ಮಸೀದಿಯ ಬಳಿ ಫ್ಲಾಟ್ ಖರೀದಿಸಿದ್ದರು.

ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳ ಪರವಾಗಿ ಸಹ ಅವರ ದುಆಗಳು ಸ್ವೀಕೃತವಾಗಲಿ.

****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅದರ ಪ್ರತಿಬಿಂಬವೇ ಮಸೀದಿಯಾಗಿದೆ. ಅವರು ಮಸೀದಿಗಳನ್ನು ನಾಶಪಡಿಸುವುದಾದರೆ ಅವರಿಗೆ ಹೇಗೆ ತಾನೇ ಪರಲೋಕದಲ್ಲಿ ಶಾಂತಿ ಲಭಿಸುವುದು. ಆದರೆ ಇದರ ಅರ್ಥ ಹೀಗೂ ಅಲ್ಲ ಮಸೀದಿಯಲ್ಲಿ ಬೀಳುಬಿಟ್ಟವರು ಇಸ್ಲಾಮಿ ಶರೀಅತ್ತಿನ ಕಾನೂನಿನಿಗಿಂತ ಮೇಲ್ಪಟ್ಟವರಾಗಿದ್ದಾರೆಂದು. ಅಲ್ಲಾಹನು ಸೂರಃ ಅತ್ತೌಬ (13ನೇ ರುಕುವಿನಲ್ಲಿ) ಇಂತ ಕೆಲ ಜನರ ಕುರಿತು ಪ್ರಸ್ತಾಪಿಸಿದ್ದಾರೆ. ಅವರು ಸರಕಾರ ಅಂದರೆ ರಸೂಲ್ ಕರೀಂ (ಸ) ರವರ ಆಡಳಿತದಲ್ಲಿ ಅವರ ಮತ್ತು ಅವರ ಜಮಾಅತಿನ ವಿರುದ್ಧ ಷಡ್ಯಂತರಗಳನ್ನು ರಚಿಸಿಕೊಳ್ಳಲು ಒಂದು ಮಸೀದಿಯನ್ನು ನಿರ್ಮಿಸಿಕೊಂಡಿದ್ದರು. ಸ್ವಯಂ ಅವರು ನಬಿ(ಸ) ರವರ ಮುಂದೆ ಹಾಜರಾಗಿ ಆ ಮಸೀದಿಗೆ ಬಂದು ನಮಾಝ್ ಮಾಡಲು ಮತ್ತು ದುಆ ಮಾಡಲು ವಿನಂತಿಸಿ ಕೊಂಡಿದ್ದರು. ಆದರೆ ಅಲ್ಲಾಹನು ಅವರ ವಾಸ್ತವವನ್ನು ನಬಿ(ಸ) ರವರಿಗೆ ತಿಳಿಸಿಕೊಟ್ಟನು. ಅವರು ಈ ಮಸೀದಿಯನ್ನು ತನ್ನ ಷಡ್ಯಂತರಗಳನ್ನು ಮುಚ್ಚಿಟ್ಟುಕೊಳ್ಳಲು, ಇಸ್ಲಾಮಿನ ವಿರೋಧದ ಯೋಜನೆಗಳನ್ನು ಹಾಕಿಕೊಳ್ಳಲು ಮತ್ತು ಮುಸ್ಲಮಾನರನ್ನು ನಾಶಪಡಿಸಲು ನಿರ್ಮಿಸಿರುತ್ತಾರೆ. ಆ ಕಾರಣದಿಂದ ನಬಿ ಕರೀಂ(ಸ) ರವರು ಆ ಮಸೀದಿಯನ್ನು ಧ್ವಂಸಗೊಳಿಸಲು ಆಜ್ಞೆ ನೀಡಿದರು. ಆ ಸ್ಥಳವನ್ನು ಕಸದ ತೊಟ್ಟಿಯನ್ನಾಗಿ ಮಾಡಿದರು. ಅಂದರೆ ಮಸೀದಿಯು ತನ್ನ ಅಸ್ತಿತ್ವದ ನೆಲೆಯಲ್ಲಿ ಯಾವ ಅಪರಾಧಿಯನ್ನೂ ರಕ್ಷಿಸಲು ಸಾಧ್ಯವಿಲ್ಲ. ಮಸೀದಿಯಲ್ಲಿ ಏನಾದರೂ ದುಷ್ಟ ಕೆಲಸ ನಡೆದರೆ ಅದನ್ನು ದುಷ್ಟ ಕೆಲಸವೆಂದೇ ಪರಿಗಣಿಸಲಾಗುವುದು. ಒಳ್ಳೆಯ ಕೆಲಸವನ್ನು ಒಳ್ಳೆಯದಾಗಿಯೇ ಭಾವಿಸಲಾಗುವುದು. ಇವೆಲ್ಲ ಮಸೀದಿಗಳ ವಿಷಯ ಒಂದೆಡೆ ಇರಲಿ ರಸೂಲುಲ್ಲಾಹ್(ಸ) ರವರು ಕಅ್‌ಬಾ ಮಸೀದಿಯ ಕುರಿತು ಸಹ ಹೇಳಿದರು. ಅದು ಯಾವ ಅಪರಾಧಿ ಅಥವಾ ಕಾನೂನುಉಲ್ಲಂಘಕರನ್ನು ರಕ್ಷಿಸುವುದಿಲ್ಲ, ಹತ್ಯೆ ಮಾಡಿ ಓಡುವವನನ್ನು ರಕ್ಷಿಸುವುದಿಲ್ಲ. ಬದಲು ಇಂತಹ ಜನರನ್ನು ಹಿಡಿಯಲಾಗುವುದು ಮತ್ತು ಕಾನೂನಿನ ಸುಪರ್ದಿಗೆ ಒಳಪಡಿಸಲಾಗುವುದು. ಮಕ್ಕ ವಿಜಯದ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ರವರಿಗೆ ಸುದ್ಧಿ ತಲುಪಿತು. ಇಬ್ನು ಅಬ್‌ತತ್ ಅವರನ್ನು ಹತ್ಯೆ ಮಾಡುವ ಆಜ್ಞೆ ನೀಡಲಾಗಿದೆ ಆದರೆ ಅವನು ಕಅ್‌ಬಾದ ಪರದೆಗಳನ್ನು ಹಿಡಿದುಕೊಂಡು ನಿಂತಿದ್ದಾನೆ ಎಂದು, ಆಗಲೂ ರಸೂಲುಲ್ಲಾಹ್(ಸ) ಹೇಳಿದರು. ಅವನನ್ನು ಅಲ್ಲೇ ಹತ್ಯೆ ಮಾಡಿರಿ, ಅಂತೂ ಅವನನ್ನು ಹತ್ಯೆ ಮಾಡಲಾಯಿತು. (ಸೀರತ್ ಹಲ್ಬಿಯಾ ಸಂಪುಟ 3 ಪುಟ 93) ಅಂದರೆ ಕೆಲ ಅಪರಾಧಿಗಳನ್ನು ರಸೂಲುಲ್ಲಾಹ್(ಸ) ಕಅ್‌ಬಾದಲ್ಲಿಯೇ ಹತ್ಯೆ ಮಾಡುವ ಆಜ್ಞೆ ನೀಡಿರುವಾಗ ಇತರ ಮಸೀದಿಗಳು ಹೇಗೆ ತಾನೇ ಹೊರತಾಗಿರುವುದು. ಹೇಗೆ ನಾವು ಕಾನೂನು ಭಂಗಗೊಳಿಸುವವರನ್ನು ಕಾನೂನಿಗಿಂತ ಅತೀತರೆಂದು ಭಾವಿಸುವುದು. ಆದುದರಿಂದ ಮಸೀದಿಗಳು ಭಯಭಕ್ತಿಯನ್ನು ನೆಲೆಗೊಳಿಸಲು ಸ್ಥಾಪಿಸಲಾಗುತ್ತದೆಯೇ ಹೊರತು ಕಾನೂನುಗಳನ್ನು ಭಗ್ನಗೊಳಿಸಲು ಅಲ್ಲ. ಮಸೀದಿಗಳಲ್ಲೂ ಸಹ ಕಾನೂನು ಭಗ್ನಗೊಳಿಸಲು ಅನುಮತಿ ದೊರೆತರೆ ಮತ್ತೆ ಶೈತಾನನಿಗೆ ಯಾವ ಸ್ಥಳವು ನಿಷಿದ್ಧವಾಗಿರಲಿಕ್ಕಿಲ್ಲ, ಯಾವ ಮನೆಗಳನ್ನು (ಸ್ಥಳಗಳನ್ನು) ಶಾಂತಿಗೋಸ್ಕರ, ಮನಸಂತೃಪ್ತಿಗೋಸ್ಕರ, ಆಧ್ಯಾತ್ಮಿಕತೆಗೋಸ್ಕರ, ಭಯಭಕ್ತಿಯ ಸ್ಥಾಪನೆ ಪರಸ್ಪರ ಸೌಹಾರ್ಧತೆ ಐಕ್ಯತೆಗೋಸ್ಕರ ನಿರ್ಮಿಸಲಾಗಿದೆಯೋ, ಆ ಮನೆಗಳು ಮುಸಲ್ಮಾನರಲ್ಲಿ ಗಲಭೆ ಪಿತೂರಿ ನಡೆಸಲು, ಸರಕಾರದ ವಿರುದ್ಧ ದಂಗೆ ಏಳಲು ಅನುಮತಿಸುವುದು ಒಂದು ಅಪಾಯಕರ ದೌರ್ಜನ್ಯವಾಗಿದೆ. ಅದನ್ನು ಇಸ್ಲಾಮ್ ಎಂದೂ ಅನುಮತಿ ನೀಡುವುದಿಲ್ಲ. (ತಫ್ಸೀರ್ ಕಬೀರ್ ಸಂಪುಟ–2, ಪುಟ–199–134, ಮುದ್ರಣ ಖಾದಿಯಾನ್ 2010)

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಖುರ್‌ಆನ್‌ನಲ್ಲಿರುವ ಇತರ ಶಿಕ್ಷಣಗಳು ಇವೆಲ್ಲ ಸರಿ ಮತ್ತು ಸತ್ಯವಾಗಿದೆ. ನಾನು ಮನಃ ಪೂರ್ವಕವಾಗಿ ಇವೆಲ್ಲ ಕಾರ್ಯಗಳನ್ನು ಸತ್ಯವೆಂದು ನಂಬುತ್ತೇನೆ. ಹೃದಯಾಂತರಾಳದಿಂದ ಅದರ ಮೇಲೆ ದೃಢ ಭರವಸೆ ಹೊಂದಿದ್ದೇನೆ. ನನ್ನ ಸ್ಥಿತಿ ಈಗ ಹೇಗಿದೆ ಎಂದರೆ ಒಂದು ಸುಗಂಧ ದ್ರವ್ಯದಿಂದ ತುಂಬಿದ ಪಾತ್ರೆಯಂತಾಗಿದೆ. ಅದೇ ರೀತಿ ನನ್ನ ಹೃದಯ ನಿಶ್ಚಿತತೆಯಿಂದ ತುಂಬಿದೆ. ಅಲ್ಲಾಹನ ಗ್ರಂಥ ಪವಿತ್ರ ಖುರ್‌ಆನ್ ಧರ್ಮದ ಎಲ್ಲ ಅನುಗ್ರಹಗಳಿಂದ ತುಂಬಿದೆ. ವಾಸ್ತವವಾಗಿಯೂ ಅಲ್ಲಾಹನು ಎಲ್ಲ ವಸ್ತುಗಳ ಸೃಷ್ಟಿಕರ್ತ ಮತ್ತು ಎಲ್ಲ ಆತ್ಮಗಳ ಹಾಗೂ ಶರೀರಗಳ ಜನ್ಮದಾತ. ಎಲ್ಲ ರೀತಿಯ ಒಳಿತು ಮತ್ತು ಪುಣ್ಯ ಹಾಗೂ ಅನುಗ್ರಹಗಳ ಆಗರ ಅವನಾಗಿದ್ದಾನೆ. ಮುಹಮ್ಮದ್ ಮುಸ್ತಫಾ ಪವಿತ್ರ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮ್ ಸತ್ಯವಂತರು, ಪರಿಪೂರ್ಣ ನಬಿಯಾಗಿರುವರು. ಅವರ ಅನುಸರಣೆಯಿಂದ ಪರಲೋಕದಲ್ಲೂ ಸಿದ್ಧಿ ಪ್ರಾಪ್ತವಾಗುವುದು. ಆದರೆ ನನ್ನ ಇಂತಹವನು ಎದುರಾಳಿ (ಈ ಸ್ಥಳದಲ್ಲಿ ಇಲ್ಲ ಅವರ ಎದುರಿಗೆ ಬರುವ ಪ್ರತಿಸ್ಪರ್ಧಿಯ ಹೆಸರು ಬರೆಯಲಾಗುವುದು.) ಈ ಸಮಯ ನನ್ನ ಎದುರಿನಲ್ಲಿ ಈ ದಾವೆ ಮಾಡುತ್ತಾನೆ. ನವೂಝುಬಿಲ್ಲಾಹ್ ಜನಾಬ್ ಸಯ್ಯದನಾ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮ್ ಸತ್ಯವಂತರಲ್ಲ ಎಂದು, ಮೋಸದಿಂದ ಪವಿತ್ರ ಖುರ್‌ಆನ್ ಸೃಷ್ಟಿಸಿಕೊಂಡಿದ್ದಾರೆ, ಮತ್ತು ಇದನ್ನೂ ಹೇಳುತ್ತಾನೆ. ಅಲ್ಲಾಹನು ಆತ್ಮಗಳ ಹಾಗೂ ಶರೀರಗಳ ಜನ್ಮದಾತನಲ್ಲ ಮತ್ತು ಯಾವ ಭಕ್ತನಿಗೂ ಸತ್ಯ ನಿಷ್ಠನಿಗೂ ಶಾಶ್ವತವಾದ ಮುಕ್ತಿ ನೀಡುವುದಿಲ್ಲ. ವೇದಗಳಲ್ಲಿ ಏನೆಲ್ಲ ಇದೆಯೋ ಅದೆಲ್ಲ ವಾಸ್ತವವಾಗಿಯೂ ಸತ್ಯವಾಗಿದೆ ಎನ್ನುವರು ಅದರ ಬದಲಾಗಿ ಪವಿತ್ರ ಖುರ್‌ಆನ್ ಅನ್ನು ಮಿಥ್ಯ ಎನ್ನುವರು, ಆದುದರಿಂದ ಅಲ್ಲಾಹನೇ, ನೀನು ಸರ್ವಶಕ್ತನು. ನಮ್ಮ ಇಬ್ಬರಲ್ಲಿ ಯಾರು ಸತ್ಯವಂತರೆಂದು ನೀನೇ ನಿರ್ಣಯ ಕೊಡು. ನಮ್ಮಿಬ್ಬರಲಿ ಯಾವ ವ್ಯಕ್ತಿ ವಿವರಣೆಗಳಲ್ಲಿ ಮತ್ತು ತನ್ನ ವಿಶ್ವಾಸಗಳಲ್ಲಿ ಮಿಥ್ಯನಾಗಿದ್ದಾನೋ ಮತ್ತು ಸತ್ಯದೃಷ್ಟಿಯಿಂದ ನೋಡುವುದಿಲ್ಲವೋ. ಬದಲು ದ್ವೇಷ ಭಾವನೆ ಹಾಗೂ ಹಟದಿಂದ ಇಂತಹ ಮಾತುಗಳನ್ನು ತನ್ನ ನಾಲಿಗೆಯ ಮೇಲೆ ತರುತ್ತಿದ್ದಾನೋ ಅದರ ಮೇಲೆ ವಿಶ್ವಾಸ ತರಲು ಯಾವ ಸಾಕ್ಷ್ಯಾಧಾರಿತ ಪುರಾವೆಯೂ ಇಲ್ಲ. ಅವನ ಹೃದಯವು ಸತ್ಯವಿಶ್ವಾಸದಿಂದ ಕೂಡಿಲ್ಲ. ಬದಲು ಹಟ ಮತ್ತು ಏಕಪಕ್ಷೀಯ ಹಾಗೂ ದೇವಭಕ್ತಿಯಿಂದ ಕೂಡದೆ ಇಂತಹ ಮಾತುಗಳನ್ನು ಸೃಷ್ಟಿಸುತ್ತಿದ್ದಾನೆ. ಅದರ ಮೇಲೆ ಸ್ವತಃ ಅವನಿಗೆಯೇ ತೃಪ್ತಿಯಿಲ್ಲ. ಹೀಗಿರುವಾಗ ಈ ಸರ್ವ ಸಾಮಾರ್ಥ್ಯ ಹೊಂದಿದ ಭಗವಂತನೇ ಒಂದು ವರ್ಷದೊಳಗೆ ತನ್ನ ಶಿಕ್ಷೆಯನ್ನು ಅವತರಿಸು. ಯಾವ ವ್ಯಕ್ತಿ ಸತ್ಪಥದಲ್ಲಿದ್ದಾನೋ ಅವನಿಗೆ ಸಹಕರಿಸು. ಅಂತೆಯೇ ಆ ವ್ಯಕ್ತಿಯ ಮೇಲೆ ಯಾರು ಸತ್ಯವನ್ನು ಬೇಕಂತಲೂ ಮರೆಮಾಚುತಿದ್ದಾನೆ. ಸತ್ಯದ ಶತ್ರುವಾಗಿದ್ದಾನೆ. ಅವನಿಗೆ ದುಃಖದಲ್ಲಿ ತಳ್ಳಿಬಿಡು. ಏಕೆಂದರೆ ಎಲ್ಲ ಸಾಮರ್ಥ್ಯ ಮತ್ತು ನ್ಯಾಯ ಮತ್ತು ನ್ಯಾಯಾಲಯ ನಿನ್ನ ಕೈಯಲ್ಲಿದೆ. ಆಮಿನ್ ಯಾ ರಬ್ಬುಲ್ ಆಲಮೀನ್ (ಓ ಸರ್ವ ಲೋಕಗಳ ಪರಿಪಾಲಕನೆ ಈ ಪ್ರಾರ್ಥನೆಯು ಸ್ವೀಕರಿಸು) (ಸುರ್ಮ ಚಶ್ಮಾ ಆರ್ಯ ರೂಹಾನಿ ಖಝಾಯೀನ್, ಸಂಪುಟ–2, ಪುಟ–302)

ಪ್ರತಿಸ್ಪರ್ಧಿ ಆರ್ಯ ಸಾಹೇಬರುಗಳಿಂದ ಘೋಷಿಸಲ್ಪಡುವ ವಿಷಯ:

ನಾನು ಇಂತಹವನು ತಂದೆ ಇಂತಹವನು ಆಣೆ ಮಾಡಿ ವಚನ ಬದ್ಧವಾಗಿ ಹೇಳುತ್ತೇನೆ. ನಾನು ಪ್ರಾರಂಬದಿಂದ ಕೊನೆಯ ತನಕ ಈ ಪತ್ರಿಕೆ "ಸುರ್ಮ ಚಶ್ಮಾ ಆರ್ಯ" ಓದಿಕೊಂಡಿದ್ದೇನೆ ಮತ್ತು ಅದರ ಪುರಾವೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೆನೆ. ನನ್ನ ಹೃದಯದ ಮೇಲೆ ಆ ಪುರಾವೆಗಳು ಯಾವ ಪರಿಣಾಮವನ್ನು ಬೀರಲಿಲ್ಲ. ನಾನು ಅದನ್ನು ಸತ್ಯವೆಂದು ಭಾವಿಸುವುದಿಲ್ಲ. ನಾನು ನನ್ನ ಪರಮೇಶ್ವರನ ಮೇಲೆ ಆಣೆ ಹಾಕಿ ಹೇಳುತ್ತೇನೆ. ವೇದಗಳಲ್ಲಿ ಬರೆದದ್ದೆಲ್ಲದರ ಮೇಲೆ ನನಗೆ ದೃಢ ವಿಶ್ವಾಸವಿದೆ. ನನ್ನ ಆತ್ಮ ಮತ್ತು ಜೀವದ ಪರಿಪಾಲಕ. ಅರ್ಥಾತ್ ಜನ್ಮದಾತ ಯಾರೂ ಇಲ್ಲ. ಅಂತೆಯೇ ನನ್ನ ಶರೀರ ಸಹ ಯಾರು ಸೃಷ್ಟಿಸಿಲ್ಲ. ನಾನು ಪರಮೇಶ್ವರನ ಹಾಗೆ ಸ್ವಯಂ ಅಸ್ತಿತ್ವ ಹೊಂದಿದ್ದೇನೆ ಮತ್ತು ಪುರಾತನವು ಅನಾದಿಯೂ ಆಗಿರುತ್ತೇನೆ. ನನ್ನ ಆತ್ಮ ಮತ್ತು ಶರೀರದ ಅಸ್ತಿತ್ವ ಯಾರ ಆಶ್ರಯವು ಪಡೆದಿಲ್ಲ. ಬದಲು ಪುರಾತನ ಕಾಲದಿಂದಲೂ ಈ ಎರಡೂ ಭಾಗಗಳು ನನ್ನ ಅಸ್ತಿತ್ವದಲ್ಲಿ ಸ್ವಯಂ ಸ್ಥಾಪಿತವಾಗಿವೆ. ಅಂತೆಯೇ ವೇದಗಳ ಈ ಶಿಕ್ಷಣದ ಮೇಲೆಯೂ ನನಗೆ ಸಂಪೂರ್ಣ ವಿಶ್ವಾಸವಿದೆ. ಶಾಶ್ವತವಾದ ಮುಕ್ತಿ ಯಾರಿಗೂ ಸಿಗುವುದಿಲ್ಲ. ಯಾವಾಗಲೂ ಮಾನದ ಜೊತೆಯಲ್ಲಿ ಅಪಮಾನದ ಚಕ್ರವು ತಿರುಗುತ್ತಿರುವುದು. ನಾನು ವೇದದ ಈ ಎಲ್ಲ ಶಿಕ್ಷಣಗಳ ಮೇಲೆ ವಿಶ್ವಾಸ ಹೊಂದಿರುತ್ತೇನೆ. "ಪರಮೇಶ್ವರನು ಒಂದು ಅಣು ಸಹ ಸೃಷ್ಟಿಸಲು ಸಾಧ್ಯವಿಲ್ಲ. ಕರ್ಮಗಳಲ್ಲದೆ ಯಾವ ವ್ಯಕ್ತಿಯ ಮೇಲೂ ಕರಣೆ ತೋರುವುದಿಲ್ಲ. ವೇದದೃಷ್ಟಿಯಿಂದ ಈ ಮಾತಿನ ಮೇಲೂ ನಾನು ವಿಶ್ವಾಸ ಹೊಂದಿರುತ್ತೇನೆ. ನಾಲ್ಕೂ ವೇದಗಳು ಅವಶ್ಯವಾಗಿ ಪರಮೇಶ್ವರನ ಗ್ರಂಥಗಳಾಗಿವೆ. ಅವು ಶಾಶ್ವತವೂ ಮತ್ತು ಪುರಾತನ ಕಾಲದಿಂದಲೂ ಲೋಕದಲ್ಲಿ ನಮ್ಮ ಆರ್ಯರಲ್ಲಿಯೇ ನಾಲ್ಕು ಋಷಿಗಳ ಮೇಲೆ ಅದು ಅಗ್ನಿ ಮತ್ತು ವಾಯು ಇತ್ಯಾದಿಯಾಗಿವೆ. ಅವತರಿಸುತ್ತಿದೆ. ಅದು ಎಂದೂ ಆರ್ಯೇತರರ ಮೇಲೆ ಅವತರಿಸಿಲ್ಲ. ಮತ್ತು ಎಂದೂ ನಮ್ಮ ಭಾಷೆ ಸಂಸ್ಕೃತ ಹೊರತಾಗಿ ಇತರ ಭಾಷೆಯಲ್ಲಿ ಅವತರಣ ಗೊಂಡಿಲ್ಲ. ನಮ್ಮ ದೇಶದ ಹೊರಗೆ ಸಾವಿರಾರು ಪ್ರವಾದಿಗಳು ಬಂದು ಹೋಗಿದ್ದಾರೆ ಮತ್ತು ಗ್ರಂಥಗಳು ತಂದಿರುವರು. ಅವರೆಲ್ಲ ಖಂಡಿತವಾಗಿಯೂ ಮೋಸಗಾರರು ಮತ್ತು ಅವರ ಗ್ರಂಥಗಳು ಕೃತಕ ಬರಹಗಳು ಎಂದು ಭಾವಿಸುತ್ತೇನೆ. ಮತ್ತು ದೃಢವಾಗಿ ನಂಬುತ್ತೇನೆ. ಅವೆಲ್ಲ ಪರದೇಶಗಳಲ್ಲಿ ಎಲ್ಲ ಸುಳ್ಳುಗಾರರೇ ಬಂದಿರುತ್ತಾರೆ. ಎಂದೂ ಒಬ್ಬರಾದರೂ ದೇವವಾಣಿ ಪಡೆದವರು, ಸತ್ಯವಂತರು ಬಂದಿಲ್ಲ. ಈ ಸತ್ಯವು ನಮ್ಮ ಆರ್ಯದೇಶದಲ್ಲಿ ವಿಶಿಷ್ಟವಾಗಿದೆ. ಅದುವೇ ಪರಮೇಶ್ವರನೊಂದಿಗೆ ಶಾಶ್ವತವಾದ ಸಂಬಂಧ ಹೊಂದಿದೆ. ಮತ್ತು ಮುಂದೆಯೂ ಸದಾ ಅದರೊಂದಿಗೆಯೇ ಇರುವುದು. ಅಂತೆಯೇ ನಾನು ಖುರ್‌ಆನ್ ಮತ್ತು ಅದರ ತತ್ವಗಳನ್ನು, ಶಿಕ್ಷಣಗಳನ್ನು ವೇದತತ್ವಗಳಿಗೆ ಮತ್ತು ಶಿಕ್ಷಣಗಳಿಗೆ ವಿರುದ್ಧವಾಗಿವೆ. ಅಪ್ಪಟ ತಪ್ಪು ಮತ್ತು ಮಿಥ್ಯವಾಗಿದೆ ಎಮದು ಭಾವಿಸುವನು. ಆದುದರಿಂದ ಓ ಪರಮೇಶ್ವರನೇ! ನೀನು ನಮ್ಮಿಬ್ಬರಲ್ಲಿ ಯಾರು ಸತ್ಯವಂತನೂ ಎಂದು ನಿರ್ಣಯ ನೀಡು. ಯಾರ ತತ್ವ ವಿಶ್ವಾಸ ಸುಳ್ಳು ಮತ್ತು ಅಪವಿತ್ರವಾಗಿದೆ ಅದನ್ನು ಅಪವಿತ್ರ ದೃಷ್ಠಿಯಿಂದ ಕಾಣವನೂ ಅವನನ್ನು ಅಪಮಾನಿತನನ್ನಗಿ ಮಾಡಿ ಸೋಲಿಸು. ನಮ್ಮಿಬ್ಬರಲಿ ಯಾರು ನಿನ್ನ ದೃಷ್ಠಿಯಲ್ಲಿ ಸುಳ್ಳುಗಾರನು ಮತ್ತು ಮೋಸಗಾರನೋ ಮತ್ತು ಅವನ ವಿಶ್ವಾಸಗಳು, ತತ್ವ ನಿನ್ನ ದೃಷ್ಠಿಯಲ್ಲಿ ಅಪಮಾನಜನಕವಾಗಿದೆ ತಿಳಿದು ಇಂತಹ ಕಾರ್ಯಕ್ಕೆ ಇಳಿದವನಾಗಿದೆ ಅವನನ್ನು ಓ ಪರಮೇಶ್ವರನೇ! ಅವರನ್ನು ಎಂತಹ ದುಃಖದಲ್ಲಿ ಮುಳುಗಿಸು ಮತ್ತು ಎಂತಹ ಶಾಪಗಳಿಗೆ ಗುರಿ ಮಾಡು ಎಂದರೆ ಅದರ ಅಪಮಾನದಿಂದ ಒಂದು ವರ್ಷದ ಅವಧಿಯು ಆ ಶಾಪದ ಪ್ರಭಾವದಿಂದ ವನಿಗೆ ಶಿಕ್ಷೆ ಪ್ರಕಟವಾಗಲಿ. ಓ ಪರಮೇಶ್ವರನೇ! ನೀನು ಹಾಗೆಯೇ ಮಾಡು. ಆಮೀನ್. (ಸುರ್ಮ ಚಶ್ಮಾ ಆರ್ಯ ರೂಹಾನಿ ಖಝಾಯೀನ್, ಸಂಪುಟ–2, ಪುಟ–30)

ಲಾಲಾ ಮುರಳಿಧರ ಸಾಹಿಬರಾಗಲಿ, ಆರ್ಯಸಮಾಜದ ಯಾವೋಬ್ಬನು ಸಹ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಮುಬಾಹಿಲ ಪಂಥಾಹ್ವಾನವನ್ನು ಸ್ವೀಕರಿಸಲಿಲ್ಲ. ಇನ್‌ಶಾಅಲ್ಲಾಹ್ ನಾವು ಅವರ ಇನ್ನೊಂದು ಬಹುಮಾನದ ಪಂಥಾಹ್ವಾನದೊಂದಿಗೆ ಹಾಜರಾಗುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 17 September 2020, Issue No. 36

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 35ರ ವರದಿಯ ಉಳಿದ ಭಾಗ)**

ಈ ಮಸೀದಿಯ ಸ್ಥಳದ ಕುರಿತು ಹೇಳಲಾಯಿತು. ಇಲ್ಲಿ ಒಮದು ಸೂಪರ್ ಮಾರ್ಕೆಟ್ ಆಗಿದ್ದಿತು. ಒಂದು ಸೂಪರ್ ಮಾರ್ಕೆಟ್‌ನಲ್ಲಿ ಜನರು ಗ್ರೊಸರಿ ಖರೀದಿಸಲು, ಶಾಪಿಂಗ್ ಮಾಡಲು ಮತ್ತು ವಿವಿಧ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಬರುತ್ತಾರೆ ಮತ್ತು ಹಣ ಖರ್ಚು ಮಾಡುತ್ತಾರೆ. ಆದರೆ ಈ ಸೂಪರ್ ಮಾರ್ಕೆಟ್‌ನ್ನು ಈಗ ಮಸೀದಿಯಲ್ಲಿ ಪರಿವರ್ತಿಸಲಾಗಿದೆ. ಆದರೆ ಇದರಲ್ಲಿ ಲೌಕಿಕ ಮತ್ತು ಭೌತಿಕ ವಸ್ತುಗಳು ಸಿಗಲಾರದು. ಬದಲು ಇದೊಂದು ಅಲ್ಲಾಹನ ಗೃಹವಾಗಿದೆ. ಆ ಅಲ್ಲಾಹನ ಗೃಹ ಅವನು ಹೇಳಿದನು. ನನ್ನ ಆರಾಧನೆಯನ್ನು ಮಾಡಿರಿ ಮತ್ತು ಉನ್ನತ ನಡತೆ ಮೌಲ್ಯಗಳನ್ನು ಎತ್ತಿ ಹಿಡಿಯಿರಿ. ತಮ್ಮ ನೆರೆಹೊರೆಯರ ಹಕ್ಕುಗಳನ್ನು ನೀಡಿರಿ. ಶಾಂತಿ ಮತ್ತು ಪ್ರೀತಿಯ ಸಂಸ್ಕೃತಿಯನ್ನು ಬೆಳೆಸಿರಿ ಎಂದು. ಆದುದರಿಮದ ಈಗ ಈ ಸ್ಥಳದಲ್ಲಿ, ನಗರದ ಜನರಿಗೆ ಇಲ್ಲಿಯ ನವಸಿಗಳಿಗೆ ಆಧ್ಯಾತ್ಮಿಕ ಸಂಪತ್ತು ದೊರೆಯುವುದು, ಅಮೂಲ್ಯವಾದ ವಸ್ತುಗಳು ಬೆಲೆರಹಿತವಾಗಿ ದೊರೆಯುವುದು ಮತ್ತು ಇನ್‌ಶಾಲ್ಲಾಹ್ ಇಲ್ಲಿ ಬರುವವರು, ಇಲ್ಲಿ ವಾಸಿಸುವ ಅಹ್ಮದಿಯರು ಈ ಮಸೀದಿಗೆ ಬರುವ ಅಹ್ಮದಿಯರು ಉನ್ನತ ಮಟ್ಟದ ನೈತಿಕತೆ ಪದರ್ಶಿಸುವವರಾಗುವರು. ಪ್ರತಿಯೊಬ್ಬ ಅಹ್ಮದಿಗೆ ಇದು ನೆನಪಿಡಬೇಕಾಗಿದೆ. ಮಸೀದಿ ನಿರ್ಮಾಣನಂತ ನಮ್ಮ ಜವಾಬ್ಧಾರಿ ಇನ್ನು ಹೆಚ್ಚಾಗುತ್ತದೆ. ಮಸೀದಿಯ ಹಕ್ಕುಗಳನ್ನು ಪಾಲಿಸುವುದಾದರೆ ಮಸೀದಿಯಲ್ಲಿ ಬಂದು ಕೇವಲ ಅಲ್ಲಾಹನ ಆರಾಧನೆ ಸಾಕಾಗುವುದಿಲ್ಲ. ಬದಲು ಉತ್ತಮ ನಡತೆ ಪ್ರದರ್ಶಿಸುವುದೂ ಅನಿವಾರ್ಯವಾಗಿದೆ.

ಹುಝೂರ್ ಹೇಳಿದರು. ತಮ್ಮ ನೆರೆಹೊರೆಯ ಹಕ್ಕುಗಳನ್ನು ಪಾಲಿಸುವುದು ಅನಿವಾರ್ಯವಾಗಿದೆ. ಪ್ರೀತಿ ಮತ್ತು ಸ್ನೇಹದ ವಾತಾವರಣ ನಿರ್ಮಿಸುವವರು ಮೊದಲಿಗಿಂತ ಹೆಚ್ಚು ಅಗತ್ಯವಿದೆ. ಇಲ್ಲಿ ಬರುವ ಪ್ರತಿ ವ್ಯಕ್ತಿಗೂ ಈ ಭಾವನೆ ಮೂಡಿಸುವ ಅಗತ್ಯವಿದೆ. ಅಲ್ಲಾಹನ ನಾಮದಲಿ ಕಟ್ಟಿಸಿದ ಈ ಮನೆ ಕೇವಲ ಆರಾಧನೆಗೆ ಕಟ್ಟಿಸಿದ ಮನೆ ಅಲ್ಲ. ಬದಲಾಗಿ ಪ್ರೀತಿ ಸ್ನೇಹದ ಮಾತುಗಳು ನಮ್ಮಲ್ಲಿಗೆ ತಲುಪುವುದು.

ಪ್ರೀತಿ ಮತ್ತು ಸ್ನೇಹದ ಉಡುಗೊರೆಗಳು ನಮಗೆ ನೀಡಲಾಗುವುದು. ಇದುವೇ ಮಸೀದಿ ಕಟ್ಟುವ ಉದ್ದೇಶವಾಗಬೇಕಾಗಿದೆ ಮತ್ತು ಇದೆ.

ಹುಝೂರ್ ಹೇಳಿದರು. ಅಹ್ಮದಿ ಮುಸಲ್ಮಾನರಾದ ನಾವು, ಅಹ್ಮದಿ ಮುಸ್ಲಿಮ್ ಎಂದು ಹೇಳಲು ಕಾರಣ ಪ್ರಸಕ್ತ ಸಮಯದಲ್ಲಿ ಇರುವ ಮುಸ್ಲಿಮರಲ್ಲಿ ಹೆಚ್ಚಿನ ವರ್ಗಗಳ ಮೇಲೆ ಉಗ್ರವಾದ ಆರೋಪಗಳನ್ನು ಹಚ್ಚಲಾಗುತ್ತದೆ ಅಥವಾ ಕೆಲವರಿಂದ ಇಂತಹ ದುಷ್ಕೃತಗಳಾಗುತ್ತವೆ. ಆದರೆ ಅಹ್ಮದಿಯಾ ಜಮಾಅತ್ ಆ ಜಮಾಅತ್ ಆಗಿದೆ. ಅದು ಈ ಕಾಲದ ಮಸೀಹ್ ಮೌಊದ್ ಹಾಗೆ ಮಹದಿ ಮೌಊದ್‌ರನ್ನು ಮನ್ನಿಸುವ ಜಮಾಅತ್ ಆಗಿದೆ. ಅದು ನಮಗೆ ತಿಳಿಸಿದ್ದೇನೆಂದರೆ ಇಸ್ಲಾಂ ಪ್ರೀತಿ, ಸ್ನೇಹ ಮತ್ತು ಸೌಹಾರ್ಧತೆಯ ಶಿಕ್ಷಣ ನೀಡುತ್ತದೆ. ನನಗೆ ಹೇಳಲಾಗಿದೆ. ನೀವು ಆ ದೇವರನ್ನು ನಂಬುವವರಾಗಿದ್ದೀರಿ. ಆ ದೇವನ ಆರಾಧನೆ ಮಾಡುವವರಾಗಿದ್ದೀರಿ. ಅವನು ಪವಿತ್ರ ಖುರ್‌ಆನ್‌ನಲ್ಲಿ ಮೊದಲನೇ ಅಧ್ಯಾಯದಲ್ಲಿಯೇ ನಮಗೆ ಈ ಆದೇಶ ನೀಡಿದೆ. ನನು ಸರ್ವಲೋಕಗಳ ಪರಿಪಾಲಕನಾಗಿದ್ದನೆ" ಎಂದು. ನಾನು ಕೇವಲ ಮುಸ್ಲಿಮರ ರಬ್ (ಪರಿಪಾಲಕ) ನಲ್ಲ. ನಾನು ಯಹೂದ್ಯರ ರಬ್ಬ್ ಆಗಿರುತ್ತೆನೆ. ನಾನು ಇತರ ಧರ್ಮಗಳನ್ನು ನಂಬುವವರ ರಬ್ ಆಗಿರುತ್ತೇನೆ. ಅಷ್ಟೇ ಅಲ್ಲ ನಾನು ಇಡೀ ಸೃಷ್ಟಿಯ ರಬ್ ಆಗಿದ್ದೇನೆ. ಆದುದರಿಂದ ಪೋಷಿಸುವ ಈ ಗುಣ ನಮಗೆ ಕಲಿಸುವುದೇನೆಂದರೆ ಅಲ್ಲಾಹನು ಎಲ್ಲರಿಗೂ ಪೋಷಿಸುವವನಾಗಿದ್ದಾನೆ ಮತ್ತುಎಲ್ಲರಿಗೂ ಜೀವನ ಸಾಮಗ್ರಿಗಳನ್ನು ಒದಗಿಸುವವನಾಗಿದ್ದಾನೆ ಮತ್ತು ಎಲ್ಲರಿಗೂ ಜೀವ ನೀಡುವವನಾಗಿದ್ದಾನೆ.

ಆದುದರಿಂದ ನಾವು ಆ ಅಲ್ಲಾಹನ ಆರಾಧನೆ ಮಾಡುವವರಾಗಿದ್ದೇವೆ. ಅವನು ಸರ್ವರನ್ನು ಪೋಷಿಸುವವನಾಗಿದ್ದನೆ. ಹೀಗಿರುವಾಗ ಒಬ್ಬ ನಿಜವಾದ ಅಹ್ಮದಿಯ ವಿಶೇಷತೆಯು ಆಗ ಮಾತ್ರ ಸಾರ್ಥಕವಾಗುವುದು. ಅವನು ಈ ಗುಣ ವಿಶೇಷತೆಯ ಮೇರೆಗೆ ಸ್ವಯಂ ನಡೆದುಕೊಂಡು ತನ್ನ ನೆರೆಹೊರೆಯವರಿಗೂ ಈ ಭಾವನೆ ಮೂಡಿಸಬೇಕು. ನನ್ನಿಂದ ನಿಮಗೆ ಏನು ಹಾನಿ ಆಗದು. ಬದಲಾಗಿ ನಿಮಗೆ ನನ್ನ ಸಹಾಯದ ಅವಶ್ಯಕತೆ ಉಂಟಾದರೆ ಯಾವತ್ತೂ ನಿಮ್ಮ ಸಹಾಯಕ್ಕೆ ಸಿದ್ಧನಾಗಿರುತ್ತೇನೆ. ನಾನು ನಿಮಗೆ ಎಲ್ಲ ರೀತಿಯ ಸೇವೆ ಮಾಡಲು ಸಿದ್ಧನಾಗಿರುವೆನು. ನಿಮ್ಮ ಪೋಷಣೆ ನನ್ನ ಅಲ್ಲಾಹನ ಕಾರ್ಯವಾಗಿದೆ. ನನ್ನಲ್ಲಿ ಸಾಮರ್ಥ್ಯವಿದ್ದಲ್ಲಿ ಅದಕ್ಕೂ ಮತ್ತು ಪ್ರತಿ ಅನಾಥನಿಗೂ, ಪ್ರತಿ ರೋಗಿಗೂ, ಪ್ರತಿ ಅಗತ್ಯ ಉಳ್ಳವನಿಗೂ ಮುಂದೆ ಬರುವೆನು.

ಆದ್ದರಿಂದ ನಾವು ಅಲ್ಲಾಹನನ್ನು ರಬ್ಬುಲ್ ಆಲಮೀನ್ ಎಂದು ಹೇಳುವವರಾಗಿದ್ದೇವೆ ಎಂದ ಮೇಲೆ, ಅಲ್ಲಾಹನು ಹೇಳುವನು. ನನ್ನನ್ನು ನಂಬುವವರಾದರೆ ನನ್ನ ಗುಣಗಳನ್ನು ಅಳವಡಿಸಿಕೊಳ್ಳಿರಿ. ಅಂದರೆ ಆ ಗುಣಗಳನ್ನು ಸಹ ನಾವು ರೂಢಿಸಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ನಾವು ನಿಜವಾದ ಮುಸ್ಲಿಮರಾಗುತ್ತೇವೆ. ಅಲ್ಲಾಹನ ಪ್ರವಾದಿ, ಇಸ್ಲಮ್ ಮತದ ಸ್ಥಾಪಕರು ಹಝ್ರತ್ ರಸೂಲುಲ್ಲಾಹ್(ಸ) ನಮಗೆ ಹೇಳಿದರು. ಜನರ ಸೇವೆಗೆ ಮುಂದಾಗಿರಿ. ಅವರು ಪ್ರವಾದಿತ್ವದ ದಾವೆಗಿಂತ ಮುಂಚೆ ಮಕ್ಕದಲ್ಲಿ ಮಾನವೀಯ ಸೇವೆಯ ದೃಷ್ಟಿಯಿಂದ ಒಂದು ಸಂಘಟನೆ ಸ್ಥಾಪಿಸಿದರು. ಕೆಲವು ಒಳ್ಳೆಯ ಜನರು ಒಟ್ಟಾದರು. ಅವರು ಹೇಳಿದರು. ನಾವು ಸೇವೆ ಮಾಡುವೆವು. ಜನರ ಅಗತ್ಯಗಳನ್ನು ಪೂರೈಸುವೆವು ಜನರ ದು:ಖಗಳನ್ನು ದೂರ ಮಾಡುವೆವು ಆಗ ಅವರು ಅವರೊಂದಿಗೆ ಭಾಗವಹಿಸಿದರು. ಅಲ್ಲಾಹನು ಯಾವಾಗ ಅವರಿಗೆ ನುಬುವ್ವತ್ ಪದವಿ ದಯಪಾಲಿಸಿದಾಗ ಅದಕ್ಕಿಂತ ಹೆಚ್ಚು ಮಾನವೀಯತೆಯ ಸೇವೆ ಮಾಡುವವರಾದರು. ಆಗಲೂ ಒಂದು ಸಂದರ್ಭದಲ್ಲಿ ಹೇಳಿದರು. ಅದಾಗ್ಯೂ ಈಗ ನಾನು ಪ್ರವಾದಿಯಾಗಿದ್ದೇನೆ. ನನ್ನ ಅನುಯಾಯಿಗಳು ಮಾನವೀಯತೆಯ ಸೇವೆ ಮಾಡುತ್ತಿದ್ದಾರೆ. ಆದರೂ ಇಸ್ಲಾಮಿಗಿಂತ ಮುಂಚೆ ಸ್ಥಾಪಿತವಾದ ಆ ಸಂಘಟನೆ ಅದರಲ್ಲಿ ಅಮುಸ್ಲಿಮರು ಸೇರಿದ್ದಾರೆ. ನನ್ನನ್ನು ಕರೆದರೆ ನಾನು ಸಂತೋಷದಿಂದ ಆ ಸಂಘಟನೆಯೊಮದಿಗೆ ಸೇರಿ ಮಾನವೀಯತೆಯ ಸೇವೆ ಮಾಡುವೆನು. ಈ ಸ್ಥಾನವಾಗಿದೆ. ಒಬ್ಬ ಮುಸ್ಲಿಮನದ್ದು. ಒಬ್ಬ ನಿಜವಾದ ಮುಸ್ಲಿಮನದ್ದು. ಒಬ್ಬ ಅಹ್ಮದಿ ಮುಸ್ಲಿಮನದ್ದು. ಅವನು ಎಂದೆಂದೂ ಮಾನವೀಯತೆಯ ಸೇವೆಗೆ ಆಧ್ಯತೆ ನೀಡುವವನಾಗುತ್ತಾನೆ. ಅದಲ್ಲದೆ ಕೆಲವು ಕಡೆ ಅಲ್ಲಾಹನು ಹೀಗೂ ನುಡಿದಿರುವನು. ನಿಮ್ಮ ಆರಾಧನೆಗಳು ಕೆಲವೊಮ್ಮೆ ಮಾನವೀಯತೆಯ ಸೇವೆಗಳ ಮುಂದೆ ಯಾವ ಸ್ಥಾನವು ಹೊಂದಿರುವುದಿಲ್ಲ. ಅಥವಾ ನಿಮ್ಮ ಆರಾಧನೆಗಳು ಮಾನವೀಯತೆಯ ಸೇವೆಯ ಮುಂದೆ ಅಲ್ಪ ಬೆಲೆಯದ್ದಾಗಿರುತ್ತದೆ. ಅಥವ ಕೆಲ ಸಂದರ್ಭಗಳಲ್ಲಿ ನಿಮಗೆ ಮಾನವೀಯತೆಯ ಸೇವೆ ಮಾಡಲು ಕರೆದರೆ, ಅಥವಾ ಯಾವುದೇ ಮನುಷ್ಯನ ದುಃಖವನ್ನು ತೊಲಗಿಸಲು ಕರೆದರೆ ನೀವು ಆರಾಧನೆಯನ್ನು ಬಿಟ್ಟು ಮೊದಲು ತಮ್ಮ ಸಹೋದರನ ದುಃಖವನ್ನು ದೂರ ಮಾಡಿರಿ. ಇದಾಗಿದೆ ನಮ್ಮ ಶಿಕ್ಷಣ ನಿಜವಾದ ಮುಸ್ಲಿಮನಿಗೆ, ಮಸೀದಿಯಲ್ಲಿ ಆರಾಧನೆಗೆ ಬರುವವರಿಗೆ ನಡೆದುಕೊಳ್ಳಲು ಈ ಶಿಕ್ಷಣ ನೀಡಲಾಗಿದೆ.

ಹುಝೂರ್ ಹೇಳಿದರು. ಮೇಯರ್ ಸಾಹಿಬ್ ಇಲ್ಲಿ ಭಾಷಣ ಮಾಡಿದರು. ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೆನೆ. ಅವರು ಮತ್ತು ಇಲ್ಲಿಯ ಕೌನ್ಸಿಲ್, ಇಲ್ಲಿಯ ರಾಜಕೀಯ ಮುಖಂಡರು ಈ ಮಸೀದಿಯ ಸ್ಥಾಪನೆಗೆ ತುಂಬ ಶ್ರಮವಹಿಸಿದ್ದಾರೆ. ಕೇವಲ ಇಲ್ಲಿಯ ವ್ಯವಸ್ಥಾಪಕರಿಂದ ಅದು ಸಾಧ್ಯವಾಗುತ್ತಿರಲಿಲ್ಲ. ನಮ್ಮ ನೆರೆಹೊರೆಯವರು, ಸ್ಥಳಿಯ ಜನರು ಅದರಲ್ಲಿ ಭಾಗವಹಿಸದೆ ಇದ್ದರೆ ಈ ಕೆಲಸವಾಗುತ್ತಿರಲಿಲ್ಲ. ಆದುದರಿಂದ ನಾನು ಅದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನೀವು ಮಸೀದಿಯ ನಿರ್ಮಾಣ ಕಾರ್ಯದಲ್ಲಿ, ಅದರ ಸ್ಥಾಪನೆಯಲ್ಲಿ ಸಹಾಯ ಮಾಡಿದಿರಿ. ಒಂದು ಮನೆ ಅಹ್ಮದಿಯರಿಗೋಸ್ಕರ ಅಲ್ಲಾಹನ ಆರಾಧನೆ ಮಾಡಲು ಒದಗಿಸಿಕೊಟ್ಟಿದ್ದೀರಿ. ಇಲ್ಲಿ ಒಟ್ಟುಗೂಡಿ ಸೇರಿ ಮಾನವೀಯತೆಯ ಸೇವೆಗಳ ಯೋಜನೆ ರೂಪಿಸಲು ನೆರವಗಿದ್ದೀರಿ. ಇಲ್ಲಿಯ ನಾಗರಿಕರ ಸೇವೆ ಮಾಡಲು ತನ್ನ ಕಾರ್ಯಯೋಜನೆ ಸಿದ್ಧಗೊಳಿಸಲು ಮತ್ತು ಇಲ್ಲಿ ಬಂದು ಸಮಾರಂಭಗಳನ್ನು ನಡೆಸಲು ಸ್ಥಳ ಮಾಡಿಕೊಟ್ಟಿದ್ದೀರಿ.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.